ಸೋಮವಾರ, ಅಕ್ಟೋಬರ್ 2, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಟೆನಿಸ್ ಪ್ರೀಮಿಯರ್ ಲೀಗ್ ಸೀಸನ್ 5 ಹರಾಜು ಕಾರ್ಯಕ್ರಮದಲ್ಲಿ ಗಮನಸೆಳೆದ ಬಾಲಿವುಡ್ ನಟಿ ತಾಪ್ಸಿ ಪನ್ನು



ಭೂಮಿಯ ಪ್ರಭಾವ ವಲಯ ದಾಟಿದ 'ಆದಿತ್ಯ' ನೌಕೆ

ನವದೆಹಲಿ (ಪಿಟಿಐ): ಸೂರ್ಯನ ಅಧ್ಯಯನ ನಡೆಸಲಿರುವ ಆದಿತ್ಯ ಎಲ್-1 ನೌಕೆಯು ಭೂಮಿಯ ಪ್ರಭಾವ ವಲಯವನ್ನು ದಾಟಿ ಸೂರ್ಯನತ್ತ ಯಶಸ್ವಿಯಾಗಿ ಪಯಣ ಆರಂಭಿಸಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

'ಚಂದ್ರಯಾನ 3'ರ ಲ್ಯಾಂಡರ್ ಮತ್ತು ರೋವರ್ ಜೊತೆ ಮತ್ತೆ ಸಂಪರ್ಕ ಸಾಧಿಸುವ ಪ್ರಯತ್ನದಲ್ಲಿ ಇಸ್ರೊ ವಿಜ್ಞಾನಿಗಳು ನಿರಾಶೆ ಅನುಭವಿಸಿರುವ ಬೆನ್ನಲ್ಲೇ, ಆದಿತ್ಯ ಎಲ್1 ನೌಕೆಯು ಭೂಮಿ ಮತ್ತು ಸೂರ್ಯನ ನಡುವಿನ ಲಗ್ರಾಂಜಿಯನ್ ಬಿಂದು ಎಲ್1 ಕಡೆಗೆ ಪ್ರಯಾಣ ಆರಂಭಿಸಿದೆ.

ಸೆಪ್ಟೆಂಬರ್ 2ರಂದು ಸೂರ್ಯನ ಅಧ್ಯಯನಕ್ಕೆ ನೌಕೆಯನ್ನು ಉಡ್ಡಯನ ಮಾಡಲಾಗಿತ್ತು. ಪ್ರಸ್ತುತ ನೌಕೆಯು ಭೂಮಿಯಿಂದ 9.20 ಲಕ್ಷ ಕಿ.ಮೀ ದೂರವನ್ನು ಪೂರ್ಣಗೊಳಿಸಿದೆ. ಸೂರ್ಯನೆಡೆಗಿನ ಒಟ್ಟಾರೆ ಪಯಣದಲ್ಲಿ ಅರ್ಧದಷ್ಟನ್ನು ಪೂರ್ಣಗೊಳಿಸಿದೆ ಎಂದು ಇಸ್ರೊ ತಿಳಿಸಿದೆ.

ಇಸ್ರೊ ಎರಡನೇ ಬಾರಿಗೆ ಭೂಮಿಯ ಗೋಳದ ಪ್ರಭಾವದಿಂದ ಬಾಹ್ಯಾಕಾಶ ನೌಕೆಯೊಂದನ್ನು ಯಶಸ್ವಿಯಾಗಿ ಹೊರಗೆ ಕಳುಹಿಸಿದ ಶ್ರೇಯಕ್ಕೆ ಪಾತ್ರವಾಗಿದೆ.

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಮಟ್ಟದ ವಿಶೇಷ ಮಹಾಸಭೆಯಲ್ಲಿ ನಿರ್ಣಯ

ಬೈಲಾದ 48 ಅಂಶಗಳ ತಿದ್ದುಪಡಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಕೊಪ್ಪಳ: ರಾಜ್ಯ ಸರ್ಕಾರಿ ನೌಕರರ ಸಂಘದ ಬೈಲಾದಲ್ಲಿನ 48 ಅಂಶಗಳಿಗೆ ತಿದ್ದುಪಡಿ ಮಾಡಿ ಇಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ವಿಶೇಷ ಮಹಾಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಪಡೆಯಲಾಯಿತು.

ಸಂಘದ ಶಾಖೆಗಳಲ್ಲಿ ಗಂಭೀರ ಹಣಕಾಸಿನ ಅವ್ಯವಹಾರಗಳು ಕಂಡುಬಂದಲ್ಲಿ ಸಮಿತಿಯ ಸದಸ್ಯರನ್ನು ಆರು ವರ್ಷ ಮೀರದಂತೆ ಉಚ್ಚಾಟನೆ ಮಾಡಬಹುದು ಎನ್ನುವ ಅಂಶ ಇತ್ತು. ಈ ಅಂಶದ ಜೊತೆಗೆ ಈಗ ಉಚ್ಚಾಟಿತ ಸದಸ್ಯನ ಮನವಿಯಂತೆ ಆತನ ವರ್ತನೆಯಲ್ಲಿ ಸುಧಾರಣೆ ಕಂಡುಬಂದರೆ ರಾಜ್ಯ ಘಟಕದ ಅಧ್ಯಕ್ಷರು ಉಚ್ಚಾಟನೆಯ ತೀರ್ಮಾನವನ್ನು ಪುನರ್ ಪರಿಶೀಲಿಸಬಹುದು ಎನ್ನುವ ಅಂಶ ಸೇರಿಸಲಾಗಿದೆ.

ರಾಜ್ಯ ಘಟಕದ ಅಧ್ಯಕ್ಷರು ಸಂಘದ ಕಾರ್ಯಚಟುವಟಿಕೆ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡಬಹುದು. ಉಳಿದ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆ ಹಾಗೂ ಹೇಳಿಕೆ ನೀಡುವಂತಿಲ್ಲ ಎನ್ನುವ ಹೊಸ ಅಂಶ ಸೇರಿಸಲಾಗಿದೆ. ಪ್ರತಿ ವರ್ಷ ಸದಸ್ಯರ ಪಟ್ಟಿಯನ್ನು ಸಿದ್ಧಪಡಿಸಿ ನಿರ್ವಹಣೆ ಮಾಡಬೇಕು ಎಂದಿದ್ದ ನಿಯಮವನ್ನು ಮಾರ್ಪಾಡಿಸಿ ಚುನಾವಣೆ ನಡೆಯುವ ಸಂದರ್ಭದಲ್ಲಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು ಎಂದು ಬದಲಿಸಲಾಗಿದೆ. ಸಂಘದ ಸದಸ್ಯನ ವಿರುದ್ಧ ಆರೋಪಗಳ ಕೇಳಿ ಬಂದಾಗ ಅವರಿಂದ ವಿವರಣೆ ಕೇಳಲು ಇದ್ದ ಒಂದು ತಿಂಗಳ ಅವಕಾಶವನ್ನು ಮೂರು ತಿಂಗಳಿಗೆ ವಿಸ್ತರಿಸಲಾಗಿದೆ.

'ಕರ್ನಾಟಕ ಹೈಕೋರ್ಟ್ ಮತ್ತು ವಿಭಾಗೀಯ ಪೀಠಗಳ ನೌಕರರು ನಮ್ಮ ಸಂಘದಲ್ಲಿ ಸದಸ್ಯತ್ವ ಹೊಂದಲು ಅವಕಾಶವಿಲ್ಲ ಎಂದು ನಿಯಮವೇ ಇದೆ. ಹೀಗಾಗಿ ಅವರಿಗೆ ಸದಸ್ಯತ್ವ ಕೊಡಲು ಬರುವುದಿಲ್ಲ. ಜಿಲ್ಲಾ ಸಿವಿಲ್ ನ್ಯಾಯಾಲಯಗಳ ನೌಕರರು ನಮ್ಮಲ್ಲಿ ಸದಸ್ವತ್ವ ಹೊಂದಬಹುದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಸಭೆಯ ಬಳಿಕ ತಿಳಿಸಿದರು.

'ಕಳೆದ ವರ್ಷ ಶಿವಮೊಗ್ಗದಲ್ಲಿ ನಡೆದಿದ್ದ ವಿಶೇಷ ಮಹಾಸಭೆಯಲ್ಲಿ ಬೈಲಾವನ್ನು ಸಮಗ್ರ ತಿದ್ದುಪಡಿ ಮಾಡಲಾಗಿತ್ತು. ಅದರಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿ ಈಗ ಸರ್ವಾನುಮತದಿಂದ ಒಪ್ಪಿಗೆ ಪಡೆಯಲಾಗಿದೆ. ಬೈಲಾದಲ್ಲಿ ವಿಷಯಗಳ ಬಗ್ಗೆ ನಿಖರವಾಗಿ ಸದಸ್ಯರಿಗೆ ತಿಳಿಸಲು ಕ್ರಮ ವಹಿಸಲಾಗಿದೆ' ಎಂದರು.

'ಸಂಘದ ಸದಸ್ಯತ್ವ ಶುಲ್ಕ ಎನ್ನುವ ಪದ ತೆಗೆದು ಹಾಕಿ ಈಗ ನಿರ್ದಿಷ್ಟವಾಗಿ ₹ 200 ಶುಲ್ಕ ಎಂದು ನಮೂದಿಸಲಾಗಿದೆ. ಸಂಘದ ಜಿಲ್ಲಾಧ್ಯಕ್ಷರಿಗೆ ತಾಲ್ಲೂಕು ಸಂಘಟನೆಗಳ ಮೇಲೆ ನಿಯಂತ್ರಣಕ್ಕೆ ಅಧಿಕಾರ ಕೊಡಲಾಗಿದೆ' ಎಂದು ಹೇಳಿದರು.

ಸಭೆಯಲ್ಲಿ ವಿವಿಧ ಜಿಲ್ಲೆಗಳ ಜಿಲ್ಲಾಧ್ಯಕ್ಷರು, ಸರ್ಕಾರಿ ನೌಕರರು ಪಾಲ್ಗೊಂಡಿದ್ದರು. ಹಲವು ನೌಕರರು ವರ್ಚುವಲ್ ವೇದಿಕೆ ಮೂಲಕ ಹಾಜರಾಗಿದ್ದರು.



ಕೊಪ್ಪಳದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ವಿಶೇಷ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ನೌಕರರು –ಪ್ರಜಾವಾಣಿ ಚಿತ್ರ



7ನೇ ವೇತನ ಆಯೋಗ ಶಿಫಾರಸು ಮಾಡುತ್ತಿದ್ದಂತೆಯೇ ರಾಜ್ಯ ಸರ್ಕಾರ ವರದಿಯನ್ನು ಜಾರಿ ಮಾಡುತ್ತದೆ ಎನ್ನುವ ವಿಶ್ವಾಸವಿದೆ. ಇಲ್ಲವಾದರೆ ಸರ್ಕಾರದ ಜೊತೆ ಚರ್ಚಿಸುತ್ತೇವೆ

ಸಿ.ಎಸ್.ಷಡಾಕ್ಷರಿ, ಸಂಘದ ರಾಜ್ಯ ಘಟಕದ ಅಧ್ಯಕ್ಷ

ನೌಕರರಿಗೆ ₹ 1 ಕೋಟಿ ವಿಮೆ ಯೋಜನೆ

ಕೊಪ್ಪಳ: ಸರ್ಕಾರಿ ನೌಕರ ಅಕಾಲಿಕ ಮರಣ ಹೊಂದಿದರೆ ಅವರ ಕುಟುಂಬದವರಿಗೆ ₹ 1 ಕೋಟಿ ವಿಮೆ ನೀಡುವ ಯೋಜನೆ ರೂಪಿಸಲಾಗುತ್ತಿದೆ. ಈ ಕುರಿತು ನೌಕರ ವೇತನ ಪಡೆಯುವ ಬ್ಯಾಂಕ್‌ಗಳ ಜೊತೆಗೆ ಚರ್ಚಿಸಲಾಗಿದ್ದು, ತಾತ್ವಿಕ ಒಪ್ಪಿಗೆ ನೀಡಿವೆ. ಇದಕ್ಕೆ ನೌಕರರು ವಿಮೆ ಕಂತು ಪಾವತಿಸುವ ಅಗತ್ಯವಿಲ್ಲ. ಕೆಲ ದಿನಗಳಲ್ಲಿ ಈ ಯೋಜನೆ ಕುರಿತು ಪೂರ್ಣ ಮಾಹಿತಿ ನೀಡಲಾಗುವುದು ಎಂದು ಷಡಾಕ್ಷರಿ ತಿಳಿಸಿದರು.

'ತುಮಕೂರಿನಲ್ಲಿ ಇದೇ ತಿಂಗಳಲ್ಲಿ ರಾಜ್ಯಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ನಡೆಯಲಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಕ್ರಿಮಿನಲ್ ಆರೋಪವುಳ್ಳವರ ಆಯ್ಕೆ: ಕಾರಣ ನೀಡುವುದು ಕಡ್ಡಾಯ'

ಜೈಪುರ (ಪಿಟಿಐ): ಕ್ರಿಮಿನಲ್ ಮೊಕದ್ದಮೆಗಳು ಇರುವವರನ್ನು ಚುನಾವಣೆಗೆ ಅಭ್ಯರ್ಥಿಗಳಾಗಿ ಆಯ್ಕೆ ಮಾಡುವ ರಾಜಕೀಯ ಪಕ್ಷಗಳು ಇನ್ನು ಮುಂದೆ ಈ ಆಯ್ಕೆಗೆ ಕಾರಣಗಳನ್ನು ಸಾರ್ವಜನಿಕವಾಗಿ ನೀಡುವುದು ಕಡ್ಡಾಯವಾಗಲಿದೆ.

ಚುನಾವಣೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳು ಸದ್ಯ ತಮ್ಮ ಮೇಲಿರುವ ಕ್ರಿಮಿನಲ್ ಮೊಕದ್ದಮೆಗಳ ವಿವರಗಳನ್ನು ಪತ್ರಿಕಾ ಜಾಹೀರಾತುಗಳ ಮೂಲಕ ಪ್ರಕಟಿಸುವುದು ಕಡ್ಡಾಯವಾಗಿದೆ.

ಭಾನುವಾರ ಇಲ್ಲಿ, ರಾಜಸ್ಥಾನ ವಿಧಾನಸಭೆ ಚುನಾವಣೆಯ ಸಿದ್ಧತೆಗಳನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಈ ವಿಷಯ ತಿಳಿಸಿದರು.

'ಮುಕ್ತ ಮತ್ತು ನ್ಯಾಯಸಮ್ಮತವಾದ ಚುನಾವಣೆಯನ್ನು ನಡೆಸಲು ಆಯೋಗ ಬದ್ಧವಾಗಿದೆ. ಆದರೆ, ಮತದಾರರು ತಮ್ಮ ಹಕ್ಕು ಚಲಾಯಿಸುವುದನ್ನು ಕಡ್ಡಾಯಪಡಿಸುವ ಯಾವುದೇ ಪ್ರಸ್ತಾವ ಸದ್ಯ ಆಯೋಗದ ಮುಂದಿಲ್ಲ' ಎಂದು ತಿಳಿಸಿದರು.

ಶೇ 40 ಅಥವಾ ಅದಕ್ಕೂ ಹೆಚ್ಚಿನ ಅಂಗವಿಕಲತೆ ಉಳ್ಳವರು ಹಾಗೂ ವಯಸ್ಕರಾದ ಮತದಾರರಿಗೆ ಮನೆಯಿಂದಲೇ ಹಕ್ಕು ಚಲಾಯಿಸುವ ಸೌಲಭ್ಯವಿದೆ. ಮತದಾನದ ಪ್ರಮಾಣ ಹೆಚ್ಚಿಸುವುದು ಈ ಕ್ರಮದ ಉದ್ದೇಶವಾಗಿದೆ ಎಂದರು.



ಗಡಿ ಭಾಗದಲ್ಲಿ ನಗದು ಮತ್ತು ಮದ್ಯಸಾಗಣೆ ವಿರುದ್ಧ ಕಟ್ಟೆಚ್ಚರವಹಿಸಲು ಕಾನೂನು ಜಾರಿ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು. ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆಗೂ ಇದೇ ಸಂದರ್ಭದಲ್ಲಿ ಚರ್ಚಿಸಿದರು.

'ಸುಳ್ಳು ಜಾತಿ ಪ್ರಮಾಣಪತ್ರ: ಕ್ರಮದ ಮಾಹಿತಿ ಕೊಡಿ'

ಬೆಂಗಳೂರು: ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿರುವ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಪುತ್ರಿ ಎಂ.ಆರ್. ಚೇತನ ಸೇರಿದಂತೆ ನಾಲ್ವರ ಮೇಲೆ ಕೈಗೊಂಡಿರುವ ಕ್ರಮದ ಕುರಿತು ಮಾಹಿತಿ ನೀಡುವಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ (ಎಡಿಜಿಪಿ) ಸಮಾಜ ಕಲ್ಯಾಣ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಜಂಟಿ ಉಪ ನಿರ್ದೇಶಕರು ಪತ್ರ ಬರೆದಿದ್ದಾರೆ.

'ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಇತರೆ ಹಿಂದುಳಿದ ಜಾತಿ (ಮೀಸಲಾತಿ ಅಥವಾ ನೇಮಕಾತಿ ಇತರ) ಕಾಯ್ದೆ– 1990'ರ ಸೆಕ್ಷನ್ 4 ಎಫ್ ಅಡಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರು ಎಂ.ಆರ್. ಚೇತನ, ಎಂ.ಪಿ. ರೇಣುಕಾಚಾರ್ಯ ಅವರ ಸಹೋದರ ಎಂ.ಪಿ. ದಾರಕೇಶ್ವರಯ್ಯ, ಬಿ.ಎಂ. ವಾಗೀಶ್ ಮತ್ತು ವಾಗೀಶ್ ಅವರ ಪತ್ನಿ ಪುಷ್ಪಾ ಡಿ.ಎಂ. ಎಂಬವರ ಜಾತಿ ಪ್ರಮಾಣಪತ್ರಗಳನ್ನು ರದ್ದುಪಡಿಸಿ 2023ರ ಏಪ್ರಿಲ್ 19 ಮತ್ತು ಜೂನ್ 27ರಂದು ಆದೇಶ ಹೊರಡಿಸಿದ್ದರು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಇದೇ 30ರಂದು ನೀಡಿರುವ ಮೌಖಿಕ ಆದೇಶವನ್ನು ಉಲ್ಲೇಖಿಸಿ, ಈ ನಾಲ್ವರ ಜಾತಿ ಪ್ರಮಾಣಪತ್ರ ರದ್ದುಪಡಿಸಿ ಮಾಡಿದ ಆದೇಶವನ್ನೂ ಲಗತ್ತಿಸಿ ಎಡಿಜಿಪಿಗೆ ಪತ್ರ ಬರೆದಿರುವ ಜಂಟಿ ಉಪ ನಿರ್ದೇಶಕರು, ಈ ಆದೇಶಗಳ ಅನ್ವಯ ತೆಗೆದುಕೊಂಡ ಕ್ರಮದ ಮಾಹಿತಿ ನೀಡುವಂತೆ ಕೋರಿದ್ದಾರೆ.

ಅಫ್ಗಾನ್ ರಾಯಭಾರ ಕಚೇರಿ ಕಾರ್ಯ ಸ್ಥಗಿತ

ನವದೆಹಲಿ (ಎಎಫ್‌ಪಿ): ಭಾರತದಲ್ಲಿರುವ ಅಫ್ಘಾನಿಸ್ತಾನ ರಾಯಭಾರ ಕಚೇರಿ ತನ್ನ ಕಾರ್ಯಾಚರಣೆಯನ್ನು ಭಾನುವಾರದಿಂದ ಸ್ಥಗಿತಗೊಳಿಸಿದೆ.

ಭಾರತವು ಸೇರಿದಂತೆ ಜಗತ್ತಿನ ಹಲವು ದೇಶಗಳು ತಾಲಿಬಾನ್ ಸರ್ಕಾರಕ್ಕೆ ಮಾನ್ಯತೆ ನೀಡದ ಕಾರಣ ಹಲವು ದೇಶಗಳಲ್ಲಿನ ಅಫ್ಘಾನಿಸ್ತಾನದ ರಾಯಭಾರ ಕಚೇರಿಗಳು ಅತಂತ್ರವಾಗಿವೆ. ಈ ಹಿಂದೆ ಇದ್ದ ಸರ್ಕಾರ ನೇಮಿಸಿದ್ದ ರಾಜತಾಂತ್ರಿಕರು ತಮ್ಮ ರಾಯಭಾರ ಕಚೇರಿಗಳ ನಿಯಂತ್ರಣವನ್ನು ತಾಲಿಬಾನ್ ಸರ್ಕಾರಕ್ಕೆ ಒಪ್ಪಿಸಲು ನಿರಾಕರಿಸಿದ್ದಾರೆ. ಇದು ಬಿಕ್ಕಟ್ಟಿಗೆ ಕಾರಣವಾಗಿದೆ.



ಪ್ರತಿಮೆ ಸ್ವಚ್ಛತೆ ದಾವಣಗೆರೆಯ ರಾಮನಗರ ಬಳಿ ಇರುವ ಗಾಂಧಿ ಭವನದಲ್ಲಿ ಸೋಮವಾರ ಗಾಂಧಿ ಜಯಂತಿ ಕಾರ್ಯಕ್ರಮ ನಡೆಯಲಿದ್ದು, ಸ್ವಯಂ ಸೇವಕರೊಬ್ಬರು ಗಾಂಧೀಜಿ ನೇತೃತ್ವದ ದಂಡಿಯಾತ್ರೆಯ ಪ್ರತಿಮೆಗಳನ್ನು ಭಾನುವಾರ ಸ್ವಚ್ಛಗೊಳಿಸಿದರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ದಲಿತರ ಹತ್ಯೆ: 15 ದಿನಗಳ ಬಳಿಕ ಪೊಲೀಸರ ವರ್ಗ

ಕೌಶಾಂಬಿ (ಪಿಟಿಐ): ಉತ್ತರ ಪ್ರದೇಶದ ಕೌಶಾಂಬಿ ಜಿಲ್ಲೆಯ ಸಾಂದೀಪನ್ ಘಾಟ್‌ನಲ್ಲಿ ದಲಿತ ಕುಟುಂಬದ ಮೂವರ ಹತ್ಯೆ ನಡೆದು ಹದಿನೈದು ದಿನಗಳ ಬಳಿಕ ಪೊಲೀಸ್ ಠಾಣೆ ಅಧಿಕಾರಿ ಮತ್ತು ಹೊರಠಾಣೆಯ ಉಸ್ತುವಾರಿಯನ್ನು ಭಾನುವಾರ ವರ್ಗಾಯಿಸಲಾಗಿದೆ.

ಸಾಂದೀಪನ್ ಘಾಟ್ ಠಾಣೆಯ ಅಧಿಕಾರಿ ದಿಲೀಪ್ ಕುಮಾರ್ ಸಿಂಗ್ ಮತ್ತು ಹರ್ ರಾಯ್‌ಪುರ ಪೊಲೀಸ್ ಹೊರಠಾಣೆ ಉಸ್ತುವಾರಿ ಅನುರಾಗ್ ಸಿಂಗ್ ಅವರನ್ನು ವರ್ಗಾಯಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರ್ಗಾವಣೆಯಿಂದ ತೆರವಾಗಿದ್ದ ಠಾಣೆ ಅಧಿಕಾರಿ ಸ್ಥಾನಕ್ಕೆ ಭುವನೇಶ್ ಚೌಬೆ ನಿಯುಕ್ತಿಗೊಂಡಿದ್ದರೆ, ಸಬ್‌ಇನ್ಸ್‌ಪೆಕ್ಟರ್ ಶೈಲೇಂದ್ರ ಕುಮಾರ್ ಅವರಿಗೆ ಔಟ್‌ಪೋಸ್ಟ್‌ನ ಉಸ್ತುವಾರಿ ವಹಿಸಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದರು.

ಸೆಪ್ಟೆಂಬರ್ 14 ರಂದು ಜಮೀನು ವಿವಾದದ ಹಿನ್ನೆಲೆಯಲ್ಲಿ ದಲಿತ ಕುಟುಂಬದ ಮೂವರನ್ನು ಹತ್ಯೆ ಮಾಡಲಾಗಿತ್ತು. ಶಿವಶರನ್ (30), ಅವರ ಪತ್ನಿ ಬ್ರಿಜ್‌ಕಾಳಿ (25) ಮತ್ತು ಅವರ ಮಾವ ಹೋರಿಲಾಲ್ (60) ಅವರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಸಂತ್ರಸ್ತರು ಪಾಸಿ ಸಮುದಾಯಕ್ಕೆ ಸೇರಿದವರಾಗಿದ್ದರು.

ಮಕ್ಕಳಿದ್ದಾರೆ ಎಂಬ ಆರೋಪಕ್ಕೆ ಪ್ರಸನ್ನಾನಂದ ಶ್ರೀ ಪ್ರತಿಕ್ರಿಯೆ

'ಡಿಎನ್‌ಎ ಪರೀಕ್ಷೆಗೆ ಸಿದ್ಧ'

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ ಜಿಲ್ಲೆ): 'ನಾವು ವಾಲ್ಮೀಕಿ ಸಮುದಾಯಕ್ಕೆ ಸೇರಿಸುವುದು ದೃಢಪಟ್ಟಿದೆ. ನಮಗೆ ಮದುವೆ ಆಗಿಲ್ಲ, ಮಕ್ಕಳೂ ಇಲ್ಲ. ಈ ಕುರಿತ ಸಂಶಯ ನಿವಾರಣೆಗಾಗಿ ಡಿಎನ್‌ಎ ಪರೀಕ್ಷೆಗೆ ಒಳಪಡಲೂ ಸಿದ್ಧ' ಎಂದು ತಾಲ್ಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.



ಪ್ರಸನ್ನಾನಂದ ಶ್ರೀ

ಶ್ರೀಮಠ, ಗುರುಗಳು, ಧರ್ಮದರ್ಶಿಗಳ ಕುರಿತ ಆರೋಪಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಗುರುಪೀಠದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ನಾವು ತಪ್ಪು ಮಾಡಿದ ದಾಖಲೆಯನ್ನು ನೀಡಿದರೆ ಭಕ್ತರೇ ನಮ್ಮ ಬಗ್ಗೆ ನಿರ್ಧಾರ ಕೈಗೊಳ್ಳಬಹುದು' ಎಂದರು.

'ಸಮುದಾಯದವರೇ ಕೆಲವರು ನೀಡಿದ ದೂರನ್ನಾಧರಿಸಿ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ನಮ್ಮ ಜಾತಿ ಕುರಿತು ಸುದೀರ್ಘ ತನಿಖೆ ನಡೆಸಿದೆ. ನಮ್ಮ ಮನೆತನದವರ ಸಂಪ್ರದಾಯವನ್ನು ಕೂಲಂಕಷವಾಗಿ ಪರಿಶೀಲಿಸಿ ನಾವು ವಾಲ್ಮೀಕಿ ಸಮುದಾಯಕ್ಕೆ ಸೇರಿದವರೆಂದು ಅಧಿಕೃತವಾಗಿ ವರದಿ ನೀಡಿದ್ದಾರೆ' ಎಂದು ಸ್ಪಷ್ಟಪಡಿಸಿದರು.

'ಇನ್ನು ನಾವು ಸಂಸಾರಿಯಾಗಿದ್ದು, ನಮಗೆ ಮಕ್ಕಳಿವೆ ಎಂಬ ಆರೋಪ ನಿಜವಲ್ಲ. ಇದಕ್ಕಾಗಿ ಯಾವುದೇ ಆಸ್ಪತ್ರೆಗೆ ತೆರಳಿ ಡಿಎನ್‌ಎ ಪರೀಕ್ಷೆಗೆ ಒಳಪಡಲು ಸಿದ್ಧನಿದ್ದೇನೆ. ಆರೋಪ ಮಾಡಿದವರು ಮಕ್ಕಳನ್ನು ಕರೆತಂದು ಪರೀಕ್ಷೆಗೆ ಒಳಪಡಿಸಲಿ' ಎಂದ ಅವರು, 'ಬೇರೆ ಜಾತಿಗೆ ಸೇರಿದ ಚಾಲಕನನ್ನು ನೇಮಿಸಿಕೊಂಡಿದ್ದೇನೆ ಎಂದು ಆರೋಪಿಸುವವರು ಆ ಚಾಲಕನಿಂದ ಏನಾದರೂ ಲೋಪವಾಗಿದ್ದರೆ ತಿಳಿಸಿ' ಎಂದರು.

'ವಿವಿಧ ಪಕ್ಷಗಳ ನೇತೃತ್ವದ ಸರ್ಕಾರಗಳು ಗುರುಪೀಠದ ಅಭಿವೃದ್ಧಿಗೆ ಒಟ್ಟು ₹ 25 ಕೋಟಿ ಅನುದಾನ ನೀಡಿವೆ. ಅನುದಾನದ ಪ್ರಕಾರ ಕಾಮಗಾರಿ ನಡೆದಿದೆ. ಕೆಲವರು ಉದ್ದೇಶಪೂರ್ವಕ ನಮ್ಮ ಹಾಗೂ ಗುರುಪೀಠದ ವಿರುದ್ಧ ಪಿತೂರಿ ನಡೆಸಿದ್ದಾರೆ. ನನ್ನಿಂದಲೂ ಕೆಲವು ತಪ್ಪುಗಳು ನಡೆದಿರಬಹುದು' ಎಂದರು.

'ತನಿಖೆಯಿಂದ ಶ್ರೀಗಳು ವಾಲ್ಮೀಕಿ ಜಾತಿಗೆ ಸೇರಿದವರೆಂದು ದೃಢವಾಗಿದೆ. ಇನ್ನು ಶ್ರೀಗಳು ಮದುವೆ, ಮಕ್ಕಳ ಬಗೆಗಿನ ಆರೋಪಕ್ಕೆ ಸಂಬಂಧಿಸಿದಂತೆ ಡಿಎನ್‌ಎ ಪರೀಕ್ಷೆಗೆ ಒಳಪಡಲು ಸ್ವತಃ ಸ್ವಾಮೀಜಿಯೇ ಸಿದ್ಧರಿದ್ದಾರೆ. ಬೇರೆ ಜಾತಿಗೆ ಸೇರಿದ ಚಾಲಕನನ್ನು ನೇಮಿಸಿಕೊಂಡಿರುವುದು ತಪ್ಪಲ್ಲ. ಆತನಿಂದ ತಪ್ಪಾಗಿದ್ದರೆ ತಿಳಿಸಿರಿ' ಎಂದು ಗುರುಪೀಠದ ಧರ್ಮದರ್ಶಿ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಸಭೆಯಲ್ಲಿ ಕೋರಿದರು.

'ಸಾಮಾಜಿಕ ಜಾಲತಾಣದಲ್ಲಿ ಆಧಾರರಹಿತ ವಿಷಯಗಳನ್ನು ಹರಿಯಬಿಡಬಾರದು. ಅದರಿಂದ ನಮ್ಮ ಸಮುದಾಯದ ಗೌರವಕ್ಕೆ ಧಕ್ಕೆ ಬರುತ್ತದೆ. ಬೇರೆ ಸಮುದಾದಯವರು ಅಣಕಿಸುತ್ತಾರೆ. ಇತರ ಸಮುದಾಯದ ಧಾರ್ಮಿಕ ಕೇಂದ್ರಗಳಲ್ಲಿ ದೊಡ್ಡ ದೊಡ್ಡ ಲೋಪಗಳೇ ಆದರೂ ಅದನ್ನು ಅಲ್ಲಿನ ಭಕ್ತರು ಒಗ್ಗಟ್ಟಿನಿಂದ ಮುಚ್ಚಿ ಹಾಕುತ್ತಾರೆ' ಎಂದು ತಿಳಿಸಿದರು.

ಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ, ಧರ್ಮದರ್ಶಿಗಳಾದ ಶಾಂತಲಾ ರಾಜಣ್ಣ, ಡಾ.ಜಿ. ರಂಗಯ್ಯ, ಡಾ.ಕೆ.ಆರ್. ಪಾಟೀಲ್, ಮಲ್ಲಪ್ಪ ಕೆ., ಹರ್ತಿಕೋಟೆ ವೀರೇಂದ್ರಸಿಂಹ, ವೆಂಕಟರಮಣ, ವಾಲೇನಹಳ್ಳಿ ಮಹೇಶ, ಬಿ.ಶಿವಪ್ಪ, ರಾಜಾ ವೆಂಕಟಪ್ಪ ನಾಯಕ ರಮೇಶ್ ಎಚ್., ಕೆ.ಬಿ. ಮಂಜಪ್ಪ, ಕರಿಬಸಪ್ಪ ಇದ್ದರು.

'ಫಿಟ್‌ನೆಸ್ ಇನ್‌ಫ್ಲುಯನ್ಸರ್' ಅಂಕಿತ್ ಜತೆ ಮೋದಿ ಸ್ವಚ್ಛತಾ ಅಭಿಯಾನ

ಸ್ವಚ್ಛ – ಸ್ವಸ್ಥ ಭಾರತ ನಿರ್ಮಾಣಕ್ಕೆ ಪಣ

ನವದೆಹಲಿ (ಪಿಟಿಐ): ಸ್ವಚ್ಛತಾ ಅಭಿಯಾನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ 'ಫಿಟ್‌ನೆಸ್ ಇನ್‌ಫ್ಲುಯನ್ಸರ್' ಅಂಕಿತ್ ಬೈಯಾನಪುರಿಯಾ ಅವರ ಜತೆಗೂಡಿ ಒಂದು ತಾಸು ಸ್ವಚ್ಛತಾ ಕಾರ್ಯ ಕೈಗೊಂಡರು. ಗಾಂಧಿ ಜಯಂತಿ ಮುನ್ನಾ ದಿನ ಪ್ರತಿಯೊಬ್ಬರೂ ಬೆಳಿಗ್ಗೆ 10ರಿಂದ 11ರವರೆಗೆ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳಬೇಕೆಂದು ಎಂದು ಮೋದಿ ಕರೆ ನೀಡಿದ್ದರು.

'ದೇಶ ಇಂದು ಸ್ವಚ್ಛತೆ ಕಡೆ ಗಮನಹರಿಸಿದೆ. ಅಂಕಿತ್ ಮತ್ತು ನಾನು ಸ್ವಚ್ಛತಾ ಕಾರ್ಯದ ಜತೆಗೆ ಸ್ವಾಸ್ಥ್ಯದತ್ತಲೂ ಗಮನ ಕೊಟ್ಟಿದ್ದೇವೆ. ಒಟ್ಟಾರೆ ಸ್ವಚ್ಛ ಮತ್ತು ಸ್ವಸ್ಥ ಭಾರತ, ಪ್ರಮುಖ ಉದ್ದೇಶ' ಎಂದು ಮೋದಿ 'ಎಕ್ಸ್' ವೇದಿಕೆಯಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದಾರೆ.

ನಾಲ್ಕು ನಿಮಿಷ ಅವಧಿಯ ಈ ವಿಡಿಯೊದಲ್ಲಿ, ಮೋದಿ ಮತ್ತು ಅಂಕಿತ್ ಅವರು ಪೊರಕೆಯಿಂದ ಕಸ ಗುಡಿಸಿ ಎತ್ತಿ ಹಾಕುವ ದೃಶ್ಯಗಳಿವೆ. ಶ್ರಮದಾನ ಸಂದರ್ಭ ನಡೆಸಿದ ಮಾತುಕತೆ ವೇಳೆ ಮೋದಿ ಅವರು, 'ಫಿಟ್‌ನೆಸ್‌ಗಾಗಿ ಎಷ್ಟು ಸಮಯ ಕೊಡುತ್ತೀರಾ' ಎಂದು ಅಂಕಿತ್ ಅವರನ್ನು ಕೇಳಿದಾಗ 'ದಿನಕ್ಕೆ ನಾಲ್ಕೈದು ಗಂಟೆ ಮೀಸಲಿಡುತ್ತೇನೆ. ನೀವು ಮಾಡುವ ವ್ಯಾಯಾಮ ನೋಡಿ ನಾನು ಪ್ರೇರಿತನಾಗಿದ್ದೇನೆ' ಎನ್ನುತ್ತಾರೆ.



ಸ್ವಚ್ಛತಾ ಅಭಿಯಾನದ ವೇಳೆ ಮೋದಿ ಮತ್ತು ಅಂಕಿತ್ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ದೇಶವನ್ನು ಸ್ವಚ್ಛಗೊಳಿಸಲು ನಾವು (ಕೇಂದ್ರ ಸರ್ಕಾರ) ನಿರ್ಧರಿಸಿದ್ದೇವೆ. ಇದು ಬಹು ದೊಡ್ಡ ಸವಾಲು. ಆದರೆ ನಾವು ಮಾಡುತ್ತೇವೆ

ಆರ್.ಕೆ. ಸಿಂಗ್, ಕೇಂದ್ರ ಇಂಧನ ಸಚಿವ

ಆಗ ಮೋದಿ ಅವರು, 'ನಾನು ಹೆಚ್ಚು ವ್ಯಾಯಾಮ ಮಾಡುವುದಿಲ್ಲ. ಶಿಸ್ತನ್ನು ಪಾಲಿಸುತ್ತೇನೆ. ಆದರೆ ಎರಡು ವಿಷಯಗಳಲ್ಲಿ ಶಿಸ್ತು ಇಲ್ಲ. ಊಟ ಮಾಡುವ ಸಮಯ ಮತ್ತು ನಿದ್ರೆಯ ಸಮಯದಲ್ಲಿ ಶಿಸ್ತು ಇಲ್ಲ. ನಿದ್ರೆಗೆ ಹೆಚ್ಚು ಸಮಯ ಕೊಡಬೇಕು, ಕೊಡಲಾಗುತ್ತಿಲ್ಲ' ಎನ್ನುತ್ತಾರೆ.

'ಸಾಮಾಜಿಕ ಜಾಲತಾಣವನ್ನು ಸಕಾರಾತ್ಮಕವಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದಕ್ಕೆ ನೀವು ಉದಾಹರಣೆಯಾಗಿದ್ದೀರಿ. ಸಾಕಷ್ಟು ಯುವಜನರು, ಜಿಮ್‌ಗೆ ಹೋಗುವವರು ಕೂಡ ನಿಮ್ಮನ್ನು ಅನುಸರಿಸುತ್ತಾರೆ' ಎಂದು ಮೋದಿ ಅವರು ಅಂಕಿತ್‌ಗೆ ಹೇಳುತ್ತಾರೆ. ಅಂಕಿತ್ ಅವರ '75 ದಿನಗಳಲ್ಲಿ ಫಿಟ್‌ನೆಸ್ ಸವಾಲು' ಬಗ್ಗೆಯೂ ಪ್ರಧಾನಿ ಕುತೂಹಲದಿಂದ ಕೇಳುತ್ತಾರೆ.

'ಫಿಟ್‌ನೆಸ್‌ಗೆ ನೀವು ಪರಿಶ್ರಮ ಪಡುತ್ತೀರಾ. ಇದರಲ್ಲಿ ಸ್ವಚ್ಛತೆ ಹೇಗೆ ನೆರವಾಗುತ್ತದೆ' ಎಂದು ಮೋದಿ ಅವರು ಕೇಳಿದಾಗ, 'ವಾತಾವರಣ ಸ್ವಚ್ಛವಾಗಿರಬೇಕು. ಇದು ಆರೋಗ್ಯಕ್ಕೂ ಅನುಕೂಲಕರ' ಎಂದು ಅಂಕಿತ್ ಹೇಳುತ್ತಾರೆ.

'ನಿಮ್ಮ ಸೋನಿಪತ್ ಗ್ರಾಮದಲ್ಲಿ ಜನರಿಗೆ ಸ್ವಚ್ಛತೆ ಬಗ್ಗೆ ಅರಿವಿದೆಯಾ' ಎಂಬ ಪ್ರಶ್ನೆಗೆ 'ಈಗ ಜನರಿಗೆ ಅರಿವು ಮೂಡುತ್ತಿದೆ' ಎಂದು ಉತ್ತರಿಸುತ್ತಾರೆ.

ವಿಡಿಯೊ ಕೊನೆಯಲ್ಲಿ ಮೋದಿ ಅವರು ಅಂಕಿತ್ ಜತೆ ಸೆಲ್ಫಿ ಕೂಡ ತೆಗೆದುಕೊಳ್ಳುತ್ತಾರೆ.

9.2 ಎಕರೆಯಲ್ಲಿ ಅಭಿಯಾನ: ಮೋದಿ ಕರೆಗೆ ರಾಜಕಾರಣಿಗಳು, ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಕ್ಷೇತ್ರಗಳ ಜನರು ಪ್ರತಿಕ್ರಿಯಿಸಿದರು. ನಗರ ವ್ಯವಹಾರ ಸಚಿವಾಲಯದ ಪ್ರಕಾರ ಈ ಬೃಹತ್ ಅಭಿಯಾನ 9.2 ಎಕರೆಗೂ ಹೆಚ್ಚು ಜಾಗದಲ್ಲಿ ನಡೆದಿದೆ.

ಅಕ್ಟೋಬರ್ 1ರಂದು ಜನರು ಒಂದು ಗಂಟೆ 'ಸ್ವಚ್ಛತೆಗಾಗಿ ಶ್ರಮದಾನ' ಮಾಡಬೇಕು. ಇದು ಮಹಾತ್ಮ ಗಾಂಧಿ ಅವರಿಗೆ ನಾವು ಸಲ್ಲಿಸುವ 'ಸ್ವಚ್ಛಾಂಜಲಿ' ಎಂದು 'ಮನ್ ಕಿ ಬಾತ್'ನ ಇತ್ತೀಚಿನ ಕಾರ್ಯಕ್ರಮದಲ್ಲಿ ಪ್ರಧಾನಿ ಹೇಳಿದ್ದರು.

ದೇಶದ ವಿವಿಧೆಡೆ ನಡೆದ ಅಭಿಯಾನದಲ್ಲಿ ಕೇಂದ್ರ ಸಚಿವರು ಸೇರಿದಂತೆ ಬಿಜೆಪಿ ನಾಯಕರು ಪಾಲ್ಗೊಂಡಿದ್ದರು. ಅಹಮದಾಬಾದ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸ್ವಚ್ಛತಾ ಕಾರ್ಯ ಕೈಗೊಂಡರು.

ನಗರ, ಗ್ರಾಮೀಣ ಪ್ರದೇಶದಲ್ಲಿ ಶ್ರಮದಾನ

ದೆಹಲಿಯ 500 ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ್ದಾಗಿ ದೆಹಲಿ ಮಹಾನಗರಪಾಲಿಕೆ ಹೇಳಿದೆ.

ಸ್ವಯಂ ಪ್ರೇರಣೆಯಿಂದ ಶ್ರಮದಾನ ಕೈಗೊಂಡವರ ಪೈಕಿ ಸ್ವಯಂ ಸೇವಾ ಸಂಸ್ಥೆಗಳು, ಮಾರುಕಟ್ಟೆ ಅಸೋಸಿಯೇಶನ್‌ಗಳು, ಸ್ವಸಹಾಯ ಸಂಘಗಳು, ಧಾರ್ಮಿಕ ಸಂಘಟನೆಗಳು, ವಾಣಿಜ್ಯ ಸಂಸ್ಥೆಗಳು, ಖಾಸಗಿ ವಲಯದ ಕಂಪನಿಗಳು ಸೇರಿವೆ. 22 ಸಾವಿರಕ್ಕೂ ಹೆಚ್ಚು ಮಾರುಕಟ್ಟೆ ಪ್ರದೇಶಗಳು, 10 ಸಾವಿರಕ್ಕೂ ಹೆಚ್ಚು ಜಲ ಮೂಲಗಳು, ಏಳು ಸಾವಿರ ಬಸ್‌ನಿಲ್ದಾಣಗಳು/ ಟೋಲ್ ಪ್ಲಾಜಾಗಳು, ಒಂದು ಸಾವಿರ ಗೋಶಾಲೆಗಳು, 300 ಮೃಗಾಲಯಗಳು ಮತ್ತು ವನ್ಯಜೀವಿ ಪ್ರದೇಶಗಳು ಅಲ್ಲದೆ ನಗರ ಮತ್ತು ಗ್ರಾಮೀಣ ಭಾರತದ ಇತರ ಸ್ಥಳಗಳಲ್ಲಿ ಶ್ರಮದಾನ ನಡೆದಿದೆ ಎಂದು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ವಾಯುಪಡೆ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ಭೋಪಾಲ್, (ಮಧ್ಯಪ್ರದೇಶ) (ಪಿಟಿಐ): ತರಬೇತಿ ಕಾರ್ಯದಲ್ಲಿ ನಿರತವಾಗಿದ್ದ ವಾಯುಪಡೆಯ ಹೆಲಿಕಾಪ್ಟರ್‌ವೊಂದನ್ನು ಭಾನುವಾರ ಜಿಲ್ಲೆಯ ದುಂಗರಿಯಾ ಗ್ರಾಮದಲ್ಲಿ ಮುಂಜಾಗ್ರತೆ ಕ್ರಮವಾಗಿ ತುರ್ತು ಭೂಸ್ಪರ್ಶ ಮಾಡಿಸಲಾಯಿತು.

ಜಿಲ್ಲಾ ಕೇಂದ್ರಕ್ಕೆ 60 ಕಿ.ಮೀ. ದೂರದಲ್ಲಿರುವ ಈ ಗ್ರಾಮದ ಕೆರೆಯೊಂದರ ಬಳಿ ಭಾರತೀಯ ವಾಯುಪಡೆಯ 'ಎಂಕೆ 3' ಹೆಲಿಕಾಪ್ಟರ್ ಅನ್ನು ಇಳಿಸಲಾಗಿದೆ. ಪೈಲಟ್ ಹಾಗೂ ಅದರಲ್ಲಿದ್ದ ಐದು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ಬೈರಸಿಯಾ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ನರೇಂದ್ರ ಕುಲಸ್ತೆ ತಿಳಿಸಿದರು.

ಝಾನ್ಸಿಯಿಂದ ಭೋಪಾಲ್‌ಗೆ ತೆರಳುತ್ತಿದ್ದ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು ತುರ್ತು ಭೂಸ್ಪರ್ಶಕ್ಕೆ ಕಾರಣವಾಗಿದೆ. 'ಯಾವುದೇ ಹಾನಿಯಾಗಿಲ್ಲ' ಎಂದು ಸೆಂಟ್ರಲ್ ಏರ್ ಕಮಾಂಡ್ ಹೇಳಿಕೆ ನೀಡಿದೆ.

ದುಷ್ಕರ್ಮಿಗಳಿಗೆ ಗರಿಷ್ಠ ಪ್ರಮಾಣದ ಶಿಕ್ಷೆ ಜಾರಿಗೆ ಕ್ರಮ: ಮಣಿಪುರ ಸಿ.ಎಂ

ವಿದ್ಯಾರ್ಥಿಗಳ ಹತ್ಯೆ: ನಾಲ್ಕು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಅಪಹರಣ, ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಣಿಪುರದಲ್ಲಿ ನಾಲ್ಕು ಮಂದಿಯನ್ನು ಸಿಬಿಐ ಭಾನುವಾರ ಬಂಧಿಸಿದೆ.

ಫಿಜಾಮ್ ಹೇಮಜಿತ್ (20) ಮತ್ತು ಹಿಜಾಮ್ ಲಿಂಥೋಯ್‌ಗಂಬಿ (17) ಅವರ ಅಪಹರಣ ಮತ್ತು ಕೊಲೆಗೆ ಕಾರಣರಾದವರನ್ನು ಚುರಾಚಂದಪುರದಲ್ಲಿ ಬಂಧಿಸಲಾಗಿದೆ. ದುಷ್ಕರ್ಮಿಗಳಿಗೆ ಮರಣದಂಡನೆ ಸೇರಿದಂತೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗುವುದನ್ನು ಸರ್ಕಾರ ಖಾತರಿಪಡಿಸುತ್ತದೆ ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಹೇಳಿದ್ದಾರೆ.

'ಅಪರಾಧ ಮಾಡಿದ ನಂತರ ಪರಾರಿಯಾಗಬಹುದು. ಆದರೆ, ಅವರು ಕಾನೂನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಮುಖ್ಯಮಂತ್ರಿ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಣಿಪುರ ಪೊಲೀಸರ ಸಹಾಯದಿಂದ ಸಿಬಿಐ ಬಂಧಿಸಿರುವ ನಾಲ್ಕು ಆರೋಪಿಗಳು ಕುಕಿ-ಜೋಮಿ ಸಮುದಾಯಕ್ಕೆ ಸೇರಿದವರು. ಅವರನ್ನು ಗುವಾಹಟಿಗೆ ವಿಮಾನದಲ್ಲಿ ಕರೆದೊಯ್ಯಲಾಯಿತು. 18 ವರ್ಷದೊಳಗಿನ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜುಲೈ 6 ರಂದು ಯುವಕ ಹಾಗೂ ಯುವತಿ ನಾಪತ್ತೆಯಾಗಿದ್ದರು. ಅವರ ಮೃತದೇಹಗಳ ಚಿತ್ರಗಳು ಸೆ.25ರಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಬಳಿಕ ಇಂಫಾಲ್‌ನಲ್ಲಿ ಹಿಂಸಾಚಾರ ಭುಗಿಲೆದ್ದಿದೆ.

ಶಾ ಜತೆ ಸಭೆ ನಡೆಸಿ– ಕೋಲ್ಕತ್ತ (ಪಿಟಿಐ): ಮೈತೇಯಿ ಮತ್ತು ಕುಕಿ ಸಮುದಾಯಗಳು ಭಿನ್ನಾಭಿಪ್ರಾಯ ನಿವಾರಿಸಿಕೊಳ್ಳಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಜಂಟಿ ಸಭೆ ನಡೆಸಬೇಕು ಎಂದು ಮಣಿಪುರದ ಜನಪ್ರಿಯ ಚಿತ್ರನಟ ರಾಜ್‌ಕುಮಾರ್ ಸೊಮೊರೇಂದ್ರ ಹೇಳಿದ್ದಾರೆ.

ಸಂಘರ್ಷದಿಂದಾಗಿ ಅನೇಕ ಜನರು ನಿರಾಶ್ರಿತರಾಗಿದ್ದಾರೆ. ಶಾಂತಿಗಾಗಿ ಕೆಲಸ ಮಾಡುವ ಸಮಯವಾಗಿದೆ. ಎರಡೂ ಸಮುದಾಯಗಳ ಪ್ರತಿನಿಧಿಗಳು ಒಗ್ಗೂಡಿ ಅಮಿತ್ ಶಾ ಅವರನ್ನು ಭೇಟಿ ಮಾಡಿ, ಸಮಸ್ಯೆಗಳ ಬಗ್ಗೆ ಚರ್ಚಿಸಿ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

'ನ್ಯಾಯಬದ್ಧ ಅಧಿಕಾರ ಹಂಚಿಕೆಯಾಗಲಿ'

ಕೋಲ್ಕತ್ತ (ಪಿಟಿಐ): ಮಣಿಪುರ ಪರಿಸ್ಥಿತಿಯನ್ನು 'ದುರಂತ' ಎಂದು ಬಣ್ಣಿಸಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಮರಿ ಮೊಮ್ಮಗ ಸುಗತ ಬೋಸ್, ಈಶಾನ್ಯ ರಾಜ್ಯದಲ್ಲಿ ಮೂರು ಸಮುದಾಯಗಳನ್ನು ಒಟ್ಟಿಗೆ ತರಲು ನ್ಯಾಯಯುತ ಅಧಿಕಾರ ಹಂಚಿಕೆ ವ್ಯವಸ್ಥೆ ರೂಪಿಸುವಂತೆ ಕರೆ ನೀಡಿದ್ದಾರೆ.

ಮೈತೇಯಿ, ಕುಕಿ ಮತ್ತು ನಾಗಾ ಸಮುದಾಯಗಳ ಸದಸ್ಯರು 1944ರಲ್ಲಿ ನೇತಾಜಿ ಅವರ ಐಎನ್‌ಎ ಸೇರಿದರು ಮತ್ತು ಬಿಷ್ಣುಪುರ ಮತ್ತು ಉಖ್ರುಲ್ ಜಿಲ್ಲೆಗಳ ಯುದ್ಧಭೂಮಿಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದರು ಎಂದು ಬೋಸ್ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ವಿವರಿಸಿದ್ದಾರೆ.

ರಾಜ್ಯದ ಜನಸಂಖ್ಯೆಯ ಶೇಕಡ 53ರಷ್ಟಿರುವ ಮೈತೇಯಿ ಸಮುದಾಯ ಇಂಫಾಲ್ ಕಣಿವೆಯಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರೆ, ನಾಗಾ, ಕುಕಿ, ಬುಡಕಟ್ಟು ಸಮುದಾಯದ ಜನಸಂಖ್ಯೆ ಶೇ 40ರಷ್ಟಿದೆ. ಮೂರು ಸಮುದಾಯಗಳನ್ನು ಮತ್ತೆ ಒಗ್ಗೂಡಿಸಲು ಬ್ರಿಟಿಷರ ವಿರುದ್ಧದ ಹಿಂದಿನ ಸಶಸ್ತ್ರ ಹೋರಾಟದ ಅತ್ಯುತ್ತಮ ಪರಂಪರೆಯನ್ನು ಪಡೆದುಕೊಳ್ಳಬೇಕಾಗಿದೆ ಎಂದಿದ್ದಾರೆ.

'ಜನಾಂಗೀಯ ಸಂಘರ್ಷವಲ್ಲ'

ಗುವಾಹಟಿ: 'ಮಣಿಪುರದಲ್ಲಿ ಐದು ತಿಂಗಳಿನಿಂದ ನಡೆಯುತ್ತಿರುವ ಹಿಂಸಾಚಾರವು ಭಾರತ ಒಕ್ಕೂಟದ ವಿರುದ್ಧ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶ ಮೂಲದ ಕುಕಿ ಮೂಲಭೂತವಾದಿಗಳು ಮತ್ತು ರಾಜ್ಯದಲ್ಲಿ ಸಕ್ರಿಯವಾಗಿರುವ ಮೂಲಭೂತವಾದಿ ಸಂಘಟನೆಗಳ ಜಂಟಿ ಕಾರ್ಯಾಚರಣೆಯಾಗಿದೆ' ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಹೇಳಿದರು.

'ರಾಜ್ಯದಲ್ಲಿ ಈಗ ನಡೆಯುತ್ತಿರುವ ಘರ್ಷಣೆಯು ಜನಾಂಗೀಯ ಘರ್ಷಣೆ ಅಥವಾ ಕಾನೂನು ಸುವ್ಯವಸ್ಥೆಯ ವಿಷಯವಲ್ಲ. ಇದು, ಭಾರತ ಒಕ್ಕೂಟದ ವಿರುದ್ಧ ಮೂಲಭೂತವಾದಿಗಳು ನಡೆಸುತ್ತಿರುವ ಯುದ್ಧವಾಗಿದೆ' ಎಂದು ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ಆರೋಪಿಸಿದರು.

'ಗುಂಪೊಂದರ ಕೆಲವರು ಈಗ ಸಂಘರ್ಷಕ್ಕೆ ಪ್ರಚೋದನೆ ನೀಡುತ್ತಿದ್ದು, ಮಣಿಪುರದ ಏಕತೆಗೆ ಧಕ್ಕೆ ತರುವ ಉದ್ದೇಶ ಹೊಂದಿದ್ದಾರೆ' ಎಂದು ಹೇಳಿದರು.

ಡಿಎಂಕೆ ವಿರುದ್ಧ ವಾಗ್ದಾಳಿ

ಚೆನ್ನೈ (ಪಿಟಿಐ): ಕಾವೇರಿ ನದಿ ನೀರು ವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿರುವ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ, 'ಈ ವಿಚಾರದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ರಾಜ್ಯದ ಜನರ ಬಗ್ಗೆ ಕಾಳಜಿ ಇದೆಯೇ' ಎಂದು ಪ್ರಶ್ನಿಸಿದ್ದಾರೆ.



'ಅಲ್ಲಿ (ಕರ್ನಾಟಕದಲ್ಲಿ) ತಮ್ಮ ಕುಟುಂಬ ಸದಸ್ಯರು ನಡೆಸುತ್ತಿರುವ ಉದ್ಯಮಗಳಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಲು ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರ್ಕಾರವನ್ನು ಡಿಎಂಕೆ ಬೆಂಬಲಿಸುತ್ತಿದೆ' ಎಂದು ಅವರು ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

ರಾಜ್ಯ ಸರ್ಕಾರದ ಭರವಸೆಯಿಂದಾಗಿ ಕಾವೇರಿ ನದಿ ಮುಖಜ ಭೂಮಿ ಪ್ರದೇಶದ 1.50 ಲಕ್ಷ ರೈತರು ತಮ್ಮ ಐದು ಲಕ್ಷ ಎಕರೆ ಪ್ರದೇಶದಲ್ಲಿ ಅಲ್ಪಾವಧಿಯ ಕುರುವೈ ಬೆಳೆಯನ್ನು ಬೆಳೆದಿದ್ದಾರೆ. ಆದರೆ, ಈಗಾಗಲೇ 3.5 ಲಕ್ಷ ಎಕರೆ ಪ್ರದೇಶದ ಬೆಳೆಗಳು ನೀರಿಲ್ಲದೆ ಸೊರಗಿವೆ. ಉಳಿದ ಬೆಳೆಗಳು ಕೊಳವೆ ಬಾವಿ ನೀರನ್ನು ಅವಲಂಬಿಸಿವೆ ಎಂದಿದ್ದಾರೆ.

'ಸ್ಟಾಲಿನ್ ಅವರಿಗೆ ಮುಂದಾಲೋಚನೆಯೇ ಇಲ್ಲ. ಇದೇ ಕಾರಣದಿಂದಾಗಿ ಅವರು ಜೂನ್ 12ರಂದು ಮೆಟ್ಟೂರು ಜಲಾಶಯದಿಂದ ನೀರು ಹರಿಸಿದ್ದಾರೆ. ಮೆಟ್ಟೂರು ಜಲಾಶಯದಿಂದ ಹರಿಸುವ ನೀರಿನ ಪ್ರಮಾಣವನ್ನು ರಾಜ್ಯ ಸರ್ಕಾರ ತಗ್ಗಿಸಬೇಕಿತ್ತು' ಎಂದು ಹೇಳಿದ್ದಾರೆ.

ಕಾರು ನದಿಗೆ ಉರುಳಿ ಇಬ್ಬರು ವೈದ್ಯರ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೊಚ್ಚಿಯ ಪರವೂರಿನ ಗೋತುರುತ್ ಬಳಿ ಭಾನುವಾರ ಕಾರು ನದಿಗೆ ಉರುಳಿ ಇಬ್ಬರು ಯುವ ವೈದ್ಯರು ಮೃತಪಟ್ಟಿದ್ದಾರೆ. ಎಂಬಿಬಿಎಸ್ ವಿದ್ಯಾರ್ಥಿ ಸೇರಿದಂತೆ ಕಾರಿನಲ್ಲಿದ್ದ ಇತರ ಮೂವರನ್ನು ರಕ್ಷಣೆ ಮಾಡಲಾಗಿದೆ.

ಗೂಗಲ್ ಮ್ಯಾಪ್ ತೋರಿಸಿದ ದಾರಿಯಲ್ಲಿ ತಿರುವು ತೆಗೆದುಕೊಂಡ ಕಾರಣ ಕಾರು ನದಿಗೆ ಉರುಳಿದೆ ಎಂದು ಕಾರಿನಲ್ಲಿದ್ದವರು ತಿಳಿಸಿದ್ದಾರೆ.

ಡಾ.ಅದ್ವೈತ್ (28) ಮತ್ತು ಡಾ.ಅಜ್ಮಲ್ (27) ಮೃತಪಟ್ಟವರು. ಇವರಿಬ್ಬರು ತ್ರಿಶ್ಶೂರ್ ಜಿಲ್ಲೆಯ ಕೊಡುಂಗಲ್ಲೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು.

ಸೋಮವಾರ, ಅಕ್ಟೋಬರ್ 2, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಚ್ಛತೆ

ನವದೆಹಲಿಯಲ್ಲಿ ಕಾರ್ಮಿಕರೊಬ್ಬರು ಮಹಾತ್ಮ ಗಾಂಧಿ ಪ್ರತಿಮೆಯನ್ನು ಸ್ವಚ್ಛಗೊಳಿಸಿದರು



ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

‘ಬಜೆಟ್‌ನಲ್ಲಿ ಹಿರಿಯರ ಮಾಸಾಶನ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಾಸಾಶನವನ್ನು ₹ 2 ಸಾವಿರಕ್ಕೆ ಹೆಚ್ಚಿಸಲು ಮನವಿ
- ಹಿರಿಯ ನಾಗರಿಕರಿಗೆ ಪ್ರಸ್ತುತ ₹ 1,200 ಮಾಸಾಶನ: ಸಚಿವೆ

ಬೆಂಗಳೂರು: ‘ಹಿರಿಯ ನಾಗರಿಕರಿಗೆ ನೀಡುತ್ತಿರುವ ಮಾಸಾಶನ ಮೊತ್ತವನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಹೆಚ್ಚಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ‘ಹಿರಿಯ ನಾಗರಿಕರಿಗೆ ನೀಡುತ್ತಿರುವ ಮಾಸಾಶನವನ್ನು ₹ 2 ಸಾವಿರಕ್ಕೆ ಹೆಚ್ಚಿಸಬೇಕು’ ಎಂದು ಮನವಿ ಮಾಡಿದರು.

ಸಚಿವರ ಮನವಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಹಿರಿಯ ನಾಗರಿಕರಿಗೆ ನೀಡುತ್ತಿರುವ ಮಾಸಾಶನವನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಹೆಚ್ಚಳ ಮಾಡುತ್ತೇನೆ’ ಎಂದರು.

‘ಹಿರಿಯರನ್ನು ಗೌರವದಿಂದ ನಡೆಸಿಕೊಳ್ಳುವುದು ಮತ್ತು ಅವರ ಬದುಕಿನ ಮೌಲ್ಯಗಳನ್ನು ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳುವುದೇ ನಾವು ಅವರಿಗೆ ನೀಡುವ ಗೌರವ. ನಾವು ಎಷ್ಟು ದೀರ್ಘ ಅವಧಿಯವರೆಗೆ ಬದುಕುತ್ತೇವೆ ಎಂಬುದು ಮುಖ್ಯವಲ್ಲ. ಎಷ್ಟು ದಿನ ಸಾರ್ಥಕ ಜೀವನ ನಡೆಸಿದ್ದೇವೆ ಎಂಬುದೇ ಮುಖ್ಯ’ ಎಂದರು.



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರದ ನಡೆದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಸನ್ಮಾನಿತರಾದ ಹಿರಿಯರೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಲಾಖೆ ಅಧಿಕಾರಿಗಳು ಇದ್ದರು –ಪ್ರಜಾವಾಣಿ ಚಿತ್ರ

ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, ‘ರಾಜ್ಯದಲ್ಲಿ 58 ಲಕ್ಷ ಮಂದಿ ಹಿರಿಯ ನಾಗರಿಕರಿದ್ದಾರೆ. ಅವರಲ್ಲಿ 48 ಲಕ್ಷ ಜನರಿಗೆ ತಿಂಗಳಿಗೆ ತಲಾ ₹ 1,200 ಪಿಂಚಣಿ ನೀಡಲಾಗುತ್ತಿದೆ. ಈ ಮೊತ್ತವನ್ನು ತಿಂಗಳಿಗೆ ₹ 2 ಸಾವಿರಕ್ಕೆ ಹೆಚ್ಚಿಸಬೇಕು. ಆ ಮೂಲಕ, ಸರ್ಕಾರ ಹಿರಿಯ ನಾಗರಿಕರ ನೆರವಿಗೆ ನಿಲ್ಲಬೇಕು’ ಎಂದು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿದರು.

‘ರಾಜ್ಯದ ಕೆಲವು ವೃದ್ಧಾಶ್ರಮಗಳಲ್ಲಿ ಹಲವು ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ. ಶೀಘ್ರದಲ್ಲೇ ಈ ಎಲ್ಲ ವೃದ್ಧಾಶ್ರಮಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾಗುವುದು. ಹಿರಿಯ ನಾಗರಿಕರ ಸ್ಮರಣೆ ಒಂದು ದಿನಕ್ಕೆ ಸೀಮಿತವಾಗಬಾರದು. ನಿತ್ಯವೂ ಅವರನ್ನು ಗೌರವದಿಂದ ನಡೆಸಿಕೊಳ್ಳುವುದು ಹಾಗೂ ಅವರ ಅನುಭವವನ್ನು ಬಳಸಿಕೊಳ್ಳುವ ಕೆಲಸ ಆಗಬೇಕು’ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹರೇಕಳ ಹಾಜಪ್ಪ, ವಕೀಲ ಪಿ.ಎಸ್. ರಾಜಗೋಪಾಲ್, ಯೋಗಪಟು ಡಿ. ನಾಗರಾಜ್, ಸಂಬಾಳ ವಾದಕ ಹಣಮಂತ ಗೋವಿಂದಪ್ಪ ಹೂಗಾರ, ನಿವೃತ್ತ ಕುಲಪತಿ ಆರ್. ಆರ್. ಹಂಚಿನಾಳ, ಸಮಾಜ ಸೇವಕ ವೀರಭದ್ರಪ್ಪ ಶರಣಪ್ಪ ಉಪ್ಪಿನ, ನಿವೃತ್ತ ಶಿಕ್ಷಕ ಎಚ್.ಎಸ್.ಗಿರಿರಾಜ್ ಅವರನ್ನು ಸನ್ಮಾನಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಾರ್ಯದರ್ಶಿ ಜಿ.ಸಿ. ಪ್ರಕಾಶ್, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಎನ್. ಸಿದ್ದೇಶ್ವರ ಇದ್ದರು.

ಸುದ್ದಿ 2 ನಿಮಿಷ

ಪ್ರಧಾನಿ ಮೋದಿ ಕಚೇರಿಗೆ ರಕ್ತದಲ್ಲಿ ಬರೆದ ಪತ್ರ ರವಾನೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಿ ಕಾವೇರಿ ವಿವಾದ ಬಗೆಹರಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಟಿ.ಎ.ನಾರಾಯಣಗೌಡ ಬಣದ ಕಾರ್ಯಕರ್ತರು ಭಾನುವಾರು ರಕ್ತದಲ್ಲಿ ಪತ್ರ ಬರೆದು ಪ್ರಧಾನಿ ಕಚೇರಿಗೆ ರವಾನಿಸಿದರು. ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮೋದಿ ಅವರು ಮಧ್ಯಪ್ರವೇಶಿಸಿ ಸಂಕಷ್ಟ ಸೂತ್ರ ಜಾರಿಗೊಳಿಸಿ ಕನ್ನಡಿಗರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ರಾಜ್ಯದಾದ್ಯಂತ ಒಂದು ಲಕ್ಷ ಪತ್ರಗಳನ್ನು ಬರೆಯಲಾಗಿದೆ ಎಂದು ನಾರಾಯಣಗೌಡ ತಿಳಿಸಿದ್ದಾರೆ.

ರಾಜ್ಯದ ಬಹುತೇಕ ಜಿಲ್ಲೆ, ತಾಲ್ಲೂಕು ಘಟಕದ ಕಾರ್ಯಕರ್ತರು ಈ ಪತ್ರ ಚಳವಳಿಯಲ್ಲಿ ಭಾಗವಹಿಸಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಪ್ರಸಾದದ ಲಡ್ಡು ₹ 4.25 ಲಕ್ಷಕ್ಕೆ ಖರೀದಿ



ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿ ವತಿಯಿಂದ 26 ಅಡಿ ಎತ್ತರದ ಗಣೇಶನ ಪ್ರಸಾದವಾದ 15 ಕೆ.ಜಿ. ಲಡ್ಡುವನ್ನು ಹರಾಜಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಲಕ್ಷ್ಮಣ್ ಗೌಡ ₹ 4.25 ಲಕ್ಷಕ್ಕೆ ಖರೀದಿಸಿದರು.

ಸಾಮೂಹಿಕ ಗಣೇಶೋತ್ಸವಕ್ಕೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು. ಉದ್ಯಮಿ ಲಕ್ಷ್ಮಣ್ ಗೌಡ ಮಾತನಾಡಿ, ‘ಕಳೆದ ವರ್ಷ ಲಡ್ಡು ಹರಾಜಿನಲ್ಲಿ ನನಗೆ ಸಿಗದೇ ಇದ್ದರೂ ಈ ವರ್ಷ ಖರೀದಿಸಿದ್ದೇನೆ’ ಎಂದು ತಿಳಿಸಿದರು.

ಮೆರವಣಿಗೆಯಲ್ಲಿ 75ಕ್ಕೂ ಹೆಚ್ಚು ಗಣೇಶ ಮೂರ್ತಿಗಳು ಇದ್ದವು. ಪಂಜಾಬ್, ಗುಜರಾತ್, ಮುಂಬೈ, ಕೇರಳ ಕರ್ನಾಟಕದಿಂದ ಬಂದ ಕಲಾತಂಡಗಳು ಅದ್ದೂರಿ ಮೆರವಣಿಗೆಗೆ ಮೆರುಗು ನೀಡಿದವು. ಡಿಜೆ ಸದ್ದಿಗೆ ನೂರಾರು ಯುವಕರು ಹೆಜ್ಜೆ ಹಾಕಿದರು.

ಎಂ.ಇ.ಐ ಆಟದ ಮೈದಾನದಿಂದ ಪ್ರಾರಂಭವಾಗಿ ಬಾಗಲಗುಂಟೆ ಮಾರಮ್ಮನ ದೇವಸ್ಥಾನ, ಹೆಸರಘಟ್ಟ ಮುಖ್ಯ ರಸ್ತೆ, ಮಲ್ಲಸಂದ್ರದ ಪೈಪ್ ಲೈನ್, ಸೆಲೆಕ್ಷನ್ ಕಾರ್ನರ್ ಅಲ್ಲಿಂದ ದಾಸರಹಳ್ಳಿ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿತು. ಚೊಕ್ಕಸಂದ್ರದ ಕೆರೆ ಹತ್ತಿರ ಕಲ್ಯಾಣಿಗೆ ವಿಸರ್ಜಿಸಲಾಯಿತು.

ಮದ್ಯ ನಿಷೇಧಕ್ಕೆ ಆಗ್ರಹ: ಧರಣಿ

ಬಾಗಲಕೋಟೆ: ಮದ್ಯ ಮಾರಾಟ ನಿಷೇಧಿಸಬೇಕು ಹಾಗೂ ಅಕ್ರಮವಾಗಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಮದ್ಯ ನಿಷೇಧ ಆಂದೋಲನ ಸದಸ್ಯರು ಭಾನುವಾರ ಬೆಳಿಗ್ಗೆಯಿಂದ ಸೋಮವಾರ ಬೆಳಿಗ್ಗೆವರೆಗೆ ಅಹೋರಾತ್ರಿ ಧರಣಿ ಆರಂಭಿಸಿದರು.

ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ರಾಜ್ಯ ಮಹಿಳಾ ಒಕ್ಕೂಟದ ಸಹಯೋಗದಲ್ಲಿ ನಡೆಯುತ್ತಿರುವ ಈ ಹೋರಾಟದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು, ಕರ್ನಾಟಕ ಪಂಚಾಯತ್ ಕಾನೂನಿನ ಅನ್ವಯ ಗ್ರಾಮ ಸಭೆಗೆ ಪರಮಾಧಿಕಾರ ನೀಡಬೇಕು ಎಂದು ಆಗ್ರಹಿಸಿದರು.

ಬಿಬಿಎಂಪಿ: ಅಂತಿಮ ಅಧಿಸೂಚನೆ ಆರು ದಿನದಲ್ಲಿ ಬದಲು

40 ವಾರ್ಡ್‌ಗಳ ಮರುವಿಂಗಡಣೆಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್ ಮರುವಿಂಗಡಣೆ ಅಂತಿಮ ಅಧಿಸೂಚನೆಗೆ ತಿದ್ದುಪಡಿ ಮಾಡಿರುವ ಸರ್ಕಾರ, 40 ವಾರ್ಡ್‌ಗಳ ಪ್ರದೇಶ ಹಾಗೂ ಗಡಿಯಲ್ಲಿ ಬದಲಾವಣೆ ಮಾಡಿ ಅಧಿಸೂಚನೆ ಹೊರಡಿಸಿದೆ.

ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಎಂಟೂ ವಾರ್ಡ್‌ಗಳಲ್ಲಿ ಬದಲಾವಣೆ ಮಾಡಿದೆ. ಯಲಹಂಕ, ಬೊಮ್ಮನಹಳ್ಳಿ, ಬಸವನಗುಡಿ, ದಾಸರಹಳ್ಳಿ, ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರಗಳಲ್ಲಿ ಪ್ರಮುಖ ಬದಲಾವಣೆ ಆಗಿವೆ.

ಪ್ರದೇಶ, ಗಡಿ ಬದಲಾಗಿರುವ ವಾರ್ಡ್‌ಗಳು: 2- ಚೌಡೇಶ್ವರಿ, 4- ಯಲಹಂಕ ಸ್ಯಾಟಲೈಟ್ ಟೌನ್, 10- ಬ್ಯಾಟರಾಯನಪುರ, 12- ದೊಡ್ಡ ಬೊಮ್ಮಸಂದ್ರ, 39- ಲಗ್ಗೆರೆ, 48- ಮಹಾಲಕ್ಷ್ಮಿ ಪುರ, 49- ನಾಗಾಪುರ, 63- ಹೆಬ್ಬಾಳ, 64- ವಿಶ್ವನಾಥ ನಾಗೇನಹಳ್ಳಿ, 65- ಮನೋರಾಯನ ಪಾಳ್ಯ, 66- ಚಾಮುಂಡಿ ನಗರ, 67- ಗಂಗಾನಗರ, 91- ಕೆ.ಆರ್. ಪುರ, 98- ಹೂಡಿ, 106- ಮಾರತ್ತಹಳ್ಳಿ, 109- ಬೆನ್ನಿಗಾನಹಳ್ಳಿ, 110- ಸಿ.ವಿ. ರಾಮನ್ ನಗರ, 130- ಶ್ರೀರಾಮಮಂದಿರ, 139- ಮೂಡಲಪಾಳ್ಯ, 140- ಮಾರುತಿ ಮಂದಿರ, 180- ಸೋಮೇಶ್ವರ ದೇವಸ್ಥಾನ, 182- ಬೈರಸಂದ್ರ, 183- ಗುರಪ್ಪನಪಾಳ್ಯ, 187- ಸಾರಕ್ಕಿ, 188- ಯಡಿಯೂರು, 189- ಗಣೇಶ್ ಮಂದಿರ, 190- ದೇವಗಿರಿ ದೇವಸ್ಥಾನ, 191- ಬನಶಂಕರಿ ದೇವಸ್ಥಾನ, 192- ಕುಮಾರಸ್ವಾಮಿ ಲೇಔಟ್, 193- ಪದ್ಮನಾಭನಗರ, 194- ಚಿಕ್ಕಲಸಂದ್ರ, 195- ಹೊಸಕೆರೆಹಳ್ಳಿ, 197- ಶ್ರೀನಗರ, 198- ದೊಡ್ಡ ಗಣಪತಿ, 199- ವಿದ್ಯಾಪೀಠ, 200- ಸ್ವಾಮಿ ವಿವೇಕಾನಂದ, 201- ಕತ್ರಿಗುಪ್ಪೆ, 210- ಕಾಳೇನ ಅಗ್ರಹಾರ, 211- ಬೇಗೂರು, 223- ಮಂಗಮ್ಮನಪಾಳ್ಯ.

ವಾರ್ಡ್‌ಗಳ ನಕ್ಷೆ ಪ್ರಕಟ

ಬಿಬಿಎಂಪಿ ವಾರ್ಡ್ ಪುನರ್ ವಿಂಗಡಣೆಯ ಅಂತಿಮ ಪಟ್ಟಿ ಹಾಗೂ ತಿದ್ದುಪಡಿ ಅಧಿಸೂಚನೆಯಂತೆ 225 ವಾರ್ಡ್‌ಗಳ ನಕ್ಷೆಯನ್ನು ಪ್ರಕಟಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸುಗಳನ್ನು ಸರ್ಕಾರ ಒಪ್ಪಿದೆ. 2011ರ ಜನಗಣತಿಯ ಆಧಾರದ ಮೇರೆಗೆ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊಳಿಸಿ ಅಧಿಸೂಚಿಸಲಾಗಿದೆ. 225 ವಾರ್ಡ್ ಗಳ ನಕ್ಷೆಯನ್ನು http://bbmpdelimitation2023.com/ ಲಿಂಕ್‌ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



‘ಸ್ಯಾಂಕಿ’ಯಲ್ಲಿ ಚಿಲಿಪಿಲಿ ಸದ್ದು

ಸ್ಯಾಂಕಿ ಕೆರೆ ಮಧ್ಯದ ಮರವೊಂದರ ಮೇಲೆ ಶಿಸ್ತಿನಿಂದ ಗೂಡು ಕಟ್ಟಿದ್ದ ಹಕ್ಕಿಗಳು ತಮ್ಮ ಚಿಲಿಪಿಲಿ ಶಬ್ದದಿಂದ ವಾಯುವಿಹಾರಿಗಳ ಗಮನ ಸೆಳೆಯುತ್ತಿವೆ –ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

‘ಬಿಜೆಪಿ ಮುಖಂಡರಿಗೆ ಆಮಿಷ’

ಚಿಕ್ಕಮಗಳೂರು: ಬಿಜೆಪಿ ಶಾಸಕರು ಮತ್ತು ಮುಖಂಡರಿಗೆ ಕಾಂಗ್ರೆಸ್ ಆಮಿಷವೊಡ್ಡಿ ಸೆಳೆಯುತ್ತಿದೆ ಎಂದು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆಂತರಿಕವಾಗಿ ಕಾಂಗ್ರೆಸ್ ದುರ್ಬಲವಾಗಿದೆ. ಗಲಿಬಿಲಿಗೊಂಡಿರುವುದರಿಂದ ಅವರಿಗೆ ಅಸುರಕ್ಷತೆ ಕಾಡುತ್ತಿದೆ. ಆದ್ದರಿಂದಲೇ ಬಿಜೆಪಿ ಶಾಸಕರನ್ನು ಸೆಳೆಯುತ್ತಿದ್ದಾರೆ’ ಎಂದರು.

‘ಭಾರತವನ್ನು ಪ್ರಪಂಚದಲ್ಲೇ ಅಗ್ರ ಸ್ಥಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಕೊಂಡೊಯ್ದಿದ್ದಾರೆ. 2024ರ ಚುನಾವಣೆಯಲ್ಲಿ ಅತ್ಯಧಿಕ ಮತಗಳ ಅಂತರದಲ್ಲಿ ಬಿಜೆಪಿ ಗೆಲ್ಲಲಿದೆ. ಮತ್ತೊಮ್ಮೆ ಮೋದಿ ಪ್ರಧಾನಿ ಆಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಸ್ವಾತಂತ್ರ್ಯ ಹೋರಾಟಗಾರರ ಕಡೆಗಣಿಸಿದ ಕೇಂದ್ರ’


‘ಕೊನೆಯ ಹೀರೋಗಳು’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪತ್ರಕರ್ತ ಪಿ. ಸಾಯಿನಾಥ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಸ್ವಾತಂತ್ರ್ಯ ಹೋರಾಟಗಾರರನ್ನು ಕಡೆಗಣಿಸಿದ್ದು, ‘ಆಜಾದಿ ಕಾ ಅಮೃತ್ ಮಹೋತ್ಸವ್’ ಪೋರ್ಟಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಹಾಗೂ ಅವರ ಸಂದೇಶಗಳನ್ನು ಬಿಟ್ಟರೆ ದೇಶದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ಇಲ್ಲ’ ಎಂದು ಪತ್ರಕರ್ತ ಪಿ. ಸಾಯಿನಾಥ್ ಬೇಸರ ವ್ಯಕ್ತಪಡಿಸಿದರು.

ಬಹುರೂಪಿ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಪತ್ರಕರ್ತ ಜಿ.ಎನ್. ಮೋಹನ್ ಅನುವಾದಿಸಿರುವ ತಮ್ಮ ಕೃತಿ ‘ಕೊನೆಯ ಹೀರೋಗಳು: ಭಾರತ ಸ್ವಾತಂತ್ರ್ಯದ ಕಾಲಾಳು ಯೋಧರು’ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಈ ಪೋರ್ಟಲ್ ರೂಪಿಸಲಾಗಿದೆ. ಇದರಲ್ಲಿ ಈಗಲೂ ನಮ್ಮ ನಡುವಿರುವ ಸ್ವಾತಂತ್ರ್ಯ ಹೋರಾಟಗಾರರ ಒಂದೇ ಒಂದು ಫೋಟೊ, ಲೇಖನ, ವಿಡಿಯೊ ಇಲ್ಲ. ಎಲ್ಲವೂ ನರೇಂದ್ರ ಮೋದಿ ಕೇಂದ್ರೀಕೃತವಾಗಿದೆ. ಅನಗತ್ಯ ಮಾಹಿತಿಗಳನ್ನು ತುರುಕಲಾಗಿದೆ. ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದ ಹೋರಾಟಗಾರರನ್ನು ಯುವ ಸಮುದಾಯಕ್ಕೆ ನೆನಪಿಸುವ ಕೆಲಸ ಮಾಡಿಲ್ಲ’ ಎಂದು ದೂರಿದರು.



ಕಾರ್ಯಕ್ರಮದಲ್ಲಿ ಪುರುಷೋತ್ತಮ ಬಿಳಿಮಲೆ (ಎಡಗಡೆಯವರು) ಅವರು ಪಿ. ಸಾಯಿನಾಥ್ (ಎಡದಿಂದ ನಾಲ್ಕನೆಯವರು) ಅವರ ‘ಕೊನೆಯ ಹೀರೋಗಳು: ಭಾರತ ಸ್ವಾತಂತ್ರ್ಯದ ಕಾಲಾಳು ಯೋಧರು’ ಪುಸ್ತಕ ಬಿಡುಗಡೆ ಮಾಡಿದರು. ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರಬೋಸ್ ಅವರ ಸೇನೆಯಲ್ಲಿ ಕೆಲಸ ಮಾಡಿದ್ದ ಲಕ್ಷ್ಮಿ ಪಾಂಡಾ ಅವರ ಮೊಮ್ಮಗ ಪ್ರತ್ಯುಶ್, ಮಗಳು ರೇಣುಕಾ ಪಾತ್ರೊ, ನ್ಯಾ.ಎಚ್.ಎನ್. ನಾಗಮೋಹನದಾಸ್ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷ ಎನ್.ಆರ್. ವಿಶುಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

‘ದೇಶದ ಸ್ವಾತಂತ್ರ್ಯಕ್ಕಾಗಿ ಹಲವರು ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಕೆಲವು ಮಹಿಳೆಯರು ಹೋರಾಟಗಾರರಿಗೆ ಅನ್ನ–ಆಹಾರ ನೀಡಿದ್ದಾರೆ. ಅವರಿಗೆ ರಕ್ಷಣೆ ನೀಡಿ, ಬ್ರಿಟಿಷರ ದಾಳಿಯಿಂದ ರಕ್ಷಿಸಿದ್ದಾರೆ. ವಾಸ್ತವದಲ್ಲಿ ಇವರೆಲ್ಲ ಸ್ವಾತಂತ್ರ್ಯ ಹೋರಾಟಗಾರರೇ. ಆದರೆ, ಕೇಂದ್ರ ಸರ್ಕಾರ, ಸ್ವಾತಂತ್ರ್ಯ ಹೋರಾಟಗಾರರೆಂದರೆ, ಜೈಲು ಶಿಕ್ಷೆ ಅನುಭವಿಸಿರಬೇಕು ಎಂಬ ಮಾನದಂಡವನ್ನು ‘ಸ್ವತಂತ್ರ ಸೈನಿಕ ಸಮ್ಮಾನ್’ ಯೋಜನೆಯಡಿ ವಿಧಿಸಿದೆ. ಇದರಿಂದ ಹಲವರು ಪಿಂಚಣಿಯಿಂದ ವಂಚಿತರಾಗಿದ್ದಾರೆ. ಜೈಲಿಗೆ ಹೋಗಿ ಬಂದವರು ಮಾತ್ರ ಸ್ವಾತಂತ್ರ್ಯ ಹೋರಾಟಗಾರರೇ’ ಎಂದು ಪ್ರಶ್ನಿಸಿದರು.

ರಸ್ತೆಗೆ ಬಂದ ಕೋಮುವಾದ: ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ, ‘ಅತ್ಯಂತ ಸಂಕೀರ್ಣ ಕಾಲಘಟ್ಟದಲ್ಲಿ ನಾವಿದ್ದೇವೆ. 1992ರಲ್ಲಿ ಎಲ್.ಕೆ.ಅಡ್ವಾಣಿ ಅವರು ರಥಯಾತ್ರೆ ನಡೆಸಿದರು. ಅದು ಭಾರತವನ್ನು ಆಳವಾಗಿ ಘಾಸಿಗೊಳಿಸಿತು. ಈ ಗಾಯ ಮಾಯಲು ತುಂಬಾ ಸಮಯಬೇಕು. ಈಗ ಕೋಮುವಾದ ಡಾಂಬರು ರಸ್ತೆಗೆ ಬಂದು ತಲುಪಿದೆ. ರಸ್ತೆಯ ಮೇಲಿನ ಬಿಳಿ ಗೆರೆಯ ಆಚೆಗೆ ಮುಸ್ಲಿಮರು ಈಚೆಗೆ ಹಿಂದೂಗಳು ಎಂದು ನಿರ್ಬಂಧಿಸಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಸ್ವಾತಂತ್ರ್ಯಕ್ಕಾಗಿ ಹೋರಾಡಿದ ತೆರೆಮರೆಯ ಹೀರೋಗಳನ್ನು ಗುರುತಿಸುವ ಕೆಲಸವಾಗಿಲ್ಲ. ಇಂದು ಯುವಜನರಿಗೆ ಚರಿತ್ರೆಯ ಬಗ್ಗೆ ತಿಳಿದಿಲ್ಲ. ಕಲ್ಪಿತ ಕಥೆಗಳಲ್ಲಿ ಬರುವ ‘ಉರಿಗೌಡ, ನಂಜೇಗೌಡ’ರನ್ನು ನಂಬುವವರೇ ಜಾಸ್ತಿ. ಇತಿಹಾಸ ಪ್ರಾಧ್ಯಾಪಕರು ಇಂಥವುಗಳಿಗೆ ಪ್ರತಿಕ್ರಿಯಿಸಿ, ಇದು ಸತ್ಯವಲ್ಲವೆಂದು ಮನವರಿಕೆ ಮಾಡಿಸಬೇಕಿತ್ತು. ಆದರೆ, ಆದಿಚುಂಚನಗಿರಿ ಮಠದ ಸ್ವಾಮೀಜಿ ಅವರು ಆ ಕೆಲಸ ಮಾಡಿ, ಚರ್ಚೆ ಅಂತ್ಯಗೊಳಿಸಬೇಯಿತು. ಇದು ದುರದೃಷ್ಟಕರ’ ಎಂದರು.

ಪುಸ್ತಕ ಪರಿಚಯ

ಪುಸ್ತಕ: ‘ಕೊನೆಯ ಹೀರೋಗಳು: ಭಾರತ ಸ್ವಾತಂತ್ರ್ಯದ ಕಾಲಾಳು ಯೋಧರು’
ಮೂಲ ಲೇಖಕ: ಪಿ. ಸಾಯಿನಾಥ್
ಅನುವಾದಕ: ಜಿ.ಎನ್. ಮೋಹನ್
ಪುಟಗಳು: 250
ಬೆಲೆ: ₹ 300
ಪ್ರಕಾಶನ: ಬಹುರೂಪಿ

ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಅನೇಕ ಮಂದಿ ಕೊಡುಗೆ ನೀಡಿದ್ದಾರೆ. ಬೆಳಕಿಗೆ ಬರದವರು, ಚರಿತ್ರೆಯಲ್ಲಿ ದಾಖಲಾಗದವರನ್ನು ಮುನ್ನೆಲೆಗೆ ತರುವ ಕೆಲಸ ಆಗಬೇಕು

ಎಚ್.ಎನ್. ನಾಗಮೋಹನದಾಸ್
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಜಾಗೃತಿಗಾಗಿ ‘ಪ್ಲಾಸ್ಟಿಕ್ ಹಾವು– ಏಣಿ ಆಟ’

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗವು ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯುಡಬ್ಲ್ಯುಎಫ್) ಸಹಯೋಗದೊಂದಿಗೆ ಕೆ.ಎಸ್.ಆರ್. ಬೆಂಗಳೂರು ರೈಲು ನಿಲ್ದಾಣದಲ್ಲಿ ‘ಪ್ಲಾಸ್ಟಿಕ್ ಹಾವುಗಳು ಮತ್ತು ಏಣಿಗಳು’ ಎಂದು ವಿನೂತನ ರೀತಿಯಲ್ಲಿ ಪ್ಲಾಸ್ಟಿಕ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದೆ.

ಹಾವುಗಳ ಬದಲಿಗೆ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಏಣಿಗಳ ಬದಲಿಗೆ ಬಳ್ಳಿ/ಮರಗಳ ಚಿತ್ರಗಳಿವೆ. ಆಟವು ಆಟಗಾರರಿಗೆ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಉಪಯುಕ್ತ ಸಂಗತಿಗಳನ್ನು ಮತ್ತು ಪ್ಲಾಸ್ಟಿಕ್ ಬಳಕೆಯನ್ನು ಹೇಗೆ ಕಡಿಮೆ ಮಾಡುವುದು ಎಂಬುದರ ಕುರಿತು ಸಲಹೆಗಳನ್ನು ನೀಡುತ್ತದೆ. ಡಬ್ಲ್ಯುಡಬ್ಲ್ಯುಎಫ್‌ನಿಂದ ನಿಯೋಜಿತರಾದ ಸ್ವಯಂಸೇವಕರು ಸಂದರ್ಶಕರಿಗೆ ಮಾರ್ಗದರ್ಶನ ನೀಡಿದರು.

ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅ.2ರ ವರೆಗೆ ಈ ಜಾಗೃತಿ ಆಟ ಮುಂದುವರಿಯಲಿದೆ ಎಂದು ಬೆಂಗಳೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೀಶ್ ಮೋಹನ್ ಮಾಹಿತಿ ನೀಡಿದರು.

ಮನರಂಜನೆಯೊಂದಿಗೆ ಶಿಕ್ಷಣ ಮತ್ತು ಜಾಗೃತಿಯನ್ನು ಈ ಅಭಿಯಾನ ನೀಡುತ್ತದೆ ಎಂದು ಡಬ್ಲ್ಯುಡಬ್ಲ್ಯುಎಫ್ ರಾಜ್ಯ ಕಚೇರಿ ನಿರ್ದೇಶಕ ರಾಹುಲ್ ಸುಂದರರಾಜನ್ ಅವರು ತಿಳಿಸಿದರು.

ದಿವಂಗತ ಜೆ.ಎಚ್. ಪಟೇಲ್ ಅವರ 93ನೇ ಜನ್ಮ ದಿನಾಚರಣೆ

‘ರಾಜಕಾರಣದಲ್ಲಿ ಪರಿವರ್ತನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್.ಪಟೇಲ್ ಅವರು ಜನಕಲ್ಯಾಣದ ಬಗ್ಗೆಯೇ ಚಿಂತಿಸುತ್ತಿದ್ದರು. ಪಟೇಲ್ ಅವರ ಆಲೋಚನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ರಾಜಕಾರಣದಲ್ಲಿ ಪರಿವರ್ತನೆ ತರಬೇಕಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಜೆ.ಎಚ್.ಪಟೇಲ್ ಪ್ರತಿಷ್ಠಾನದ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಜೆ.ಎಚ್.ಪಟೇಲ್ ಅವರ 93ನೇ ಜನ್ಮ ದಿನಾಚರಣೆ ಹಾಗೂ ರಾಜ್ಯದ ಉಜ್ವಲ ಭವಿಷ್ಯಕ್ಕಾಗಿ ಚಿಂತನ–ಮಂಥನ ಉದ್ಘಾಟಿಸಿ ಅವರು ಮಾತನಾಡಿದರು.

‘ಪಟೇಲ್ ಅವರು ಮುಂದಾಲೋಚನೆ ನಾಯಕ ಎನಿಸಿದ್ದರು. ರಾಜ್ಯದ ಹಿತದೃಷ್ಟಿಯಿಂದ ಪಟೇಲ್ ನಿರ್ಧಾರ ಕೈಗೊಳ್ಳುತ್ತಿದ್ದರು’ ಎಂದು ಹೇಳಿದರು.

‘ಜಿಲ್ಲೆಗಳ ವಿಭಜನೆ ಮಾಡಲು ಅನೇಕರು ವಿರೋಧ ಮಾಡಿದ್ದರು. ಆದರೆ, ಆಡಳಿತದ ಅನುಕೂಲಕ್ಕೆ ಹೊಸ ಜಿಲ್ಲೆಗಳ ಅಗತ್ಯವಿದೆ ಎಂದು ಏಳು ಜಿಲ್ಲೆಗಳನ್ನು ಮಾಡಿದ್ದರು’ ಎಂದರು.

ಜೆ.ಎಚ್.ಪಟೇಲ್ ಪ್ರತಿಷ್ಠಾನದ ವ್ಯವಸ್ಥಾಪಕ ಧರ್ಮದರ್ಶಿ ಮಹಿಮ ಜೆ. ಪಟೇಲ್ ಮಾತನಾಡಿ, ‘ಇಂದಿನ ಪರಿಸ್ಥಿತಿಯನ್ನು ವಿಮರ್ಶೆಗೆ ಒಳಪಡಿಸಬೇಕಿದೆ. ಪರಿಸ್ಥಿತಿಯನ್ನು ವರ್ಣನೆ ಮಾಡುವುದರಿಂದ ಹೆಚ್ಚು ಪ್ರಯೋಜನ ಇಲ್ಲ. ಭವಿಷ್ಯ ಹೇಗಿರಬೇಕು ಎಂಬುದರ ಬಗ್ಗೆ ಆಲೋಚಿಸಬೇಕಿದೆ’ ಎಂದು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್. ಪಟೇಲ್ ಅವರ 93ನೇ ಜನ್ಮ ದಿನಾಚರಣೆಯಲ್ಲಿ ಅವರ ಭಾವಚಿತ್ರಕ್ಕೆ ಶಾಸಕ ಬಸವರಾಜ ಬೊಮ್ಮಾಯಿ ಅವರು ಪುಷ್ಪನಮನ ಸಲ್ಲಿಸಿದರು. ಮಹಿಮ ಜೆ. ಪಟೇಲ್, ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಇದ್ದರು

‘ನಾನು ತುಂಗ ಮೂಲ ಉಳಿಸುವಂತೆ ಹೋರಾಟ ನಡೆಸಿದ್ದೆ. ಚುನಾವಣೆಗಳಲ್ಲಿ ಸುಧಾರಣೆ ತರಲು ಉಪವಾಸ ಸತ್ಯಾಗ್ರಹ ನಡೆಸಿದ್ದೆ. ಚುನಾವಣೆಯಲ್ಲಿ ನಾನೇ ಸೋಲಬೇಕಾಯಿತು’ ಎಂದರು.

‘ಸರ್ಕಾರಗಳು ಬದಲಾವಣೆಯಾದರೂ ವ್ಯವಸ್ಥೆಯಲ್ಲಿ ಸುಧಾರಣೆ ಕಾಣುತ್ತಿಲ್ಲ. ಸಮಾಜದಲ್ಲಿ ಪರಿವರ್ತನೆ ಆಗಬೇಕಿದೆ’ ಎಂದು ಹೇಳಿದರು.

‘2000ನೇ ಇಸವಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸುಧಾರಣೆ ತರುವುದು ಹಾಗೂ ಅಧಿಕಾರ ವಿಕೇಂದ್ರೀಕರಣದ ಆಶಯದಿಂದ ಪ್ರತಿಷ್ಠಾನ ಸ್ಥಾಪಿಸಿದ್ದೆವು. ಮುಂದಿನ ದಿನಗಳಲ್ಲಿ ಬದಲಾವಣೆ ತರಲು ಎರಡು ತಿಂಗಳಿಗೆ ಒಮ್ಮೆ ಚಿಂತನ–ಮಂಥನ ನಡೆಸಲಾಗುವುದು’ ಎಂದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ, ‘ಜನತಾ ಪರಿವಾರಕ್ಕೆ ನಾಯಕತ್ವ ಬೆಳೆಸುವ ಶಕ್ತಿಯಿತ್ತು. ಅಲ್ಲಿಂದ ಹೊರಹೋದವರು ಮುಂಚೂಣಿ ನಾಯಕರಾಗಿದ್ದಾರೆ’ ಎಂದು ಹೇಳಿದರು.

‘ಜೆ.ಎಚ್.ಪಟೇಲ್‌ರು ಮಾತಿನಲ್ಲೇ ಬಿಸಿ ಮುಟ್ಟಿಸುತ್ತಿದ್ದರು. ಅವರ ಮಾತಿನಲ್ಲಿ ಎಲ್ಲೂ ಸುಳ್ಳು ಇರಲಿಲ್ಲ’ ಎಂದು ಹೇಳಿದರು.

ದೇಶಕ್ಕೆ ಮೊದಲು ನನ್ನ ಪ್ರೀತಿ: ಸಂವಾದದಲ್ಲಿ ಕಾದಂಬರಿಕಾರ

ನಾನು ಭಾರತೀಯ ಬರಹಗಾರ: ಭೈರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಮೊದಲು ಭಾರತೀಯ. ಭಾರತದ ಅಂಗವಾಗಿ ಕನ್ನಡಿಗ. ದೇಶಕ್ಕೆ ಮೊದಲು ನನ್ನ ಪ್ರೀತಿ. ನಾನು ಭಾರತೀಯ ಬರಹಗಾರ’ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಹೇಳಿದರು.

‘ಪರ್ವ’ ಕಾದಂಬರಿ ಇಂಗ್ಲಿಷ್ ನಾಟಕವಾಗುತ್ತಿರುವ ಕಾರಣ ಭಾನುವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

‘ನನ್ನ ಪ್ರತಿ ಕಾದಂಬರಿಯಲ್ಲಿರುವುದು ನನ್ನ ಹಳ್ಳಿ ಮಾತ್ರವಲ್ಲ, ದೇಶದ ಯಾವುದೇ ಹಳ್ಳಿಯ ಕಥೆಯಾಗಿರುತ್ತದೆ. ನಮ್ಮ ಅನುಭವ ಹಿಗ್ಗಿಸಿಕೊಂಡಾಗ, ವಿಸ್ತರಿಸಿಕೊಂಡಾಗ ಮಾತ್ರ ಬರವಣಿಗೆಯೂ ವಿಸ್ತಾರವಾಗಲು ಸಾಧ್ಯ’ ಎಂದರು.

‘ಕಾದಂಬರಿಯಲ್ಲಿ ನಾಟಕದ ಗುಣ ಇರಬೇಕು. ಆಗಲೇ ಅದು ಪರಿಪೂರ್ಣವಾಗುತ್ತದೆ. ನಾನು ಬಾಲ್ಯದಿಂದಲೇ ನಾಟಕ ನೋಡಿದ, ಓದಿದ ಕಾರಣದಿಂದ ನನ್ನ ಪರ್ವ ಕಾದಂಬರಿಯಲ್ಲಿ ನಾಟಕದ ಬಿಗಿ ಇರಲು ಸಾಧ್ಯವಾಯಿತು’ ಎಂದು ವಿವರಿಸಿದರು.

‘ಪರ್ವ ಬರೆಯುವಾಗ ಒಂದು ಅಂಕಿ ಅಂಶದ ಪಟ್ಟಿ ಮಾಡಿಕೊಂಡಿದ್ದೆ. ಮಹಾಭಾರತದಲ್ಲಿ ಅತಿ ಹಿರಿಯ ಅಂದರೆ ಭೀಷ್ಮ. ಅವರಿಗೆ 120 ವರ್ಷ. ಅತಿ ಕಿರಿಯ ಎಂದರೆ 16 ವರ್ಷದ ಅಭಿಮನ್ಯು. ಈ ಇಬ್ಬರ ನಡುವೆ ಬರುವ ಉಳಿದ ಪಾತ್ರಗಳಿಗೆ ಎಷ್ಟೆಷ್ಟು ವಯಸ್ಸು ಇರಬಹುದು ಎಂದು ಗುರುತು ಮಾಡಿಕೊಂಡಿದ್ದೆ. ಇದರಿಂದ ಕಾದಂಬರಿಯ ಸನ್ನಿವೇಶಗಳನ್ನು ಬರೆಯಲು ಸುಲಭವಾಯಿತು’ ಎಂದು ನೆನಪು ಮಾಡಿಕೊಂಡರು.



‘ಪರ್ವ’ ಸಂವಾದ ಕಾರ್ಯಕ್ರಮದಲ್ಲಿ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಮತ್ತು ನಿರ್ದೇಶಕ ಪ್ರಕಾಶ್ ಬೆಳವಾಡಿ ಮಾತುಕತೆಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ

‘ಪರ್ವ ಕಾದಂಬರಿ ಕನ್ನಡದಲ್ಲಿ 600 ಪುಟ ಇದೆ. ಇಂಗ್ಲಿಷ್ ಅನುವಾದದಲ್ಲಿ 950 ಪುಟಗಳಾಗಿವೆ. ಏಕೆಂದರೆ ಕನ್ನಡದಲ್ಲಿ ಒಂದು ವಾಕ್ಯದಲ್ಲಿ ಕಟ್ಟಿಕೊಡಬಲ್ಲ ಒಂದು ವಿಚಾರವನ್ನು ಇಂಗ್ಲಿಷ್‌ನಲ್ಲಿ ಸ್ವಲ್ಪ ವಿವರಿಸಬೇಕಾಗುತ್ತದೆ. ಇಲ್ಲದಿದ್ದರೆ ಪರಿಣಾಮ ಉಂಟಾಗುವುದಿಲ್ಲ. ಅದಕ್ಕೆ ಇಂಗ್ಲಿಷ್ ಅನುವಾದದ ಪುಟಗಳು ಹೆಚ್ಚಾಗಿವೆ. ಆದರೆ, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ನಾಟಕ ಪ್ರದರ್ಶನದ ಅವಧಿ 8 ಗಂಟೆಗಳು ಎಂಬುದಾಗಿ ಪ್ರಕಾಶ್ ಬೆಳವಾಡಿ ಭರವಸೆ ನೀಡಿದ್ದಾರೆ’ ಎಂದು ಭೈರಪ್ಪ ಹೇಳಿದರು.

ಕಾದಂಬರಿಕಾರರಾದ ಸಹನಾ ವಿಜಯಕುಮಾರ್ ಅವರು ಪರ್ವ ಕಾದಂಬರಿಯ ಅವಲೋಕನ ನಡೆಸಿ, ಭೈರಪ್ಪ ಮತ್ತು ಪ್ರಕಾಶ್ ಬೆಳವಾಡಿ ಅವರೊಂದಿಗೆ ಸಂವಾದ ನಡೆಸಿದರು. ಸಂಗೀತ ಅಕಾಡೆಮಿ ಅಧ್ಯಕ್ಷ ಸುಬ್ಬರಾಜ್ ಅರಸು ಇದ್ದರು.

‘ವ್ಯಾಸರು ಕ್ಷೇತ್ರ ಭೇಟಿ ಮಾಡಿಲ್ಲ’

‘ಮಹಾಭಾರತವನ್ನು ಬರೆದಿರುವ ವ್ಯಾಸರು ಎಲ್ಲವನ್ನು ವಿವರಿಸುತ್ತಾರೆ. ಆದರೆ, ಕ್ಷೇತ್ರ ಅಧ್ಯಯನ ಮಾಡಿ ಬರೆದಿಲ್ಲ. ವಿರಾಟನಗರದ ಬಗ್ಗೆ ಇರುವ ವಿವರಗಳನ್ನು ನೋಡಿದರೆ ಇದು ಅರ್ಥವಾಗುತ್ತದೆ. ಜೈಪುರ ತಾಲ್ಲೂಕಿನಲ್ಲಿ ಬರುವ ವಿರಾಟನಗರಕ್ಕೆ ನಾನು ಭೇಟಿ ನೀಡಿದಾಗ ಅದು ಗುಡ್ಡಗಾಡು ಪ್ರದೇಶ ಎಂಬುದು ಗೊತ್ತಾಯಿತು. ಗುಡ್ಡ–ತಗ್ಗು ಇರುವಲ್ಲಿ ಹೇಗೆ ರಥ ಹೋಗಲು ಸಾಧ್ಯ’ ಎಂದು ಎಸ್.ಎಲ್. ಭೈರಪ್ಪ ಪ್ರಶ್ನಿಸಿದರು.

‘ಕನ್ನಡದಲ್ಲಿ ಕುಮಾರಭಾರತ ತಂದ ಕುಮಾರವ್ಯಾಸರು ಕೂಡ ಕ್ಷೇತ್ರ ಅಧ್ಯಯನ ಮಾಡಿಲ್ಲ. ನಾನು ಕ್ಷೇತ್ರ ಅಧ್ಯಯನ ಮಾಡಿದಾಗ ಇದೆಲ್ಲ ಗೊತ್ತಾಯಿತು’ ಎಂದು ತಿಳಿಸಿದರು.

‘ಜೀವನದ ದೊಡ್ಡ ಸಾಧನೆ’

‘ಪರ್ವ ನಾಟಕ ಮಾಡಿರುವುದು ನನ್ನ ಜೀವನದ ದೊಡ್ಡ ಸಾಧನೆ’ ಎಂದು ‘ಪರ್ವ’ ಕನ್ನಡ ಮತ್ತು ಇಂಗ್ಲಿಷ್ ನಾಟಕಗಳ ನಿರ್ದೇಶಕ ಪ್ರಕಾಶ್ ಬೆಳವಾಡಿ ಹೇಳಿದರು.

‘ಇಷ್ಟು ವರ್ಷ ಜೀವನವನ್ನು ವ್ಯರ್ಥ ಮಾಡಿದ್ದಿ. ಈಗ ಒಳ್ಳೆಯ ಕೆಲಸ ಮಾಡಿದ್ದಿ ಎಂದು ನನ್ನ ಪತ್ನಿ ಕೂಡ ಹೇಳಿದರು. ಅದನ್ನು ನಾನು ನಂಬುತ್ತೀನಿ. ಈಗ ಬುದ್ಧಿ ಬಂದಿದೆ’ ಎಂದು ಹೇಳಿದರು.

‘ಉಚಿತವಾಗಿ ನಾನು ನೋಡಿಲ್ಲ’

‘ಪರ್ವ – ಕನ್ನಡ ನಾಟಕ ಪ್ರದರ್ಶನಕ್ಕೆ ಟಿಕೆಟ್ ದರ ₹ 500. ಹಣ ನೀಡಿ ಟಿಕೆಟ್ ಖರೀದಿಸಿದ ಮೊದಲಿಗ ನಾನು. ಇಂಗ್ಲಿಷ್ ನಾಟಕಕ್ಕೆ ಟಿಕೆಟ್ ದರ ₹ 3,500 ಇಟ್ಟಿದ್ದಾರೆ. ಈ ನಾಟಕವನ್ನೂ ಹಣ ಕೊಟ್ಟೇ ನೋಡುತ್ತೇನೆ’ ಎಂದು ಎಸ್.ಎಲ್. ಭೈರಪ್ಪ ಅವರು ಹೇಳಿದರು.

ಸೋಮವಾರ, ಅಕ್ಟೋಬರ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 273 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪದಕ ಅರ್ಧಶತಕ ಸಾಧಿಸಿದ ಭಾರತ

ಅಥ್ಲೆಟಿಕ್ಸ್‌ನಲ್ಲಿ ಸುಗ್ಗಿಯ ಹಿಗ್ಗು

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಭಾರತವು ಪದಕ ಗಳಿಕೆಯಲ್ಲಿ ಅರ್ಧಶತಕದ ಗಡಿ ದಾಟಿತು. ಒಟ್ಟು 53 ಪದಕಗಳನ್ನು ಜಯಿಸಿದೆ. ಅದರಲ್ಲಿ 13 ಚಿನ್ನ, 21 ಬೆಳ್ಳಿ ಮತ್ತು 19 ಕಂಚಿನ ಪದಕಗಳು ಸೇರಿವೆ. ಈ ಬಾರಿ ಪದಕ ಗಳಿಕೆ ಶತಕ ಬಾರಿಸುವ ಗುರಿ ಇಟ್ಟುಕೊಂಡಿರುವ ಭಾರತ ಭಾನುವಾರ ಅಥ್ಲೆಟಿಕ್ಸ್‌ನಲ್ಲಿ ಸುಗ್ಗಿಯ ಸಂಭ್ರಮ ಆಚರಿಸಿದರು. ಈ ದಿನ ಗಳಿಕೆಯಾದ 15 ಪದಕಗಳಲ್ಲಿ 9 ಅಥ್ಲೆಟಿಕ್ಸ್‌ನಿಂದ ಬಂದವು.



ಪುಟ 10

ತೆಲಂಗಾಣದಲ್ಲಿ ಭಾರಿ ಯೋಜನೆಗಳಿಗೆ ಚಾಲನೆ • ಮಧ್ಯಪ್ರದೇಶ, ರಾಜಸ್ಥಾನಕ್ಕೆ ಇಂದು ಭೇಟಿ

ಪ್ರಚಾರಕ್ಕೆ ಮೋದಿ ನಾಂದಿ

ಪ್ರಜಾವಾಣಿ ವಾರ್ತೆ

ಮೆಹಬೂಬ್ ನಗರ (ತೆಲಂಗಾಣ): ಪ್ರಧಾನಿ ನರೇಂದ್ರ ಮೋದಿ ಅವರು ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಪದೇ ಪದೇ ಭೇಟಿ ನೀಡುತ್ತಿದ್ದಾರೆ ಮತ್ತು ಭರಪೂರ ಕೊಡುಗೆಗಳನ್ನು ಘೋಷಿಸುತ್ತಿದ್ದಾರೆ. ಮೋದಿ ಅವರು ತೆಲಂಗಾಣಕ್ಕೆ ಭಾನುವಾರ ಭೇಟಿ ನೀಡಿದ್ದು ₹13,545 ಕೋಟಿ ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಿದರು.

ಮೋದಿ ಅವರು ಮಧ್ಯ ಪ್ರದೇಶ ಮತ್ತು ರಾಜಸ್ಥಾನಕ್ಕೆ ಸೋಮವಾರ ಭೇಟಿ ನೀಡಲಿದ್ದಾರೆ. ರಾಜಸ್ಥಾನದಲ್ಲಿ ₹7,000 ಕೋಟಿ ಮತ್ತು ಮಧ್ಯ ಪ್ರದೇಶದಲ್ಲಿ ₹19,260 ಕೋಟಿ ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ ಅಥವಾ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯವು ತಿಳಿಸಿದೆ.

ಈ ಮೂರೂ ರಾಜ್ಯಗಳ ವಿಧಾನಸಭೆಗೆ ಈ ವರ್ಷದ ಕೊನೆಯಲ್ಲಿ ಚುನಾವಣೆ ನಡೆಯಲಿದೆ.

ಪ್ರಧಾನಿ ಮೋದಿ ಅವರು ತೆಲಂಗಾಣದಲ್ಲಿ ಬಿಜೆಪಿ ಚುನಾವಣಾ ಪ್ರಚಾರಕ್ಕೆ ನಾಂದಿ ಹಾಡಿದರು. ಮೆಹಬೂಬ್ ನಗರದಲ್ಲಿ ನಡೆದ 'ಪಾಲಮೂರು ಪ್ರಜಾ ಘರ್ಜನಾ' ಬೃಹತ್ ಸಾರ್ವಜನಿಕ ಸಭೆಯಲ್ಲಿ

ಮುಖ್ಯಾಂಶಗಳು
- ₹13,545 ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ
- ತೆಲಂಗಾಣದಲ್ಲಿ ಅರಿಸಿನ ಮಂಡಳಿ, ಕೇಂದ್ರೀಯ ಗಿರಿಜನರ ವಿವಿ ಸ್ಥಾಪನೆ
- ರೋಡ್ ಶೋ ಮೂಲಕ ಸಮಾವೇಶ ಸ್ಥಳಕ್ಕೆ ಬಂದ ಮೋದಿ

ಆಡಳಿತಾರೂಢ ಬಿಆರ್‌ಎಸ್ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಬಿಜೆಪಿಯ ಉನ್ನತ ನಾಯಕರ ಪೈಕಿ ಮೋದಿ ಅವರೇ ಇಲ್ಲಿಗೆ ಮೊದಲಿಗೆ ಭೇಟಿ ನೀಡಿ ಪ್ರಚಾರ ಆರಂಭಿಸಿದರು.

'ರಾಜ್ಯದಲ್ಲಿರುವ ಭ್ರಷ್ಟ ಸರ್ಕಾರದ ಬದಲು ಪಾರದರ್ಶಕ ಮತ್ತು ಪ್ರಾಮಾಣಿಕ ಸರ್ಕಾರ ಜನರಿಗೆ ಬೇಕಿದೆ. ಸುಳ್ಳು ಭರವಸೆಗಳಿಗಿಂತ ತಳಮಟ್ಟ ದಲ್ಲಿ ಕೆಲಸಗಳು ಆಗುವುದು ಬೇಕಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬೇಕಿರುವುದರಿಂದ ತೆಲಂಗಾಣಕ್ಕೆ ಬದಲಾವಣೆ ಅಗತ್ಯವಿದೆ' ಎಂದು ಹೇಳಿದರು.

9ನೇ ಪುಟ ನೋಡಿ



ಹೈದರಾಬಾದ್– ರಾಯಚೂರು– ಹೈದರಾಬಾದ್ ರೈಲು ಸೇವೆಗೆ ಪ್ರಧಾನಿ ಮೋದಿ ಹಸಿರು ನಿಶಾನೆ ತೋರಿದರು. ತೆಲಂಗಾಣ ರಾಜ್ಯಪಾಲೆ ತಮಿಳುಸೈ ಸೌಂದರ್‌ರಾಜನ್, ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಇದ್ದಾರೆ ಪಿಟಿಐ ಚಿತ್ರ

ಎಲ್‌ಪಿಜಿ ಪೈಪ್‌ಲೈನ್ ಯೋಜನೆ ಉದ್ಘಾಟನೆ

ಹಾಸನ– ಚೆರ್ಲಪಲ್ಲಿ ಎಲ್‌ಪಿಜಿ ಪೈಪ್‌ಲೈನ್ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು.

₹2,170 ಕೋಟಿ ವೆಚ್ಚದಲ್ಲಿ ಇದನ್ನು ಕಾರ್ಯಗತಗೊಳಿಸಲಾಗಿದೆ. ಈ ಪೈಪ್‌ಲೈನ್ ಕರ್ನಾಟಕದ ಹಾಸನದಿಂದ ಹೈದರಾಬಾದ್‌ನ ಹೊರವಲಯ ಚೆರ್ಲಪಲ್ಲಿಗೆ ಅನಿಲ ಸರಬರಾಜು ಮತ್ತು ವಿತರಣೆ ಮಾಡುತ್ತದೆ.

ಕೃಷ್ಣ ನಿಲ್ದಾಣದಿಂದ ಹೈದರಾಬಾದ್ (ಕಾಚಿಗುಡ)– ರಾಯಚೂರು– ಹೈದರಾಬಾದ್ (ಕಾಚಿಗುಡ) ರೈಲು ಸೇವೆಗೆ ಹಸಿರು ನಿಶಾನೆ ತೋರಿದರು.

ಈ ರೈಲು ತೆಲಂಗಾಣದಲ್ಲಿ ಹೈದರಾಬಾದ್, ರಂಗಾರೆಡ್ಡಿ, ಮೆಹಬೂಬ್‌ನಗರ ಮತ್ತು ನಾರಾಯಣ್‌ಪೇಟೆ ಜಿಲ್ಲೆ ಹಾಗೂ ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಗೆ ಸಂಪರ್ಕ ಕಲ್ಪಿಸುತ್ತದೆ.

ಭಾರತ–ಅಮೆರಿಕ ಬಂಧ ಹೊಸ ಎತ್ತರಕ್ಕೆ: ಜೈಶಂಕರ್

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಅಮೆರಿಕದ ಸಂಬಂಧವು ಈವರೆಗಿನ ಅತ್ಯುನ್ನತ ಮಟ್ಟಕ್ಕೆ ಏರಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಬಣ್ಣಿಸಿದ್ದಾರೆ. ಎರಡೂ ದೇಶಗಳ ನಡುವಣ ಸಂಬಂಧವನ್ನು ಚಂದ್ರಯಾನಕ್ಕೆ ಹೋಲಿಸಿದ್ದಾರೆ. ಸಂಬಂಧವು ಚಂದ್ರನವರೆಗೆ ಮಾತ್ರವಲ್ಲ ಅದನ್ನೂ ದಾಟಿ ಹೋಗಲಿದೆ ಎಂದಿದ್ದಾರೆ.

ಭಾರತದ ರಾಯಭಾರ ಕಚೇರಿಯು ಇಲ್ಲಿನ ಇಂಡಿಯಾ ಹೌಸ್‌ನಲ್ಲಿ ಆಯೋಜಿಸಿದ್ದ 'ಬಾಂಧವ್ಯದ ಸಂಭ್ರಮಾಚಾರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಭಾರತ ಮೂಲದ ಅಮೆರಿಕನ್ನರನ್ನು ಉದ್ದೇಶಿಸಿ ಮಾತನಾಡಿದರು.

ಇಂಡಿಯಾ ಹೌಸ್‌ನಲ್ಲಿ ಭಾರತ–ಅಮೆರಿಕನ್ನರ ಇಷ್ಟು ದೊಡ್ಡ ಸಮಾವೇಶ ಈತನಕ ನಡೆದಿರಲಿಲ್ಲ.

ಅಮೆರಿಕದ ಬೆಂಬಲ ಇಲ್ಲದೇ ಇರುತ್ತಿದ್ದರೆ ಜಿ20 ಶೃಂಗ ಸಭೆಯು ಈ ಪ್ರಮಾಣದ ಯಶಸ್ಸು ಗಳಿಸುವುದಕ್ಕೆ ಸಾಧ್ಯವಿರಲಿಲ್ಲ. ಎಲ್ಲವೂ ಸರಿಯಾಗಿ ನಡೆದರೆ ಆತಿಥ್ಯ ವಹಿಸಿದವರಿಗೆ ಹೆಸರು ಬರುತ್ತದೆ. ಇದು ಸಹಜ ಕೂಡ. ಆದರೆ ಎಲ್ಲ ಸದಸ್ಯ ರಾಷ್ಟ್ರಗಳು ಜೊತೆಯಾಗಿ ನಿಂತಿದ್ದರಿಂದ ಯಶಸ್ಸು ಸಾಧ್ಯವಾಯಿತು ಎಂದೂ ಜೈಶಂಕರ್ ಹೇಳಿದ್ದಾರೆ.

'ಜಿ20 ಯಶಸ್ಸಿನಲ್ಲಿ ಅಮೆರಿಕ ನೀಡಿರುವ ಬೆಂಬಲ ಮತ್ತು ಸಹಕಾರವನ್ನು ಮರೆಯಲಾಗದು. ಈ ಬೆಂಬಲವನ್ನು ವಾಷಿಂಗ್ಟನ್‌ನಲ್ಲಿ ನಿಂತು ಬಹಿರಂಗವಾಗಿಯೇ ಒಪ್ಪಿಕೊಳ್ಳಬೇಕು' ಎಂದು ಜೈಶಂಕರ್ ಹೇಳಿದರು.

ವಿಶಿಷ್ಟ ಬಾಂಧವ್ಯ: ಎರಡೂ ದೇಶಗಳ ಜನರ ನಡುವೆ ಇರುವ ಬಾಂಧವ್ಯದಿಂದಾಗಿ ದ್ವಿಪಕ್ಷೀಯ ಸಂಬಂಧವು ವಿಶಿಷ್ಟ ಆಯಾಮ ಪಡೆದುಕೊಂಡಿದೆ ಎಂದು ಅವರು ಹೇಳಿದ್ದಾರೆ.

'ದೇಶಗಳು ಪರಸ್ಪರ ವ್ಯಾಪಾರ ನಡೆಸುತ್ತವೆ. ದೇಶಗಳು ರಾಜಕೀಯವನ್ನೂ ನಡೆಸುತ್ತವೆ. ಸೇನಾ ಸಹಕಾರ ಇರುತ್ತದೆ. ಜಂಟಿ ಕವಾಯತು ನಡೆಸಲಾಗುತ್ತದೆ. ಸಾಂಸ್ಕೃತಿಕ ವಿನಿಮಯವೂ ನಡೆಯುತ್ತದೆ. ಆದರೆ, ಎರಡು ದೇಶಗಳು ಗಾಢವಾದ ಮನುಷ್ಯ ಬಾಂಧವ್ಯ ಹೊಂದುವುದು ಸಂಪೂರ್ಣವಾಗಿ ಭಿನ್ನವಾದ ವಿಷಯ. ನಮ್ಮ ಎರಡು ದೇಶಗಳ ನಡುವಣ ಸಂಬಂಧದ ಪ್ರಮುಖ ಲಕ್ಷಣವೇ ಇದಾಗಿದೆ' ಎಂದರು.

ಭಿನ್ನ ಭಾರತ

'ಈಗ ನಾನು ಉಲ್ಲೇಖಿಸುತ್ತಿರುವ ಭಾರತವು ಭಿನ್ನವಾದುದಾಗಿದೆ. ನೀವು ಇತರರಿಂದ ಕೇಳಿ ತಿಳಿದಿರುವ ಭಾರತವು ಈಗ ಚಂದ್ರಯಾನ–3 ಯೋಜನೆಯನ್ನು ಯಶಸ್ವಿಗೊಳಿಸಿದ ದೇಶವಾಗಿದೆ' ಎಂದು ಜೈಶಂಕರ್ ಹೇಳಿದ್ದಾರೆ.

'ಜಿ–20 ಶೃಂಗಸಭೆಯನ್ನು ಈ ಭಾರತವು ಅತ್ಯದ್ಭುತವಾಗಿ ಯಶಸ್ವಿಗೊಳಿಸಿದೆ. ಒಟ್ಟಿಗೆ ತರಲು ಸಾಧ್ಯವೇ ಇಲ್ಲ ಎಂದು ಎಲ್ಲರೂ ಹೇಳಿದ 20 ದೇಶಗಳನ್ನು ಭಾರತವು ಜೊತೆಯಾಗಿಸಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ತನ್ನ ಜನರನ್ನು ನೋಡಿಕೊಂಡದ್ದು ಮಾತ್ರವಲ್ಲದೆ, ನೂರಕ್ಕೂ ಹೆಚ್ಚು ರಾಷ್ಟ್ರಗಳಿಗೆ ನೆರವನ್ನು ಕೊಟ್ಟಿದೆ' ಎಂದು ಅವರು ವಿವರಿಸಿದರು.

ದಾಖಲೆಯಲ್ಲಷ್ಟೇ ವೈದ್ಯರು ಗೈರುಹಾಜರಿಯೇ ಖಾತರಿ

ನವದೆಹಲಿ (ಪಿಟಿಐ): ದೇಶದ ಬಹುತೇಕ ವೈದ್ಯಕೀಯ ಕಾಲೇಜುಗಳಲ್ಲಿ ದಾಖಲೆಗಳಲ್ಲಷ್ಟೇ ವೈದ್ಯರ ಕಾರ್ಯಭಾರ ತೋರಿಸಿ, ಆಡಳಿತ ಮಂಡಳಿಗಳು ಸುಳ್ಳು ಹಾಜರಿ ಹಾಕಿರುವ ಸಂಗತಿಯು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ನಡೆಸಿದ ಮೌಲ್ಯಮಾಪನದಲ್ಲಿ ತಿಳಿದು ಬಂದಿದೆ.

ಹಲವು ಕಾಲೇಜುಗಳಲ್ಲಿ ಸ್ಥಾನಿಕ ವೈದ್ಯರು ಕನಿಷ್ಠ ಶೇ 50ರಷ್ಟು ಹಾಜರಾತಿ ಹೊಂದಿರಬೇಕು ಎಂಬ ನಿಯಮವನ್ನೂ ಪಾಲಿಸಿಲ್ಲ.

2022–23ನೇ ಸಾಲಿನಲ್ಲಿ ಕಾಲೇಜುಗಳಿಗೆ ಮಾನ್ಯತೆ ನೀಡಲು ಅಥವಾ ನವೀಕರಣಕ್ಕೆ ಸಂಬಂಧಿಸಿದಂತೆ ದೇಶದ 27 ರಾಜ್ಯಗಳ 246 ವೈದ್ಯಕೀಯ ಕಾಲೇಜುಗಳನ್ನು ಎನ್‌ಎಂಸಿ ಮೌಲ್ಯಮಾಪನಕ್ಕೆ ಒಳಪಡಿಸಿದಾಗ ಈ ವಿಷಯ ಗೊತ್ತಾಗಿದೆ.

'ತುರ್ತು ಚಿಕಿತ್ಸಾ ವಿಭಾಗದಲ್ಲಿ ಅಪಘಾತ ವೈದ್ಯಾಧಿಕಾರಿ ಹೊರತುಪಡಿಸಿದರೆ ಯಾರೊಬ್ಬರೂ ಇರುವುದಿಲ್ಲ. ಅಲ್ಲಿಗೆ ವೈದ್ಯರು ಅಥವಾ ವಿದ್ಯಾರ್ಥಿಗಳು ಭೇಟಿ ನೀಡುವುದಿಲ್ಲ. ಹಾಗಾಗಿ, ಅಲ್ಲಿ ಯಾರೊಂದಿಗೂ ಮಾತುಕತೆಗೆ ಅವಕಾಶವೂ ಇರುವುದಿಲ್ಲ ಎಂಬುದು ಅಧಿಕಾರಿಗಳು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಬೆಳಕಿಗೆ ಬಂದಿದೆ' ಎಂದು ಆಯೋಗ ಹೇಳಿದೆ.

'ಒಂದು ವೇಳೆ ತುರ್ತು ಚಿಕಿತ್ಸಾ ವಿಭಾಗಕ್ಕೆ ವೈದ್ಯಕೀಯ ವಿದ್ಯಾರ್ಥಿಗಳನ್ನು ನಿಯೋಜಿಸಿದರೆ ಅದು ಅವರ ಪಾಲಿಗೆ ವಿರಾಮದ ಅವಧಿ ಎಂದು ಭಾವಿಸಲಾಗುತ್ತದೆ' ಎಂದು ಎನ್‌ಎಂಸಿಯ ಸ್ನಾತಕೋತ್ತರ ವೈದ್ಯಕೀಯ ಪದವಿ ಶಿಕ್ಷಣ ಮಂಡಳಿ (ಯುಜಿಎಂಇಬಿ) ಹೇಳಿದೆ.

9ನೇ ಪುಟ ನೋಡಿ

ಸೂಚನೆ ಪಾಲನೆಗೆ ನಿರ್ಲಕ್ಷ್ಯ

ವೈದ್ಯಕೀಯ ಕಾಲೇಜುಗಳ ಕಾರ್ಯಕ್ಷಮತೆ ಹಾಗೂ ಸಂಯೋಜಿತ ಆಸ್ಪತ್ರೆಗಳ ಮೌಲ್ಯಮಾಪನಕ್ಕೆ ಯುಜಿಎಂಇಬಿಯು ಕೃತಕ ಬುದ್ಧಿಮತ್ತೆಯ ಮೊರೆ ಹೋಗಿದೆ. ತರಗತಿಗಳಲ್ಲಿ ಬೋಧನೆ ಮತ್ತು ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುವ ವೈದ್ಯರ ಹಾಜರಾತಿಯನ್ನು ಆಧಾರ್ ಆಧಾರಿತ ಬಯೊಮೆಟ್ರಿಕ್ ವ್ಯವಸ್ಥೆಯಡಿ ದಾಖಲಿಸಲಾಗುತ್ತದೆ.

2020ರಲ್ಲಿ ಆಯೋಗವು ತುರ್ತು ಚಿಕಿತ್ಸಾ ವಿಭಾಗಗಳಲ್ಲಿ ವೈದ್ಯಕೀಯ ಸಿಬ್ಬಂದಿ ಹಾಗೂ ಹಿರಿಯ ಸ್ಥಾನಿಕ ವೈದ್ಯರ ಹಾಜರಾತಿಗೆ ಸಂಬಂಧಿಸಿದಂತೆ ಕನಿಷ್ಠ ಅಗತ್ಯ ಮಾನದಂಡ (ಎಂಎಸ್‌ಆರ್) ಪಾಲಿಸುವಂತೆ ಸೂಚಿಸಿತ್ತು.

9ನೇ ಪುಟ ನೋಡಿ

ಈದ್ ಮಿಲಾದ್ ಮೆರವಣಿಗೆ ವೇಳೆ ಹಿಂಸೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ರಾಗಿಗುಡ್ಡ-ಶಾಂತಿನಗರ ಪ್ರದೇಶದಲ್ಲಿ ಈದ್ ಮಿಲಾದ್ ಮೆರವಣಿಗೆ ಸಂದರ್ಭದಲ್ಲಿ ಕಟೌಟ್ ವಿಚಾರವಾಗಿ ಭಾನುವಾರ ಉಂಟಾದ ವಾಗ್ವಾದವು ಹಿಂಸಾಚಾರಕ್ಕೆ ತಿರುಗಿದೆ.

ಈ ವೇಳೆ ಹಿಂದೂ ಸಮುದಾಯದ ಆರಕ್ಕೂ ಹೆಚ್ಚು ಮನೆಗಳು ಹಾಗೂ ವಾಹನಗಳ ಮೇಲೆ ಗುಂಪೊಂದು ಕಲ್ಲು ತೂರಾಟ ನಡೆಸಿದೆ. ಮನೆಗಳ ಕಿಟಕಿ, ವಸ್ತುಗಳು ಹಾಗೂ ಒಮ್ನಿ ವ್ಯಾನ್, ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಶಾಂತಿನಗರ 9ನೇ ಕ್ರಾಸ್‌ನಲ್ಲಿ ಪೊಲೀಸರ ಮೇಲೂ ಗುಂಪೊಂದು ಕಲ್ಲು ತೂರಾಟ ನಡೆಸಿದೆ ಎಂದು ತಿಳಿದುಬಂದಿದೆ.

ಮುಖ್ಯಾಂಶಗಳು
- ಪರಿಸ್ಥಿತಿ ಈಗ ಶಾಂತ
- ಎರಡೂ ಸಮುದಾಯಗಳ 25ಕ್ಕೂ ಹೆಚ್ಚು ಜನರು ಪೊಲೀಸ್ ವಶಕ್ಕೆ
- ರಾಗಿಗುಡ್ಡ ಪ್ರದೇಶದ ವಾರ್ಡ್‌ಗಳು, ಶಾಂತಿನಗರ-ದಲ್ಲಿ ನಿಷೇಧಾಜ್ಞೆ



ಗುಂಪೊಂದು ವಾಹನದ ಮೇಲೆ ಕಲ್ಲು ತೂರಿ ಜಖಂಗೊಳಿಸಿದೆ

4ನೇ ಪುಟ ನೋಡಿ

ಹೊಸ ಮಾರ್ಗಸೂಚಿ ದರ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರ ಭಾನುವಾರದಿಂದ (ಅ.1) ಜಾರಿಯಾಗಿದೆ. ಸರ್ಕಾರಿ ರಜಾ ದಿನಗಳು ಇರುವ ಕಾರಣ ಮಂಗಳವಾರದಿಂದ ಹೊಸ ದರಗಳ ಅನುಸಾರ ಸ್ಥಿರಾಸ್ತಿಗಳ ಮಾರಾಟ, ಖರೀದಿ, ಗುತ್ತಿಗೆ ಸೇರಿದಂತೆ ವಿವಿಧ ಬಗೆಯ ದಸ್ತಾವೇಜುಗಳ ನೋಂದಣಿ ಆರಂಭವಾಗಲಿದೆ.

ಐದು ವರ್ಷಗಳ ಬಳಿಕ ರಾಜ್ಯದಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಲಾಗಿದೆ. ಸೆಪ್ಟೆಂಬರ್‌ನಲ್ಲಿ ಜಿಲ್ಲಾವಾರು ಪರಿಷ್ಕೃತ ದರಗಳ ಕರಡು ಪಟ್ಟಿಗಳನ್ನು ಪ್ರಕಟಿಸಲಾಗಿತ್ತು. ಹೊಸ ದರಗಳ ಪ್ರಕಾರ ದಸ್ತಾವೇಜುಗಳ ನೋಂದಣಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಸಿದ್ಧತೆ ಪೂರ್ಣಗೊಳಿಸಿದೆ. ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಆನೇಕಲ್ ಸೇರಿದಂತೆ ಬೆಂಗಳೂರಿನ ಹೊರ ವಲಯದಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳಲ್ಲಿ ಭಾರಿ ಏರಿಕೆ ಮಾಡಲಾಗಿದೆ.

4ನೇ ಪುಟ ನೋಡಿ

ವಾರದಲ್ಲಿ ₹1,200 ಕೋಟಿ ಸಂಗ್ರಹ

ಮಾರ್ಗಸೂಚಿ ದರ ಪರಿಷ್ಕರಣೆ ಪ್ರಕ್ರಿಯೆ ಆರಂಭವಾದ ಬೆನ್ನಲ್ಲೇ 20 ದಿನಗಳ ಅವಧಿಯಲ್ಲಿ ರಾಜ್ಯದಲ್ಲಿ ಭಾರಿ ಪ್ರಮಾಣದ ದಸ್ತಾವೇಜುಗಳ ನೋಂದಣಿಯಾಗಿದೆ. ಈ ಅವಧಿಯಲ್ಲಿ ₹ 1,762 ಕೋಟಿ ನೋಂದಣಿ ಮತ್ತು ಮುದ್ರಾಂಕ ತೆರಿಗೆ ಸಂಗ್ರಹವಾಗಿದೆ. ಅದರಲ್ಲಿ ₹ 1,200 ಕೋಟಿ ಸೆಪ್ಟೆಂಬರ್ ಕೊನೆಯ ವಾರದಲ್ಲೇ ಸಂಗ್ರಹವಾಗಿದೆ.

2022–23ನೇ ಆರ್ಥಿಕ ವರ್ಷದಲ್ಲಿ ನೋಂದಣಿ ಮತ್ತು ಮುದ್ರಾಂಕ ತೆರಿಗೆ ಮೂಲದಿಂದ ₹ 15 ಸಾವಿರ ಕೋಟಿ ಸಂಗ್ರಹಿಸುವ ಗುರಿ ಇತ್ತು. ವರ್ಷಾಂತ್ಯಕ್ಕೆ ₹ 17,873.97 ಕೋಟಿ ಸಂಗ್ರಹವಾಗಿತ್ತು. ಈ ವರ್ಷ ₹ 25 ಸಾವಿರ ಕೋಟಿ ಸಂಗ್ರಹದ ಗುರಿ ಇದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಭವಿಷ್ಯ ನಿಧಿ ಬೆಂಗಳೂರು ಪ್ರಾದೇಶಿಕ ಅಧಿಕಾರಿಗಳಾದ ಇನಕೋಟಿ ಶ್ರೀದೇವಿ, ರಾಜೇಶ್ ಚಂದ್ರ ಬಿ. ನೇತೃತ್ವದಲ್ಲಿ ರಾಜರಾಜೇಶ್ವರಿ ನಗರದಲ್ಲಿ ಸ್ವಚ್ಛತಾ ಅಭಿಯಾನ ಭಾನುವಾರ ನಡೆಯಿತು



ಬಿಬಿಎಂಪಿ ಅಧಿಕಾರಿಗಳ ನೇತೃತ್ವದಲ್ಲಿ ವಿವಿಧೆಡೆ ಸ್ವಚ್ಛತಾ ಕಾರ್ಯಕ್ರಮ ನಡೆಯಿತು



ಯಲಹಂಕ ಹಳೇನಗರದ ಬಿ.ಬಸವಲಿಂಗಪ್ಪ ಬಸ್ ನಿಲ್ದಾಣದಲ್ಲಿ ಬಿಎಸ್‌ಎಫ್ ಕೇಂದ್ರದ ಯೋಧರಿಂದ ಸ್ವಚ್ಛತಾಕಾರ್ಯ ನಡೆಯಿತು

ಗಾಂಧಿ ಸ್ಮರಣೆಯಲ್ಲಿ ಸ್ವಚ್ಛತೆಗೆ ಶ್ರಮದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಯವರ 154ನೇ ಜಯಂತಿ ಅಂಗವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ 1,900ಕ್ಕೂ ಹೆಚ್ಚು ಸ್ಥಳಗಳಲ್ಲಿ 2.5 ಲಕ್ಷಕ್ಕೂ ಹೆಚ್ಚು ಜನರಿಂದ ಸ್ವಚ್ಛತಾ ಹೀ ಸೇವಾ ಶ್ರಮದಾನ ಕಾರ್ಯಕ್ರಮ ನಡೆಯಿತು.

‘ಸ್ವಚ್ಛ ಸರ್ವೇಕ್ಷಣ್-2023’ಗಾಗಿ ಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಸಂಸದರು, ಶಾಸಕರು, ಆಡಳಿತಗಾರರಾದ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತ ಹರೀಶ್ ಕುಮಾರ್, ವಲಯ ಜಂಟಿ ಆಯುಕ್ತರು, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತರು, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಘನತ್ಯಾಜ್ಯ ನಿರ್ವಹಣಾ ವಿಭಾಗದಿಂದ ನಗರದ ಕೆರೆಗಳು, ರೈಲ್ವೆ ನಿಲ್ದಾಣ, ರಸ್ತೆ ಬದಿ, ಸೇತುವೆ, ಮೇಲ್ಸೇತುವೆಗಳ ಕೆಳಗೆ, ಕೊಳೆಗೇರಿ, ಮಾರುಕಟ್ಟೆ, ಆರಾಧನಾ ಸ್ಥಳಗಳು, ಉದ್ಯಾನಗಳು, ಬಸ್ ನಿಲ್ದಾಣ, ಪ್ರಮುಖ ಜಂಕ್ಷನ್‌ಗಳು, ಶಾಲಾ, ಕಾಲೇಜುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ನಡೆಸಲಾಯಿತು.

25 ಟನ್ ತ್ಯಾಜ್ಯ ಸಂಗ್ರಹ: ಸ್ವಚ್ಛತಾ ಅಭಿ ಯಾನದ ವೇಳೆ ರಸ್ತೆಗಳು, ಬೀದಿ ಮತ್ತು ಇನ್ನಿತರೆ ಸ್ಥಳಗಳು ಸೇರಿದಂತೆ ಅಂದಾಜು 4,000 ಕಿ.ಮೀ ಪ್ರದೇಶದಲ್ಲಿ ಸುಮಾರು 20 ರಿಂದ 25 ಟನ್‌ಗಳಷ್ಟು ತ್ಯಾಜ್ಯವನ್ನು ಸಂಗ್ರಹಿಸಲಾಗಿದೆ. ಸಂಗ್ರಹವಾದ ತ್ಯಾಜ್ಯವನ್ನು ಒಣ ಹಾಗೂ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ ಆಟೊ ಟಿಪ್ಪರ್‌ಗಳ ಮೂಲಕ ಕಾಂಪ್ಯಾಕ್ಟರ್‌ಗಳಿಗೆ ಹಾಕಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಯಿತು.

ಅಭಿಯಾನದಲ್ಲಿ ಪಾಲ್ಗೊಂಡ ಹಿರಿಯ ನಾಗರಿಕರನ್ನು ಗೌರವಿಸಿ ಪ್ರಶಂಸನಾ ಪತ್ರವನ್ನು ವಿತರಿಸಲಾಯಿತು.



ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ಕೆರೆಯಿಂದ ಪಿಒಪಿ ಗಣೇಶ ಮೂರ್ತಿಗಳನ್ನು ಹೊರ ತೆಗೆದರು

ಕೆರೆಯಿಂದ ಪಿಒಪಿ ಮೂರ್ತಿ ಹೊರತೆಗೆದ ವಿದ್ಯಾರ್ಥಿಗಳು

ಬೆಂಗಳೂರು: ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಅಭಿಯಾನದಲ್ಲಿ ಬೇಗೂರು ಕೆರೆಯಲ್ಲಿ ವಿಸರ್ಜಿಸಿದ್ದ ಗಣೇಶನ ಪಿಒಪಿ ಮೂರ್ತಿಗಳನ್ನು ಹೊರತೆಗೆಯಲಾಯಿತು.

ಭಾನುವಾರ ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಾರ್ಡ್‌ಗಳಲ್ಲಿ ‘ಸ್ವಚ್ಛತೆಗಾಗಿ ಒಂದು ಗಂಟೆ ಶ್ರಮದಾನ’ ಎಂಬ ಘೋಷಣೆಯಡಿ, ಸ್ಥಳೀಯ ನಿವಾಸಿಗಳೊಂದಿಗೆ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ಬೇಗೂರು ಕೆರೆ ಸ್ವಚ್ಛತೆಯಲ್ಲಿ ಕೈಜೋಡಿಸಿ ದ್ದರು. ಕೆರೆಯಲ್ಲಿ ಭಾರಿ ಗಾತ್ರದ ಪಿಒಪಿ ಗಣೇಶ ಮೂರ್ತಿ ಗಳನ್ನು ಕಂಡ ವಿದ್ಯಾರ್ಥಿಗಳು ಕೆರೆಯಲ್ಲಿ ಇಳಿದು ಹೊರ ತೆಗೆದರು.

‘ಪಿಒಪಿ ಮೂರ್ತಿಗಳ ವಿಸರ್ಜನೆಯನ್ನು ಸರ್ಕಾರ ನಿರ್ಬಂಧಿಸಿದ್ದರೂ ಇಷ್ಟು ದೊಡ್ಡ ಮೂರ್ತಿಗಳನ್ನು ವಿಸರ್ಜಿಸಿರುವುದು ಸರಿಯಲ್ಲ. ನಮ್ಮ ಜನಕ್ಕೆ ಪರಿಸರ ಕಾಳಜಿ ಇಲ್ಲದಿರುವುದು ಬೇಸರ ತರಿಸಿದೆ’ ಎಂದು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟರು.

ಹೊಂಗಸಂದ್ರದಲ್ಲಿ ಶಾಸಕ ಸತೀಶ್ ರೆಡ್ಡಿ ಪೊರಕೆ ಹಿಡಿದು ರಸ್ತೆ ಸ್ವಚ್ಛತೆಯಲ್ಲಿ ಪಾಲ್ಗೊಂಡರು. ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಅಜಿತ್, ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ, ಪಾಲಿಕೆ ಮಾಜಿ ಸದಸ್ಯರಾದ ಎಂ. ಆಂಜನಪ್ಪ, ಭಾರತಿ ರಾಮಚಂದ್ರ ಇದ್ದರು.

ಯಲಹಂಕ: ಬಿಎಸ್‌ಎಫ್ ಯೋಧರ ಸ್ವಚ್ಛತಾ ಸೇವೆ

ಯಲಹಂಕ: ಗಡಿಭದ್ರತಾ ಪಡೆಯ(ಎಸ್.ಟಿ.ಸಿ) ಅಧೀನ ತರಬೇತಿ ಕೇಂದ್ರದ ವತಿಯಿಂದ ಸ್ವಚ್ಛತಾ-ಹಿ-ಸೇವಾ ಅಭಿಯಾನದಡಿಯಲ್ಲಿ ಯಲಹಂಕ ಹಳೇನಗರದ ಬಿ. ಬಸವಲಿಂಗಪ್ಪ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಯಿತು.

ಯೋಧರು ಹಾಗೂ ಬೃಂದಾವನ್ ಕಾಲೇಜಿನ ಎಸ್.ಸಿ.ಸಿ ಘಟಕದ ವಿದ್ಯಾರ್ಥಿಗಳು, ಬಿಎಂಟಿಸಿ ಸಿಬ್ಬಂದಿ, ಬಿಬಿಎಂಪಿ ಪೌರಕಾರ್ಮಿಕರು, ಸಾರ್ವಜನಿಕರು ಬಸ್ ನಿಲ್ದಾಣದ ಆವರಣ, ಚಾವಣಿ, ಮುಂಭಾಗದ ರಸ್ತೆ ಹಾಗೂ ಚರಂಡಿಯನ್ನು ಸ್ವಚ್ಛಗೊಳಿಸಿದರು. ಬಿ.ಎಸ್.ಎಫ್(ಎಸ್.ಟಿ.ಸಿ) ಕೇಂದ್ರದ ಐ.ಜಿ ಜಾರ್ಜ್ ಮಂಜೂರನ್, ಕಮಾಂಡೆಂಟ್(ಸಿ.ಐ) ವಿಪಿನ್ ವಿಲಾಸ್ ನಾಯ್ಕ್, ಕಮಾಂಡೆಂಟ್ ಯೋಗೇಶ್ ಕುಮಾರ್ ಇದ್ದರು.

ಸಿಆರ್‌ಪಿಎಫ್ ಕೇಂದ್ರ: ಕೇಂದ್ರೀಯ ಮೀಸಲು ಪೊಲೀಸ್ ಪಡೆ ಕೇಂದ್ರದ ವತಿಯಿಂದ ನಾಗೇನಹಳ್ಳಿ ಗ್ರಾಮ ಹಾಗೂ ಮಾರುಕಟ್ಟೆ ಪ್ರದೇಶದಲ್ಲಿ ಸ್ವಚ್ಛತಾ ಅಭಿಯಾನ ಕೈಗೊಳ್ಳಲಾಯಿತು.

ಸಿಆರ್‌ಪಿಎಫ್ ಕೇಂದ್ರದ ಡಿಐಜಿ ಹಿಮಾನ್ಶು ಕುಮಾರ್, ಕಮಾಂಡೆಂಟ್ ಪಿ.ವಿಶ್ವನಾಥ್, ಕಮಾಂಡೆಂಟ್ ಕಮಲೇಶ್ ಸಿಂಗ್, ಬಿಬಿಎಂಪಿ ಅಧಿಕಾರಿಗಳು, ಪೌರಕಾರ್ಮಿಕರು ಹಾಗೂ ಗ್ರಾಮಸ್ಥರು ಸ್ವಚ್ಛತಾಕಾರ್ಯದಲ್ಲಿ ಪಾಲ್ಗೊಂಡಿದ್ದರು.



ಕೆನರಾ ಬ್ಯಾಂಕ್ ಅಧಿಕಾರಿಗಳು, ಸಿಬ್ಬಂದಿ ಸ್ವಚ್ಛತಾ ಶ್ರಮದಾನ ನಡೆಸಿದರು.

ಸುದ್ದಿ 2 ನಿಮಿಷ

ಬ್ಯಾಡ್ಮಿಂಟನ್: ದ್ವಿತೀಯ ಪ್ರಶಸ್ತಿ ಪಡೆದ ಕೆಎಸ್‌ಆರ್‌ಟಿಸಿ

ಬೆಂಗಳೂರು: ನವದೆಹಲಿಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟವು ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಅಧಿಕಾರಿ, ಸಿಬ್ಬಂದಿಗೆ ಹಮ್ಮಿಕೊಂಡಿದ್ದ ಅಂತರರಾಜ್ಯ ರಸ್ತೆ ಸಾರಿಗೆ ನಿಗಮಗಳ ವಾಲಿಬಾಲ್ ಮತ್ತು ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಬ್ಯಾಡ್ಮಿಂಟನ್ ವಿಭಾಗದಲ್ಲಿ ಕೆಎಸ್‌ಆರ್‌ಟಿಸಿ ದ್ವಿತೀಯ ಪ್ರಶಸ್ತಿ ಗಳಿಸಿದೆ.

ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲಿಯೂ ದ್ವಿತೀಯ ಸ್ಥಾನ ಪಡೆದಿದೆ. ಮುಖ್ಯ ಕಾನೂನು ಅಧಿಕಾರಿ ಪ್ರಸನ್ನಕುಮಾರ್ ಬಾಳಾನಾಯ್ಕ, ಮಂಗಳೂರು ವಿಭಾಗ ಹಿರಿಯ ನಿಯಂತ್ರಣಾಧಿಕಾರಿ ಎಂ. ರಾಜೇಶ್ ಶೆಟ್ಟಿ, ಸಿಬ್ಬಂದಿ ಮೇಲ್ವಿಚಾರಕ ಕೆ. ಅಶ್ವಥನಾರಾಯಣ, ಪಾರುಪತ್ತೇಗಾರ ವಿ. ಹರೀಶ್, ಚಾಲಕ/ನಿರ್ವಾಹಕ ಜಿ.ಎಸ್. ಜಗನ್ನಾಥ ಪ್ರಶಸ್ತಿ ಪಡೆದಿದ್ದಾರೆ.

ಬ್ಯಾಡ್ಮಿಂಟನ್ ಮತ್ತು ವಾಲಿಬಾಲ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಒಟ್ಟು 15 ಕ್ರೀಡಾಪಟುಗಳಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಲಾ ₹5,000 ನಗದು ಘೋಷಣೆ ಮಾಡಿದ್ದಾರೆ. ಕಾರ್ಮಿಕ ಕಲ್ಯಾಣ ವಿಭಾಗದ ಮುಖ್ಯ ಅಧಿಕಾರಿ ಎಚ್.ಡಿ. ಗೌರಾಂಬ ಇದ್ದರು.

ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಹನುಮಂತಯ್ಯ ಆಯ್ಕೆ



ರಾಜರಾಜೇಶ್ವರಿನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ.ಹನುಮಂತಯ್ಯ ಅವರು ಅಧ್ಯಕ್ಷರಾಗಿ ಸತತ 6ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಅನಿಲ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬೆಂಗಳೂರು ನಗರ ಜಿಲ್ಲೆ ಸಹಕಾರ ಅಭಿವೃದ್ಧಿ ಅಧಿಕಾರಿ ಹಮ್ಮೀದ್ ಉಲ್ಲಾಖಾನ್ ಅವರು ಅಧ್ಯಕ್ಷರ ಆಯ್ಕೆ ಘೋಷಿಸಿದರು.

11ರಂದು ದಲಿತ ಐಕ್ಯತಾ ಸಮಾವೇಶ

ಚಿಂತಾಮಣಿ: ದಲಿತ ಸಂಘಟನೆಗಳನ್ನು ಒಗ್ಗೂಡಿಸುವ ಮಹತ್ವದ ಧ್ಯೇಯದೊಂದಿಗೆ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಅ. 11 ರಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ‘ದಲಿತರ ಐಕ್ಯತಾ ಸಮಾವೇಶ’ ಆಯೋಜಿಸಿದೆ. ಭಾನುವಾರ ನಗರದಲ್ಲಿ ಸಮಾವೇಶದ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಸೇನೆಯ ಅಧ್ಯಕ್ಷ ಕೋದಂಡರಾಮ್, ದಲಿತ ಸಂಘಟನೆಗಳು ಬಣಗಳಲ್ಲಿ ಹಂಚಿ ಹೋಗಿರುವ ಕಾರಣ ದಲಿತರ ಶಕ್ತಿ ಕ್ಷೀಣಿಸುತ್ತಿದೆ. ಎಲ್ಲ ದಲಿತ ಸಂಘಟನೆಗಳನ್ನು ಒಂದೇ ವೇದಿಕೆಗೆ ಕರೆ ತರುವುದು ಸಮಾವೇಶದ ಉದ್ದೇಶವಾಗಿದೆ ಎಂದು ತಿಳಿಸಿದರು.

ತಿಗಳರ ಸಂಘಕ್ಕೆ ಅಧ್ಯಕ್ಷರ ಆಯ್ಕೆ

ಯಲಹಂಕ: ತಿಗಳರ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ ಯಲಹಂಕ ನಗರಸಭೆ ಮಾಜಿ ಅಧ್ಯಕ್ಷ ಮು.ಕೃಷ್ಣಮೂರ್ತಿ ಅವಿರೋಧ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶ್ರೀಧರ್ ಮತ್ತು ಖಜಾಂಚಿಯಾಗಿ ಆದಿತ್ಯ ಬಾಬು ಆಯ್ಕೆಯಾಗಿದ್ದಾರೆ. ತಿಗಳ ಸಮುದಾಯವನ್ನು ಒಗ್ಗೂಡಿಸುವುದರ ಜೊತೆಗೆ ಅವರ ಕುಂದುಕೊರತೆ ಬಗೆಹರಿಸಲಾಗುವುದು. ಶೈಕ್ಷಣಿಕ ಅಭಿವೃದ್ಧಿಗೆ ಪ್ರಯ ತ್ನಿಸಲಾಗುವುದು. ತಿಗಳ ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಜಯಂತಿಯನ್ನು ಇತರೆ ಮಹಾತ್ಮರ ಜಯಂತಿಯಂತೆ ಸರ್ಕಾರವೇ ಆಚರಿಸುವಂತೆ ಮನವಿ ಮಾಡಲಾಗುವುದು ಎಂದು ಕೃಷ್ಣಮೂರ್ತಿ ತಿಳಿಸಿದರು. ಚುನಾವಣೆ ಪ್ರಕ್ರಿಯೆಯಲ್ಲಿ 43 ನಿರ್ದೇಶಕರ ಪೈಕಿ 39 ಮಂದಿ ಹಾಜರಿದ್ದರು.



ಕೃಷ್ಣಮೂರ್ತಿ



ನಾಗಸಂದ್ರದ ವಿಡಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ವಾಣಿಜ್ಯ ದಿನಾಚರಣೆಯ ವಸ್ತು ಪ್ರದರ್ಶನವನ್ನು ಅತಿಥಿಗಳು ವೀಕ್ಷಿಸಿದರು

ವಾಣಿಜ್ಯ ವಸ್ತು ಪ್ರದರ್ಶನ

ಬೆಂಗಳೂರು: ಜನಜೀವನ ಸುಧಾರಣೆಗೆ ಬೇಕಾದ ಮೂಲ ಸವಲತ್ತುಗಳನ್ನು ಸೃಷ್ಟಿಸಲು ನವೋದ್ಯಮಗಳ ಸಹಯೋಗದಲ್ಲಿ ವಾಣಿಜ್ಯ ಕ್ಷೇತ್ರ ಕೆಲಸ ಮಾಡಬೇಕು ಎಂದು ಸೌಂದರ್ಯ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಹಾಬಲೇಶ್ವರ ತುಂಗ ಹೇಳಿದರು.

ನಾಗಸಂದ್ರದ ವಿಡಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿ ನಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ವಾಣಿಜ್ಯ ದಿನಾಚರಣೆಯ ವಸ್ತು ಪ್ರದರ್ಶನದಲ್ಲಿ ಅವರು ಮಾತನಾಡಿದರು.

ಪ್ರಾಚಾರ್ಯ ಗುರುರಾಜ ದಾವಣಗೆರೆ ಅಧ್ಯಕ್ಷತೆ ವಹಿಸಿದ್ದರು. 50ಕ್ಕೂ ಹೆಚ್ಚು ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.


ನಗರದಲ್ಲಿ ಇಂದು

ಆರೋಗ್ಯ ತಪಾಸಣೆ, ಶಸ್ತ್ರಚಿಕಿತ್ಸೆ ಮತ್ತು ರಕ್ತದಾನ ಶಿಬಿರ: ಆಯೋಜನೆ: ಕೆ.ಬಿ.ಸಿ. ಟ್ರಸ್ಟ್, ಸ್ಥಳ: ಅಶೋಕ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಆವರಣ, ಚಿಕ್ಕಮುನಿಯಪ್ಪ ಮುಖ್ಯರಸ್ತೆ, ಬೆಳಿಗ್ಗೆ 9

ಕ್ರೀಡಾ ಸಂಕೀರ್ಣ ಉದ್ಘಾಟನೆ: ಮುಖ್ಯ ಅತಿಥಿ: ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿಗಳು: ಸೌಮ್ಯಾ ರೆಡ್ಡಿ, ಮೊಹ್ಮದ್ ರಿಜ್ವಾನ್ ನವಾಬ್, ಆರ್.ಎಸ್. ಹಿರೇಮಠ್, ಮಂಜುನಾಥ್ ಪಟ್ಟಾರ್, ಇರೋಮ್ ಡೀನ್ ಸಿಂಗ್, ಆಯೋಜನೆ ಹಾಗೂ ಸ್ಥಳ: ಬಿ.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್ ಕ್ಯಾಂಪ್, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 9.30

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಎಂ.ವಿ. ಶೇಷಾದ್ರಿ, ಮುಖ್ಯ ಅತಿಥಿ: ವಿ.ಜಿ. ಕಿರಣ್ ಕುಮಾರ್, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರ ಕುಮಾರ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಬ್ರಾಹ್ಮಣ ಸಭಾ, ಕೆಂಗೇರಿ ಉಪನಗರ, ಬೆಳಿಗ್ಗೆ 10

ವಿ. ಬಾಲಸುಬ್ರಮಣಿಯನ್ ಅವರ ‘ಕಲ್ಯಾಣ ಕೆಡುವ ಹಾದಿ’ ಕೃತಿ ಬಿಡುಗಡೆ: ನ್ಯಾ.ವಿ. ಗೋಪಾಲ ಗೌಡ, ಪುಸ್ತಕದ ಬಗ್ಗೆ ಮಾತು: ವೆಲೇರಿಯನ್ ರೋಡ್ರಿಗಸ್, ಎ. ನಾರಾಯಣ, ರಹಮತ್ ತರೀಕೆರೆ, ಅನುವಾದಕಿ: ಎನ್. ಸಂಧ್ಯಾರಾಣಿ, ಉಪಸ್ಥಿತಿ: ಬಸೂ, ಗುರುಪ್ರಸಾದ್ ಡಿ.ಎನ್., ಆಯೋ ಜನೆ: ಆಡಳಿತ ಸಂಶೋಧನಾ ಸಂಸ್ಥೆ ಮತ್ತು ಭಾರತೀಯ ಆಡಳಿತ ಸೇವಾ ಸಂಘ, ಲಡಾಯಿ ಪ್ರಕಾಶನ, ಗೌರಿ ಮೀಡಿಯಾ ಟ್ರಸ್ಟ್, ಸ್ಥಳ: ಭಾರತೀಯ ಆಡಳಿತ ಸೇವಾ ಸಂಸ್ಥೆ, ಇನ್‌ಫ್ಯಾಂಟ್ರಿ ರಸ್ತೆ, ಬೆಳಿಗ್ಗೆ 10



ನ್ಯಾ. ಗೋಪಾಲ ಗೌಡ

ಲಾಲ್ ಬಹದ್ದೂರ್ ಶಾಸ್ತ್ರಿ ಅವರ 119ನೇ ಜನ್ಮದಿನದ ಅಂಗವಾಗಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಸ್ಥಳ: ವಿಧಾನಸೌಧದ ಆವರಣ, ಬೆಳಿಗ್ಗೆ 10

ರೇವಾ ಕೃಷಿ ಟೆಕ್ ಪ್ರಾಜೆಕ್ಟ್ ಅನಾವರಣ: ಅಧ್ಯಕ್ಷತೆ: ಪಿ. ಶ್ಯಾಮರಾಜು, ಉಪಸ್ಥಿತಿ: ಉಮೇಶ್ ಎಸ್. ರಾಜು, ಎಂ. ಧನಂಜಯ, ಆಯೋಜನೆ ಹಾಗೂ ಸ್ಥಳ: ಸುಗಂಧಿಕಾ ಸಭಾಂಗಣ, ರೇವಾ ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ವಿಂಶತಿ ಗಾನ ಸಂಭ್ರಮ ಹಾಗೂ ಗುರುವಂದನಾ: ಮುಖ್ಯ ಅತಿಥಿ: ಅಹಲ್ಯಾ ಶರ್ಮಾ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಗಾಯನ: ಪೂರ್ಣಿಮಾ ಭಟ್ ಕುಲ್ಕರ್ಣಿ, ತಬಲಾ: ಗುರುಮೂರ್ತಿ ವೈದ್ಯ, ಸಂವಾದಿನಿ: ಸೂರ್ಯ ಉಪಾಧ್ಯಾಯ, ಆಯೋಜನೆ: ಸ್ವರ ಗಾಂಧಾರ ಸಂಗೀತ ವಿದ್ಯಾಲಯ, ಸ್ಥಳ: ಅಖಿಲ ಹವ್ಯಕ ಮಹಾಸಭಾ, ಸಂಜೆ 5


ಭರತನಾಟ್ಯ ರಂಗಪ್ರವೇಶ: ಅಪೂರ್ವ, ಮುಖ್ಯ ಅತಿಥಿಗಳು: ಮೇಧಾ ಹುಯಿಲಗೋಳ, ಲತಾ ಕೆ. ಶಂಕರ, ಪ್ರಸನ್ನ ಶರ್ಮಾ, ಪ್ರಿಯಾಂಕ ತರುಣ, ಆಯೋಜನೆ: ಶರ್ಮಾಸ್ ಮಾಧುರಿ ನೃತ್ಯ ಕಲಾ ಮಂದಿರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

23ನೇ ವರ್ಷದ ಪ್ರವಚನ ವಾಹಿನಿ: ಸಂಕಷ್ಟಹರ ಗಣಪತಿ ಪೂಜೆ, ಆಯೋಜನೆ ಹಾಗೂ ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಸಂಜೆ 6.30

ಗಾಂಧಿ ಜಯಂತಿ ಕಾರ್ಯಕ್ರಮ

ಕರ್ನಾಟಕ ಲಿಂಗ್ವಿಸ್ಟಿಕ್ ಮೈನಾರಿಟಿ ಫೋರಂ ಹಾಗೂ ಗುಜರಾತಿ ಸಮಾಜ ಕರ್ನಾಟಕದಿಂದ ಗಾಂಧಿ ಜಯಂತಿ: ಮುಖ್ಯ ಅತಿಥಿ: ಜಿ. ಪರಮೇಶ್ವರ, ಸ್ಥಳ: ಗಾಂಧಿ ಪ್ರತಿಮೆ, ಆನಂದರಾವ್ ವೃತ್ತ, ಶೇಷಾದ್ರಿ ರಸ್ತೆ, ಬೆಳಿಗ್ಗೆ 8.30

ಶಾರದಾ ವಿದ್ಯಾಪೀಠದಿಂದ ಗಾಂಧಿ ಜಯಂತಿ: ಮುಖ್ಯ ಅತಿಥಿಗಳು: ಪುಷ್ಪ ಬಿ., ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷತೆ: ಎನ್. ಕಾಮರಾಜು, ಸ್ಥಳ: ಶಾರದಾವಿದ್ಯಾಪೀಠ ಸಭಾಂಗಣ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಳಿಗ್ಗೆ 9



ಸ್ವಚ್ಛತಾ ಆಂದೋಲನ: ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಉಪಸ್ಥಿತಿ: ರಾಮಕೃಷ್ಣ ಎಚ್.ಕೆ, ಸ್ಥಳ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ಗುರುರಾಯನಪುರ, ಬೆಳಿಗ್ಗೆ 9

ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನಿಂದ ಗಾಂಧಿ ಜಯಂತಿ: ಮುಖ್ಯ ಅತಿಥಿ: ಎಸ್. ರಾಮಲಿಂಗೇಶ್ವರ (ಸಿಸಿರ), ಸ್ಥಳ: ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಬೆಳಿಗ್ಗೆ 9

ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಸ್ಥಳ: ವಿಧಾನಸೌಧದ ಆವರಣ, ಬೆಳಿಗ್ಗೆ 10

ಗಾಂಧಿ ನುಡಿ ನಮನ: ಪುಷ್ಪಾರ್ಚನೆ:ಪಟೇಲ್‌ಪಾಂಡು, ಅಧ್ಯಕ್ಷತೆ: ಬಿ.ಪಿ. ಹರ್ಷ, ಆಯೋಜನೆ: ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆಗಳು, ಸ್ಥಳ: ಡಾ. ಪಟೇಲ್‌ಪಾಂಡು ಚೈತನ್ಯ ಮಂದಿರ, ಬೆಳಿಗ್ಗೆ 10.30

ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಪ್ರದಾನ ಹಾಗೂ ಸ್ವಚ್ಛ ಸರ್ವೇಕ್ಷಣಾ ಗ್ರಾಮೀಣ 2023 ರಾಜ್ಯ ಮಟ್ಟದ ಪ್ರಶಸ್ತಿ ವಿತರಣೆ: ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಪ್ರಿಯಾಂಕ್ ಖರ್ಗೆ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ: ಬ್ಯಾಂಕ್ವೆಂಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದಿಂದ ಗಾಂಧಿ ಜಯಂತಿ: ಉದ್ಘಾಟನೆ: ಜಯಕರ್ ಎಸ್.ಎಂ., ಆಶಯ ನುಡಿ: ನಟರಾಜ್ ಹುಳಿಯಾರ್, ವಿಶೇಷ ಉಪನ್ಯಾಸ: ನಾಗೇಶ ಹೆಗಡೆ, ಮುಖ್ಯ ಅತಿಥಿ: ಶೇಖ್ ಲತೀಫ್, ಸ್ಥಳ: ಗಾಂಧಿ ಭವನ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಗಾಂಧಿ ಜಯಂತಿ: ಗಾಂಧಿ ಸ್ಮಾರಕ ನಿಧಿ ಜಾಲತಾಣಕ್ಕೆ ಚಾಲನೆ: ಸಿದ್ದರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಾರ್ಪಣೆ: ಡಿ.ಕೆ. ಶಿವಕುಮಾರ್, ಗೋವಾ ವಿಮೋಚನಾ ಹೋರಾಟಗಾರರಿಗೆ ಗೌರವಾರ್ಪಣೆ: ಕೃಷ್ಣಭೈರೇಗೌಡ, ಜಯಶ್ರೀ ಟ್ರಸ್ಟ್ ದತ್ತಿ ಪುರಸ್ಕಾರ ಪ್ರದಾನ: ಎಚ್.ಕೆ. ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, 2ನೇ ಮಹಡಿ, ಗಾಂಧಿ ಭವನ, ಬೆಳಿಗ್ಗೆ 11

ಗಾಂಧಿ ಪ್ರತಿಮೆ ಹಾಗೂ ಶಿಲಾಫಲಕ ಲೋಕಾರ್ಪಣೆ: ಉದ್ಘಾಟನೆ: ಡಿ.ಕೆ. ಸುರೇಶ್, ಅಧ್ಯಕ್ಷತೆ: ಮುನಿರತ್ನ, ಗಾಂಧಿ ಪ್ರತಿಮೆ ಲೋಕಾರ್ಪಣೆ: ಜಯರಾಮ್ ರಾಯಪುರ, ಗಾಂಧಿ ಜೀವನೋಕ್ತಿ ಲೋಕಾರ್ಪಣೆ: ವೂಡೇ ಪಿ. ಕೃಷ್ಣ, ಆಯೋಜನೆ: ಮಹಾತ್ಮ ಗಾಂಧಿ ಉದ್ಯಾನವನ ವಾಯುವಿಹಾರಿಗಳ ಸಂಘ, ಸ್ಥಳ: ಮಹಾತ್ಮ ಗಾಂಧಿ ಉದ್ಯಾನವನ, ನಾಗರಬಾವಿ 2ನೇ ಹಂತ, ಮಧ್ಯಾಹ್ನ 3.30

ಮಹಾತ್ಮಾಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ಕೆ.ವಿ. ಪ್ರಭಾಕರ್, ನ್ಯಾ.ಬಿ. ವೀರಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಸಮಾಲೋಚನ ಸಭಾಂಗಣ, ವಾರ್ತಾ ಸೌಧ, ಸಂಜೆ 4

ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಸಾನ್ನಿಧ್ಯ: ರಾಘವೇಂದ್ರ ಮೋಕ್ಷ ಗುಂಡಂ ಗುರೂಜಿ, ಉದ್ಘಾಟನೆ: ಕುಂ. ವೀರಭದ್ರಪ್ಪ, ಮುಖ್ಯ ಅತಿಥಿ: ಗೋವಿಂದಬಾಬು ಪೂಜಾರಿ, ಪ್ರಶಸ್ತಿ ಪ್ರದಾನ: ಅಪೂರ್ವಶ್ರೀ, ಆಯೋಜನೆ: ಸ್ನೇಹ ಯುವ ಸಾಂಸ್ಕೃತಿಕ ಸಂಘ, ಸಂಜೆ 4

ರಾಷ್ಟ್ರಪಿತ ಮಹಾತ್ಮ ಗಾಂಧಿ ಚಿಂತನ ವೇದಿಕೆಯಿಂದ ಗಾಂಧಿ ಜನಯಂತಿ: ಅಧ್ಯಕ್ಷತೆ: ಎಂ.ಪಿ. ನಾಡಗೌಡ, ನುಡಿ ನಮನ: ಮಹಿಮ ಪಟೇಲ್, ಮುಖ್ಯ ಭಾಷಣ: ವಿವೇಕಾನಂದ ಎಚ್.ಕೆ., ಪುಷ್ಪ ನಮನ: ಪವನ್ ಮಣಿ ಕೊಂಡ, ಎಸ್.ಪಿ. ದಯಾನಂದ್, ಸ್ಥಳ: ಜ್ಯೋತಿ ವೃಕ್ಷ, ಈಜುಕೊಳ ಹತ್ತಿರ, ಹೋಟೆಲ್ ಅಶೋಕ್, ಸಂಜೆ 4

‘ಕತ್ತಲಲ್ಲಿ ಒಂದು ಬೆಳಕು’ ಸಾಂಸ್ಕೃತಿಕ ಕಾರ್ಯಕ್ರಮ: ಮುಖ್ಯ ಅತಿಥಿ: ಡಿ. ಜೀವನ್ ಕುಮಾರ್, ಆಯೋಜನೆ: ದಿ ಸರ್ವೋದಯ ಇಂಟರ್‌ನ್ಯಾಷನಲ್ ಟ್ರಸ್ಟ್ ಕರ್ನಾಟಕ ವಿಭಾಗ, ಡ್ರಿಕ್ ಫೌಂಡೇಶನ್, ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಸಂಜೆ 4.30

ಗಾಂಧಿ ದತ್ತಿ ಉಪನ್ಯಾಸ: ಆರ್. ಬಾಲಸುಬ್ರಮಣ್ಯಂ, ಆಯೋಜನೆ ಹಾಗೂ ಸ್ಥಳ: ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಸಂಜೆ 5

ಗಾಂಧಿ ಸಂಸ್ಕೃತಿ ಹಬ್ಬ: ಗಾಂಧಿ ಪ್ರತಿಮೆಗೆ ಮಾಲಾರ್ಪಣೆ: ಎಸ್.ಜಿ. ಸಿದ್ಧರಾಮಯ್ಯ–ಬೆಳಿಗ್ಗೆ 9ಕ್ಕೆ, ಸಂಸ್ಕೃತಿ ಸಂಭ್ರಮ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿ: ಪ್ರೇಮಾ ಸಿದ್ದರಾಜು, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿ ಪಾರ್ಕ್, 2ನೇ ಹಂತ, ಭಾರತ್ ನಗರ, ಸಂಜೆ 6

ಕಸಾಪ: ಕನ್ನಡ ಶಾಲೆಗಳಿಗೆ ಪುಸ್ತಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ಕನ್ನಡ ಪ್ರಜ್ಞೆ ಬೆಳೆಸಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಪ್ರಕಟಿಸಿರುವ ಮೌಲ್ಯಯುತ ಪುಸ್ತಕಗಳನ್ನು ಕನ್ನಡ ಶಾಲೆಗಳಿಗೆ ಉಚಿತವಾಗಿ ವಿತರಿಸಲಾಗುವುದು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ತಿಳಿಸಿದ್ದಾರೆ.

'ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸಬೇಕಾಗಿದೆ. ಮಕ್ಕಳಲ್ಲಿ ಕನ್ನಡ ಸಾಹಿತ್ಯ ಓದುವ ಹವ್ಯಾಸ ಮೂಡಿಸಬೇಕು. ಹಾಗಾಗಿ, ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ 100 ಶಾಲೆಗಳಿಗೆ ಮೌಲ್ಯಯುತ ತಲಾ 240 ಪುಸ್ತಕಗಳನ್ನು ವಿತರಿಸಲಾಗುವುದು. ಈ ಯೋಜನೆಯ ಲಾಭವನ್ನು ಇದೇ 2 ರಿಂದ 30ರವರೆಗೆ ಪಡೆದುಕೊಳ್ಳಬಹುದು. ಕನ್ನಡ ಶಾಲೆಗಳ ಆಡಳಿತ ಮಂಡಳಿ, ಶಿಕ್ಷಕರು ಶಾಲಾ ದಾಖಲೆಯೊಂದಿಗೆ ಸಾಹಿತ್ಯ ಪರಿಷತ್ತಿಗೆ ಖುದ್ದಾಗಿ ಭೇಟಿ ನೀಡಿ, ಪುಸ್ತಕಗಳನ್ನು ಪಡೆಯಬಹುದು. ಪುಸ್ತಕಗಳ ಸಾಗಣೆ ವೆಚ್ಚವನ್ನು ಆಯಾ ಶಾಲೆಯವರೇ ಭರಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ.

'ನೂರು ಶಾಲೆಗಳಿಗೆ ಮಾತ್ರ ಪುಸ್ತಕಗಳನ್ನು ನೀಡಲಾಗುತ್ತದೆ. ಮೊದಲು ಬಂದವರಿಗೆ ಮೊದಲ ಆದ್ಯತೆ. ದೂರವಾಣಿ, ಇ ಮೇಲ್, ಅಂಚೆ ಮೂಲಕ ಪುಸ್ತಕಗಳನ್ನು ಪಡೆಯಲು ಅಥವಾ ಕಾಯ್ದಿರಿಸಲು ಅವಕಾಶ ಇರುವುದಿಲ್ಲ' ಎಂದು ತಿಳಿಸಿದ್ದಾರೆ.

'ಪರಿಷತ್ತು ವಿವಿಧ ಲೇಖಕರ ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ನೀಡುತ್ತಿದೆ. ಹೊಸ ತಲೆಮಾರಿನ ಬರಹಗಾರರ ಪುಸ್ತಕಗಳನ್ನೂ ಪ್ರಕಟಿಸಿರುವ ಹೆಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ. ತೀರಾ ಅಪರೂಪ ಎನ್ನಲಾಗುವ ಹಸ್ತ ಪ್ರತಿಗಳನ್ನು ರಕ್ಷಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಮ್ಮೇಳನ: ಕಿಕ್ಕೇರಿ ಕೃಷ್ಣಮೂರ್ತಿ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಕಲಾ ನಿಕೇತನ ಸಂಘವು ಇದೇ 8 ಹಾಗೂ 9ರಂದು ಜಪಾನ್‌ನ ಒಸಾಕಾದ ಆರ್ಟ್ರೋ ಟೆಲ್‌ನಲ್ಲಿ ಕುವೆಂಪು ಕಲಾ ಉತ್ಸವ ಹಾಗೂ 24ನೇ ವಿಶ್ವ ಕನ್ನಡ ಸಮ್ಮೇಳವನ್ನು ಹಮ್ಮಿಕೊಂಡಿದ್ದು, ಸಮ್ಮೇಳನಾಧ್ಯಕ್ಷರಾಗಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಜಪಾನ್ ಕನ್ನಡ ಸಂಘದ ಸಹಯೋಗದಲ್ಲಿ ಸಮ್ಮೇಳನ ನಡೆಯಲಿದ್ದು, ಪತ್ರಕರ್ತ ಜೆ.ಎಚ್. ಅನಿಲ್ ಕುಮಾರ್ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಅಣ್ಣೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ರಾಷ್ಟ್ರಕವಿ ಕುವೆಂಪು ಕುರಿತ ವಿಚಾರ ಸಂಕಿರಣ, ಗೀತಗಾಯನ, ನೃತ್ಯ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಸೇರಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂಘದ ಕುವೆಂಪು ಪ್ರಕಾಶ್ ತಿಳಿಸಿದ್ದಾರೆ.

ಕೋಲಾರ ಡಿ.ಸಿ, ಎಸ್‌.ಪಿ ಕಾಂಗ್ರೆಸ್‌ಗೆ ಮಾರಾಟ: ಸಂಸದ

ಕೋಲಾರ: 'ಕೋಲಾರ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾಂಗ್ರೆಸ್ ಪಕ್ಷದವರಿಗೆ ಮಾರಾಟವಾಗಿದ್ದಾರೆ. ಇಬ್ಬರೂ ಕಾಂಗ್ರೆಸ್ ಏಜೆಂಟರು' ಎಂದು ಸಂಸದ ಎಸ್.ಮುನಿಸ್ವಾಮಿ ಭಾನುವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ನನ್ನ ಮೇಲೆ ಪೊಲೀಸರು ಎಷ್ಟು ಬೇಕಾದರೂ ಎಫ್‌ಐಆರ್ ದಾಖಲಿಸಲಿ, ಎದುರಿಸಲು ಸಿದ್ಧ. ಬದುಕಿರುವವರೆಗೆ ಹೋರಾಟ ನಡೆಸುವೆ' ಎಂದರು.

'ಜಿಲ್ಲಾಡಳಿತದ ವಿರುದ್ಧ ಅ.3ರಂದು ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಿದ್ದೇವೆ' ಎಂದು ತಿಳಿಸಿದರು.

₹1.77ಕೋಟಿ ಮೌಲ್ಯದ 3ಕೆ.ಜಿ ಚಿನ್ನ ಜಪ್ತಿ



ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ದುಬೈನಿಂದ ಬಂದಿಳಿದ ನಾಲ್ವರು ಮತ್ತು ಶನಿವಾರ ಕೊಲೊಂಬೊದಿಂದ ಬಂದ ನಾಲ್ವರು ಪ್ರಯಾಣಿಕರಿಂದ ಅಪಾರ ಪ್ರಮಾಣದ ಚಿನ್ನದ ಗಟ್ಟಿಗಳನ್ನು ವಶಕ್ಕೆ ಪಡೆಯಲಾಗಿದೆ.

ಎಲ್ಲರಿಂದ ಒಟ್ಟು ₹1.77 ಕೋಟಿ ಮೌಲ್ಯದ ಮೂರು ಕೆ.ಜಿ ಚಿನ್ನ ವಶಕ್ಕೆ ಪಡೆಯಲಾಗಿದೆ. ಗುದದ್ವಾರ ಹಾಗೂ ಕಾಲಿನ ಮಂಡಿ ಕ್ಯಾಪ್‌ಗಳಲ್ಲಿ ಚಿನ್ನ ಅಡಗಿಸಿಕೊಂಡು ಕಳ್ಳ ಸಾಗಣೆ ಮಾಡುತ್ತಿರುವುದು ತಪಾಸಣೆ ವೇಳೆ ಪತ್ತೆಯಾಗಿದೆ.

ಜನ್ಮದಿನಾಚರಣೆ ಸಂದರ್ಭದಲ್ಲಿ ಅವಘಡ: 5 ಗಾಯಾಳುಗಳಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ

ವಿದ್ಯುತ್ ತಂತಿಗೆ ಬಲೂನ್ ತಗುಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮದಿನ ಆಚರಣೆಗೆಂದು ತಂದಿದ್ದ ಬಲೂನ್‌ಗಳು ವಿದ್ಯುತ್ ತಂತಿಗೆ ತಗುಲಿ ಬೆಂಕಿ ಅವಘಡ ಸಂಭವಿಸಿದ್ದು, ನಾಲ್ವರು ಮಕ್ಕಳು ಸೇರಿ ಐವರು ತೀವ್ರವಾಗಿ ಗಾಯಗೊಂಡಿದ್ದಾರೆ.

'ಬೆಳತ್ತೂರು ಬಳಿಯ ಮನೆಯೊಂದರಲ್ಲಿ ಶನಿವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದೆ. ಸ್ಥಳೀಯ ನಿವಾಸಿ ವಿಜಯ್ ಆದಿತ್ಯ ಕುಮಾರ್ (44), ಮಕ್ಕಳಾದ ಧ್ಯಾನ್‌ಚಂದ್ (7), ಸುಹೀಲಾ (3), ಎಲ್. ಇಶಾನ್ (7) ಹಾಗೂ ಸಂಜಯ್ (8) ತೀವ್ರವಾಗಿ ಗಾಯಗೊಂಡಿದ್ದರು. ಅವರೆಲ್ಲರೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಕಾಡುಗೋಡಿ ಠಾಣೆ ಪೊಲೀಸರು ಹೇಳಿದರು.

'ಬಾಲಕಿಯೊಬ್ಬರ ಜನ್ಮದಿನದ ಅಂಗವಾಗಿ ಶನಿವಾರ ರಾತ್ರಿ ಪಾರ್ಟಿ ಹಮ್ಮಿಕೊಳ್ಳಲಾಗಿತ್ತು. ಕುಟುಂಬಸ್ಥರು, ಸಂಬಂಧಿಕರು ಹಾಗೂ ಮಕ್ಕಳು ಪಾರ್ಟಿಯಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಪಾರ್ಟಿಗೆಂದು ಬಲೂನ್‌ಗಳಿಗೆ ಗಾಳಿ ತುಂಬಿಸಿ ಇಡಲಾಗಿತ್ತು.'

'ಬಲೂನ್‌ಗಳನ್ನು ತೆಗೆದುಕೊಂಡಿದ್ದ ಧ್ಯಾನ್ ಚಂದ್, ಸುಹೀಲಾ, ಇಶಾನ್ ಹಾಗೂ ಸಂಜಯ್, ಮನೆ ಮೆಟ್ಟಿಲು ಬಳಿ ನಿಂತು ಆಟವಾಡುತ್ತಿದ್ದರು. ಮನೆಯ ಎದುರೇ ವಿದ್ಯುತ್ ತಂತಿ ಹಾದು ಹೋಗಿದೆ. ಮಕ್ಕಳು ಆಟವಾಡುತ್ತ ಬಲೂನ್ ಕೈ ಬಿಟ್ಟಿದ್ದರು. ಬಲೂನ್‌ಗಳು ವಿದ್ಯುತ್ ತಂತಿಗೆ ತಗುಲಿ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿತ್ತು' ಎಂದು ಪೊಲೀಸರು ತಿಳಿಸಿದರು.



ಬೆಂಕಿ ಅವಘಡ ಸಂಭವಿಸಿದ್ದ ಬೆಳತ್ತೂರಿನ ಮನೆಯ ಹೊರ ನೋಟ

'ಬೆಂಕಿ ಕೆನ್ನಾಲಗೆ ಹೆಚ್ಚಾಗಿ ನಾಲ್ವರೂ ಮಕ್ಕಳಿಗೆ ತಾಗಿತ್ತು. ಮಕ್ಕಳು ಚೀರಾಡಲಾರಂಭಿಸಿದ್ದರು. ರಕ್ಷಣೆಗೆ ಹೋಗಿದ್ದ ವಿಜಯ್ ಆದಿತ್ಯ ಕುಮಾರ್ ಅವರಿಗೆ ಬೆಂಕಿ ತಗುಲಿತ್ತು. ಮನೆಯಲ್ಲಿದ್ದವರು ಹಾಗೂ ಸ್ಥಳೀಯರು ರಕ್ಷಣೆಗೆ ಧಾವಿಸಿ ಬೆಂಕಿ ನಂದಿಸಿದ್ದರು. ಗಾಯಾಳುಗಳನ್ನು ತ್ವರಿತವಾಗಿ ಆಸ್ಪತ್ರೆಗೆ ಕರೆದೊಯ್ದಿದ್ದರು' ಎಂದು ಹೇಳಿದರು.

ಬಲೂನ್ ಬಗ್ಗೆ ತನಿಖೆ: 'ಪಾರ್ಟಿಗೆಂದು ಹೀಲಿಯಂ ಬಲೂನ್‌ಗಳನ್ನು ತರಲಾಗಿತ್ತು. ಅವುಗಳಿಂದಲೇ ಅವಘಡ ಸಂಭವಿಸಿರುವುದಾಗಿ ಮನೆಯವರು ಹೇಳಿಕೆ ನೀಡಿದ್ದಾರೆ. ಆದರೆ, ಬಲೂನ್ ಒಳಗೆ ಏನಿತ್ತು ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಬೆಂಕಿ ಹೊತ್ತಿಕೊಂಡಿದ್ದ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಲಾಗಿದೆ. ತಂತಿಗೆ ಹೊದಿಕೆಯಾಗಿದ್ದ ಪ್ಲಾಸ್ಟಿಕ್ ಪೈಪ್ ಸಹ ಸುಟ್ಟಿದೆ. ಈ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಂದಲೇ ಮಾಹಿತಿ ಪಡೆಯಲಾಗುವುದು' ಎಂದು ತಿಳಿಸಿದರು.

ಹೊತ್ತಿ ಉರಿದ ಎಲೆಕ್ಟ್ರಿಕ್ ಕಾರು



ಬೆಂಕಿಯಿಂದ ಹೊತ್ತಿ ಉರಿದ ಎಲೆಕ್ಟ್ರಿಕ್ ಕಾರು

ಬೆಂಗಳೂರು: ಜೆ.ಪಿ.ನಗರದಲ್ಲಿ ಎಲೆಕ್ಟ್ರಿಕ್ ಕಾರೊಂದು ಬೆಂಕಿಯಿಂದ ಹೊತ್ತಿ ಉರಿದಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

'ಜೆ.ಪಿ.ನಗರ ಮೂರನೇ ಹಂತದ ಡೆಲ್ಮಿಯಾ ವೃತ್ತದ ಬಳಿ ಮುಖ್ಯರಸ್ತೆ ಯಲ್ಲಿ ಸಂಚರಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಬೆಂಕಿ ಕೆನ್ನಾಲಗೆ ಹೆಚ್ಚಾಗಿ ಇಡೀ ಕಾರಿಗೆ ಆವರಿಸಿತ್ತು. ಘಟನೆಯಲ್ಲಿ ಕಾರು ಸಂಪೂರ್ಣ ಸುಟ್ಟಿದೆ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಪೋಸ್ಟ್ ಪ್ರಕಟಿಸಿದ್ದಾರೆ.

'ಬೆಂಕಿ ಅವಘಡದಲ್ಲಿ ಅದೃಷ್ಟವಶಾತ್ ಜೀವ ಹಾನಿ ಸಂಭವಿಸಿಲ್ಲ. ಬೆಂಕಿಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ' ಎಂದಿ ದ್ದಾರೆ. ಹಲವರು ಈ ಪೋಸ್ಟ್ ಹಂಚಿ ಕೊಂಡಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸರು, 'ವಿಡಿಯೊ ಗಮನಿಸಲಾಗಿದೆ. ಪರಿಶೀಲಿಸಲಾಗುತ್ತಿದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ಯುವತಿಯರ ಅಂಗಾಂಗ ಮುಟ್ಟಿ ದೌರ್ಜನ್ಯ: ಬಂಧನ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುವ ಯುವತಿಯರನ್ನು ಹಿಂಬಾಲಿಸಿ ಅಂಗಾಂಗ ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ ಆರೋಪಿ ಅಯ್ಯಪ್ಪ ಎಂಬುವವನನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವೈಯಾಲಿಕಾವಲ್ ನಿವಾಸಿ ಅಯ್ಯಪ್ಪ, ದ್ವಿಚಕ್ರ ವಾಹನ ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಈತನ ಕೃತ್ಯದ ಬಗ್ಗೆ ಯುವತಿಯೊಬ್ಬರು ದೂರು ನೀಡಿದ್ದರು. ಪ್ರಕ ರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜನರು ತಮ್ಮ ದ್ವಿಚಕ್ರ ವಾಹನಗಳನ್ನು ದುರಸ್ತಿಗೆಂದು ಗ್ಯಾರೇಜ್‌ಗೆ ನೀಡುತ್ತಿದ್ದರು. ಅದೇ ದ್ವಿಚಕ್ರ ವಾಹನಗಳಲ್ಲಿ ಆರೋಪಿ ಸುತ್ತಾಡುತ್ತಿದ್ದ. ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುತ್ತಿದ್ದ ಯುವತಿಯರನ್ನು ಹಿಂಬಾಲಿಸುತ್ತಿದ್ದ ಆರೋಪಿ, ಅಡ್ಡಗಟ್ಟಿ ಅಂಗಾಂಗಗಳನ್ನು ಮುಟ್ಟಿ ದೌರ್ಜನ್ಯ ಎಸಗುತ್ತಿದ್ದ. ನಂತರ, ದ್ವಿಚಕ್ರ ವಾಹನದಲ್ಲಿ ಪರಾರಿಯಾಗುತ್ತಿದ್ದ' ಎಂದರು.

'ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಯುವತಿ, ಊಟ ಮುಗಿಸಿ ವಾಯುವಿಹಾರ ಮಾಡುತ್ತಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿ ಕೃತ್ಯ ಎಸಗಿ ಪರಾರಿಯಾಗಿದ್ದ. ನೊಂದ ಯುವತಿ ಠಾಣೆಗೆ ದೂರು ನೀಡಿದ್ದರು. ಹಲವು ಯುವತಿಯರ ಮೇಲೆ ಆರೋಪಿ ಲೈಂಗಿಕ ದೌರ್ಜನ್ಯ ಎಸಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅಡಿಕೆ, ತೆಂಗು ಹರಾಜು



ದಾಬಸ್‌ಪೇಟೆ: ಗೊಂದಲ, ಪ್ರತಿಭಟನೆ ನಡುವೆ ಅಡಿಕೆ, ತೆಂಗು ಹರಾಜು ನಡೆಯಿತು. ಕೆರೆ ಒತ್ತುವರಿ ಮಾಡಿಕೊಂಡು ಅಡಿಕೆ, ತೆಂಗು ನೆಟ್ಟಿದ್ದ ರವಿಕುಮಾರ್‌ಗೆ ಒಂದು ವರ್ಷಕ್ಕೆ ₹ 2.60 ಲಕ್ಷಕ್ಕೆ ಹರಾಜಾಯಿತು.

ಕೆರೆ ಒತ್ತುವರಿ ಜಾಗದಲ್ಲಿ 350 ಅಡಿಕೆ, 6 ತೆಂಗಿನ ಮರಗಳಿದ್ದ ಕಾರಣ ಅವುಗಳನ್ನು ನಾಶ ಮಾಡದಿರಲು ನಿರ್ಧರಿಸಿ, ಆದಾಯವನ್ನು ಗ್ರಾ.ಪಂ.ಗೆ ನೀಡಲು ನಿರ್ಧರಿಸಲಾಗಿತ್ತು.

ಪಂಚಾಯಿತಿ ಆವರಣದಲ್ಲಿ ಶನಿವಾರ ಹರಾಜು ಏರ್ಪಡಿಸಲಾಗಿತ್ತು. ಇದಕ್ಕಾಗಿ ಭಿತ್ತಿಪತ್ರ ಹೊರಡಿಸಿ, ಪ್ರಚಾರ ಮಾಡಲಾಗಿತ್ತು.

ಆದರೆ, ಶನಿವಾರ ಬೆಳಿಗ್ಗೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಹರಾಜು ಮುಂದೂಡಲಾಗಿದೆ ಎಂದು ಕಚೇರಿ ನೋಟಿಸ್ ಬೋರ್ಡ್‌ನಲ್ಲಿ ಹಾಕಲಾಗಿತ್ತು. ಹರಾಜಿಗೆ ಹಣ ಹೊಂದಿಸಿಕೊಂಡು ಬಂದಿದ್ದ ಜನರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರು ಪಂಚಾಯಿತಿ ಅಧ್ಯಕ್ಷರ ನಿಲುವು ವಿರೋಧಿಸಿ ಪಂಚಾಯಿತಿ ಕಚೇರಿ ಎದುರು ಪ್ರತಿಭಟಿಸಿದರು.

ಪ್ರತಿಭಟನೆಗೆ ಮಣಿದು ಅಧ್ಯಕ್ಷ ರಾಮಾಂಜನೇಯ ಹರಾಜು ನಡೆಸಿದರು ಎಂದು ಕರುನಾಡ ವಿಜಯ ಸೇನೆಯ ರಾಮಕೃಷ್ಣ ಮಾಹಿತಿ ನೀಡಿದರು.

'ಕಪ್ಪೆ ರಾಗ'ಕ್ಕೆ ಜಾಕ್ಸನ್ ವೈಲ್ಡ್ ಮೀಡಿಯಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವನ್ಯಜೀವಿ ಚಿತ್ರ ನಿರ್ಮಾಪಕ ಪ್ರಶಾಂತ್ ಎಸ್. ನಾಯಕ್ ನಿರ್ದೇಶನದ ವನ್ಯಜೀವಿ ಸಂಗೀತ ಆಧಾರಿತ ಕನ್ನಡ ಸಾಕ್ಷ್ಯಚಿತ್ರ 'ಕಪ್ಪೆ ರಾಗ'ಕ್ಕೆ ಗ್ರೀನ್ ಆಸ್ಕರ್ ಎಂದೇ ಹೆಸರಾಗಿರುವ ಪ್ರತಿಷ್ಠಿತ 'ಜಾಕ್ಸನ್ ವೈಲ್ಡ್ ಮೀಡಿಯಾ ಪ್ರಶಸ್ತಿ' ಲಭ್ಯವಾಗಿದೆ.

'ಕುಂಬಾರ ಕಪ್ಪೆ'ಯ ನಡವಳಿಕೆ ಆಧರಿಸಿ ನಿರ್ಮಾಣವಾದ ಸಾಕ್ಷ್ಯಚಿತ್ರ ಇದಾಗಿದೆ. ಇದನ್ನು ಗೌತಮ್ ಶಂಕರ್ ನಿರ್ಮಿಸಿದ್ದಾರೆ, ಅಶ್ವಿನ್ ಪಿ. ಕುಮಾರ್ ಸಂಗೀತ ನೀಡಿದ್ದಾರೆ. ಚಿತ್ರದ ಚಿತ್ರೀಕರಣವನ್ನು ಹುಬ್ಬಳ್ಳಿಯ ವಿಕಾಸ್ ಪಾಟೀಲ ಮಾಡಿದ್ದಾರೆ.

'ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡದ ವನ್ಯಜೀವಿ ಸಂಗೀತ ಆಧಾರಿತ ಸಾಕ್ಷ್ಯಚಿತ್ರ ಇದಾಗಿದೆ' ಎಂದು ಸಾಕ್ಷ್ಯ ಚಿತ್ರದ ನಿರ್ದೇಶಕ ಪ್ರಶಾಂತ್ ಎಸ್. ನಾಯಕ ತಿಳಿಸಿದ್ದಾರೆ.



ಪ್ರಶಾಂತ್

'ಕುಂಬಾರ ಕಪ್ಪೆ ಅತ್ಯಂತ ಸೂಕ್ಷ್ಮ ಹಾಗೂ ಸಂಪೂರ್ಣ ನಿಶಾಚರಿಯಾಗಿದೆ. ಅದರ ಆವಾಸಸ್ಥಾನ, ಸಂತಾನೋತ್ಪತ್ತಿ ಪ್ರಕ್ರಿಯೆ ಹೀಗೆ ಎಲ್ಲವೂ ತೊರೆಯಲ್ಲೇ ನಡೆಯುತ್ತದೆ. ಇಂಥ ನಡವಳಿಕೆ ಯನ್ನು ವಿಡಿಯೊ ರೂಪದಲ್ಲಿ ದಾಖಲಿಸಿ, ಕನ್ನಡದ ಹಾಡಿನ ರೂಪದಲ್ಲಿ ಈ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿದೆ' ಎಂದಿದ್ದಾರೆ.

ರಸ್ತೆ ಗುಂಡಿ ಮುಚ್ಚಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿದ್ದ ಗುಂಡಿಗಳನ್ನು ಸಂಚಾರ ಪೊಲೀಸರು ಮುಚ್ಚಿದ್ದು, ಈ ಕೆಲಸಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿದ್ದವು. ವಾಹನಗಳು ಸಹ ನಿಧಾನ ಗತಿಯಲ್ಲಿ ಸಂಚರಿಸುತ್ತಿದ್ದರಿಂದ ದಟ್ಟಣೆಯೂ ಉಂಟಾಗುತ್ತಿತ್ತು.

ಸುಗಮ ಸಂಚಾರಕ್ಕೆ ರಸ್ತೆ ಗುಂಡಿಗಳು ಅಡ್ಡಿಯಾಗಿದ್ದನ್ನು ಗಮನಿಸಿದ್ದ ಎಚ್‌ಎಸ್‌ಆರ್ ಲೇಔಟ್ ಸಂಚಾರ ಪೊಲೀಸರು, ತಾವೇ ಸಲಿಕೆ ಹಿಡಿದು ಸಿಮೆಂಟ್ ಮಿಶ್ರಿತ ಜಲ್ಲಿ ಕಲ್ಲುಗಳಿಂದ ಗುಂಡಿ ಮುಚ್ಚಿದ್ದಾರೆ.



ಹೊರ ವರ್ತುಲ ರಸ್ತೆಯಲ್ಲಿನ ಗುಂಡಿಗಳನ್ನು ಸಂಚಾರ ಪೊಲೀಸರು ಮುಚ್ಚಿದರು

'27ನೇ ಮುಖ್ಯರಸ್ತೆ ಹಾಗೂ ಅಗರ ಕೆಳ ಸೇತುವೆ ರಸ್ತೆಯಲ್ಲಿ ರಸ್ತೆ ಗುಂಡಿ ಗಳಿಂದ ಕೂಡಿತ್ತು. ರಸ್ತೆ ನಿರ್ವಹಣೆ ಅಧಿಕಾರಿಗಳಿಗೆ ದೂರು ನೀಡಿದರೂ ದುರಸ್ತಿ ಮಾಡಿರಲಿಲ್ಲ. ಹೀಗಾಗಿ, ಸಂಚಾರ ಪೊಲೀಸರೇ ಗುಂಡಿಗಳನ್ನು ಮುಚ್ಚಿದ್ದಾರೆ' ಎಂದು ಸ್ಥಳೀಯರೊಬ್ಬರು ಹೇಳಿದರು.

ಪೊಲೀಸರು ರಸ್ತೆ ಗುಂಡಿ ಮುಚ್ಚಿರುವ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ. ಫೋಟೊ ಹಂಚಿಕೊಂಡಿರುವ ಸಾರ್ವಜನಿಕರು, 'ಬಿಬಿಎಂಪಿ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಮಾಡದ ಕೆಲಸವನ್ನು ಪೊಲೀಸರು ಮಾಡಿದ್ದಾರೆ' ಎಂದು ಹೊಗಳಿದ್ದಾರೆ.




ಅತ್ತಿಗುಪ್ಪೆಯಲ್ಲಿರುವ ಬಂಟರ ಸಂಘದ ಸಭಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಹೊಸ ಅಕ್ಕಿ ಊಟ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ತುಳುನಾಡಿನ ಜನರು, ಭತ್ತದ ತೆನೆಗಳನ್ನು ಹೊತ್ತು ತಂದು ಸಾಂಪ್ರದಾಯಿಕ ಆಚರಣೆ ನೆರವೇರಿಸಿದರು – ಪ್ರಜಾವಾಣಿ ಚಿತ್ರ

'ಬೆಂಗಳೂರು ಕಂಬಳಕ್ಕೆ ₹ 1 ಕೋಟಿ ಅನುದಾನ ನೀಡಿ'

ಬೆಂಗಳೂರು: ತುಳುನಾಡಿನ ಸಾಂಪ್ರದಾಯಿಕ ಹೊಸ ಅಕ್ಕಿ ಊಟ (ರಾಜಬೂಡುಡ್ ಪುದ್ದಾರ್ ಲೇಸ್) ಕಾರ್ಯಕ್ರಮವನ್ನು ನಗರದಲ್ಲಿ ಭಾನುವಾರ ಸಂಭ್ರಮದಿಂದ ಆಚರಿಸಲಾಯಿತು.

ವಿಜಯನಗರದ ಅತ್ತಿಗುಪ್ಪೆಯಲ್ಲಿರುವ ಬಂಟರ ಸಂಘದ ಸಭಾಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದ ಮಹಿಳೆಯರು ಹಾಗೂ ಮಕ್ಕಳು, ಭತ್ತದ ಹೊಸ ಪೈರುಗಳ ತೆನೆಗಳನ್ನು ಹೊತ್ತು ತಂದರು. ತಮ್ಮೂರಿನ ಆಚರಣೆಯನ್ನು ಮೆಲುಕು ಹಾಕಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

'ತುಳುಕೂಟ ಬೆಂಗಳೂರು' ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪುತ್ತೂರು ಶಾಸಕ ಅಶೋಕ್‌ಕುಮಾರ್ ರೈ ಮಾತನಾಡಿ, 'ನಗರದಲ್ಲಿ ಕಂಬಳ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ರಾಜ್ಯ ಸರ್ಕಾರ ₹ 1 ಕೋಟಿ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು.



'ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್'ನಿಂದ ಭಾನುವಾರ ಸಾಹಿತಿ ಸರಸ್ವತಿ ವಿಜಯ್ ಕುಮಾರ್‌ಗೆ 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಟ್ರಸ್ಟಿ ಎಂ.ಜೆ ಇಂದ್ರಕುಮಾರ್, ತ್ಯಾಗಿ ಸೇವಾ ಸಮಿತಿಯ ಅಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್, ಭಾರತೀಯ ಜೈನ ಮಿಲನ್ ಕಾರ್ಯಾಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್, ಟ್ರಸ್ಟ್ ಛೇರ್ಮನ್ ಎಸ್. ಜಿತೇಂದ್ರ ಕುಮಾರ್, ವೈದ್ಯೆ ಡಾ.ವಿಜಯಲಕ್ಷ್ಮಿ ಐ. ಬಾಳೇಕುಂದ್ರಿ ಮತ್ತು ಪತ್ರಕರ್ತ ಪದ್ಮರಾಜ ದಂಡಾವತಿ ಇದ್ದರು ಪ್ರಜಾವಾಣಿ ಚಿತ್ರ

'ಪ್ರಶಸ್ತಿಗಾಗಿ ಕೆಲಸ ಮಾಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರಹವೂ ಸೇರಿದಂತೆ ಯಾವುದೇ ವಿಶೇಷ ಕಾರ್ಯಗಳನ್ನು ಪ್ರಶಸ್ತಿಗಾಗಿ ಮಾಡುವುದಿಲ್ಲ. ಮಾಡಿದ ಕೆಲಸಕ್ಕೆ ಪ್ರಶಸ್ತಿ ಬಂದರೆ ಸ್ವೀಕರಿಸುವುದು ತಪ್ಪಲ್ಲ' ಎಂದು ಸಾಹಿತಿ ಸರಸ್ವತಿ ವಿಜಯಕುಮಾರ್ ಹೇಳಿದರು.

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ವತಿಯಿಂದ ಭಾನುವಾರ ನಗರದಲ್ಲಿ 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ, ದ್ರವ್ಯಾನುಯೋಗ ಗ್ರಂಥಗಳು ಜೈನರ ಆಧಾರ ಗ್ರಂಥಗಳು. ಅದರಲ್ಲಿ ಪ್ರಥಮಾನುಯೋಗಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಮಹಾಗ್ರಂಥವನ್ನು ಶಾಂತಿರಾಜ ಶಾಸ್ತ್ರಿಯವರು ರಚಿಸಿ ನೀಡಿದ್ದರಿಂದ ಹಲವು ತೌಲನಿಕ ಅಧ್ಯಯನಕ್ಕೆ ನೆರವಾಯಿತು' ಎಂದು ಹೇಳಿದರು.

ಪತ್ರಕರ್ತ ಪದ್ಮರಾಜ ದಂಡಾವತಿ ಮಾತನಾಡಿ, 'ಜೈನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಹಳ ಪ್ರಶಸ್ತಿಗಳಿಲ್ಲ. ಬೆರಳೆಣಿಕೆಯ ಮಹತ್ವದ ಪ್ರಶಸ್ತಿಗಳಲ್ಲಿ ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ನೀಡುವ ಆದರ್ಶ ಮಹಿಳಾ ರತ್ನ ಪ್ರಶಸ್ತಿಯೂ ಒಂದು' ಎಂದು ವಿವರಿಸಿದರು.

ಜಿನೇಂದ್ರ ವರ್ಣಿ ಹಿಂದಿಯಲ್ಲಿ ಸಂಪಾದಿಸಿದ ಸಿದ್ಧಾಂತಕೋಶವನ್ನು ಅನುವಾದಿಸುವುದರ ಜೊತೆಗೆ ಕನ್ನಡದ ಶಬ್ದಗಳನ್ನೂ ಸೇರಿಸುವ ಕಾರ್ಯವನ್ನು ಸರಸ್ವತಿ ವಿಜಯಕುಮಾರ್ ಮತ್ತು ಬಳಗ ಮಾಡಿದ್ದಾರೆ. ಕನ್ನಡದಲ್ಲಿ ಜೈನ ವಿಶ್ವಕೋಶ ಬಂದಿಲ್ಲ. ನಮ್ಮಲ್ಲಿ ಆರ್ಥಿಕ ಸಂಪನ್ಮೂಲದ ಕೊರತೆ ಇಲ್ಲ. ತಜ್ಞರನ್ನು ಹುಡುಕಿ ಈ ಕೆಲಸ ಮಾಡಿಸಬೇಕು' ಎಂದು ಸಲಹೆ ನೀಡಿದರು.

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ತ್ಯಾಗಿ ಸೇವಾ ಸಮಿತಿ ಅಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್ ಉದ್ಘಾಟಿಸಿದರು. ಭಾರತೀಯ ಜೈನ ಮಿಲನ್ ಕಾರ್ಯಾಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ಮಕ್ಕಳ ಹೃದಯ ತಜ್ಞೆ ಡಾ. ವಿಜಯಲಕ್ಷ್ಮೀ ಐ. ಬಾಳೇಕುಂದ್ರಿ ಮಾತನಾಡಿದರು.

ಟ್ರಸ್ಟ್‌ನ 35ನೇ ವಾರ್ಷಿಕೋತ್ಸವ ಮತ್ತು 24ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗಿತು.

ಹೈದರಾಬಾದ್

ಸೀ ದಿ ಸನ್ ಗೆಲ್ಲುವ ನಿರೀಕ್ಷೆ

ಕೋರಮಂಡಲ್ ಗ್ರೊಮೊರ್ ಡೆಕ್ಕನ್ ಡರ್ಬಿ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು,ಸೀ ದಿ ಸನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫಸ್ಟ್ ಕ್ಲಾಸ್ 5, ಡೂ ಎ ಡೀರ್ 4, ಮಿರೆಯಾ 3
2ನೇ ರೇಸ್: ಆಸ್ಟ್ರೇಲಿಯಾ 2, ಶ್ಯಾಡೊ ಆಫ್ ದಿ ಮೂನ್ 5, ಹ್ಯಾಪಿ ಸೋಲ್ 4
3ನೇ ರೇಸ್: ಸಿದ್ಧಾರ್ಥ್ 2, ಕಿಂಗ್ಸ್ ಬೆಸ್ಟ್ 3, ಅದ್ಭುತ್ 6
4ನೇ ರೇಸ್: ಎನೆಬ್ಲಿಂಗ್ 4, ಅಕ್ರೊಬ್ಯಾಟ್ 5, ಟ್ರೂ ಐಕಾನ್ 3
5ನೇ ರೇಸ್: ತ್ರಿಪುರಾರಿ 5, ರಾಯಲ್ ಪಾಲ್ 7, ಬ್ಲಾಸ್ಟ್ ಇನ್ ಕ್ಲಾಸ್ 4
6ನೇ ರೇಸ್; ಅಶೋಕ 10, ಮೊಜೆಲ್ 3, ಕಾಲ್ಲಿಸ್ಟ್ 8
7ನೇ ರೇಸ್: ರಾಯಲ್ ಗ್ರೇಸ್ 6, ಅಶ್ವ ಮೊರೊಕ್ಕೊ 4, ವಾಚ್ ಮೈ ಸ್ಟ್ರೈಡ್ 1
8ನೇ ರೇಸ್: ಸೀ ದಿ ಸನ್ 3, ಸಿಂಥೆಸಿಸ್ 5, ಲಿವರ್ಮೋರ್ 8
9ನೇ ರೇಸ್: ಫಾರೆವರ್ ಬಾಂಡ್ 1, ಗೋಲ್ಡನ್ ಇನ್ಸಿಯೊ 2, ಗುಡ್ ಟ್ರೈಡಿಂಗ್ಸ್ 3

ಉತ್ತಮ ಬೆಟ್: ಎನೆಬ್ಲಿಂಗ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್
1,2,3,4,5	5,6,7,8,9	1,2,3

2ನೇ ಟ್ರಿಬಲ್ 4,5,6 3ನೇ ಟ್ರಿಬಲ್ 7,8,9

₹ 80 ಸಾವಿರ ವಂಚನೆ

ಚಿಕ್ಕಬಳ್ಳಾಪುರ: ಮಿಶೋ ಆನ್‌ಲೈನ್ ಶಾಪಿಂಗ್‌ನಲ್ಲಿ ಬಹುಮಾನ ಬಂದಿದೆ ಎಂದು ತಾಲ್ಲೂಕಿನ ಕಾಡದಿಬ್ಬೂರಿನ ಮಹಿಳೆಯೊಬ್ಬರಿಗೆ ಎಂಬುವರಿಗೆ ಆನ್‌ಲೈನ್ ವಂಚಕರು ₹81 ಸಾವಿರ ವಂಚಿಸಿದ್ದಾರೆ.

ನಿಧನ ವಾರ್ತೆ

ಎಂ. ಚಂದ್ರಮೋಹನ್

ಬೆಂಗಳೂರು: 'ಜನಪ್ರಗತಿ' ವಾರ ಪತ್ರಿಕೆಯ ಸಂಪಾದಕರಾಗಿದ್ದ ಎಂ. ಚಂದ್ರಮೋಹನ್ (67) ಭಾನುವಾರ ನಿಧನರಾದರು.



ಇವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.


'ಕುಣಿಗಲ್ ತಾಲ್ಲೂಕಿನ ಗೌಡಗೇರಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಕುಂದು–ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದು-ಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಹನುಮಗಿರಿ ಮುಖ್ಯರಸ್ತೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸದ ಸೋಲಾರ್ ದೀಪಗಳು

'ಹನುಮಗಿರಿ:ಬೀದಿ ದೀಪ ಅಳವಡಿಸಿ'

ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ನಗರ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಇರುವ ಸೋಲಾರ್ ಬೀದಿ ದೀಪಗಳು ಸಮರ್ಪಕವಾಗಿ ಬೆಳಗುತ್ತಿಲ್ಲ. ಮಳೆ, ಮೋಡದ ವಾತಾವರಣ ಇದ್ದರೆ ಸೋಲಾರ್ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಈ ರಸ್ತೆಯಲ್ಲಿನ ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರದವರೆಗೂ ಕತ್ತಲು ಆವರಿಸುತ್ತಿದೆ. ಹೀಗಾಗಿ, ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಭಯದಲ್ಲಿ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ವಾಹನಗಳು ವೇಗವಾಗಿ ಬರಲಿದ್ದು, ರಸ್ತೆ ತಿರುವು ಇರುವುದರಿಂದ ಅಪಘಾತವಾಗುವ ಸಾಧ್ಯತೆಯೂ ಇದೆ. ಆದ್ದರಿಂದ ಇಲ್ಲಿ ರಸ್ತೆಯುದ್ದಕ್ಕೂ ವಿದ್ಯುತ್ ದೀಪಗಳನ್ನು ಅಳವಡಿಸಬೇಕು.

ಮಂಜುನಾಥ್, ಸಪ್ತಗಿರಿ ನಗರ

'ಬಿಎಂಟಿಸಿ ಬಸ್ ನಿಲ್ಲಿಸುತ್ತಿಲ್ಲ'

ಕೆ.ಆರ್. ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೇಡಹಳ್ಳಿ ಬಸ್ ತಂಗುದಾಣದಲ್ಲಿ ಬಿಎಂಟಿಸಿ ಬಸ್ ನಿಲ್ಲಿಸುತ್ತಿಲ್ಲ. ಎಲ್ಲಾ ಬಿಎಂಟಿಸಿ ಬಸ್‌ಗಳು ಮೇಲ್ಸೇತುವೆ ಮೇಲೆ ಹೋಗುತ್ತಿವೆ. ಸರ್ವಿಸ್ ರಸ್ತೆಯಲ್ಲಿ ಯಾವುದೇ ಬಸ್ ಬರುವುದಿಲ್ಲ. ಎಸ್.ಜೆ.ಇ.ಎಸ್ ಕಾಲೇಜಿನಿಂದ ಮೇಡಹಳ್ಳಿ ಬಸ್ ತಂಗುದಾಣ ಸುಮಾರು ಒಂದು ಕಿ.ಮೀ. ದೂರ ಇದೆ. ಮೇಡಹಳ್ಳಿಯಲ್ಲಿ ಸಂಚಾರ ದಟ್ಟಣೆ ಆಗುತ್ತದೆ ಎಂಬ ಕುಂಟು ನೆಪ ಕೊಟ್ಟು, ಎಲ್ಲಾ ಬಿಎಂಟಿಸಿ ಬಸ್‌ಗಳು ಮೇಲ್ಸೇತುವೆ ಮೇಲೆ ಹೋಗುತ್ತವೆ. ಪ್ರತಿನಿತ್ಯ ಪ್ರಯಾಣಿಕರು, ಬಸ್ ನಿರ್ವಾಹಕರು ಹಾಗೂ ಚಾಲಕರ ನಡುವೆ ವಾಗ್ವಾದ, ಜಗಳ ಆಗುತ್ತದೆ. ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಶಾಲಾ ಮಕ್ಕಳು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ಬಿಎಂಟಿಸಿ ಡಿಪೊ ವ್ಯವಸ್ಥಾಪಕರ ಬಳಿ ಹಲವು ಬಾರಿ ಮನವಿ ಮಾಡಿದರೂ ಸಮಸ್ಯೆ ಬಗೆಹರಿದಿಲ್ಲ. ಈಗಲಾದರೂ ಸಂಬಂಧಪಟ್ಟ ಬಿಎಂಟಿಸಿ ಅಧಿಕಾರಿಗಳು ಗಮನಹರಿಸಿ, ಸಮಸ್ಯೆ ಬಗೆಹರಿಸಬೇಕು.

ಕಿಶೋರ್ ಕುಮಾರ್ ಜೆ., ಮೇಡಹಳ್ಳಿ (ಕೆ.ಆರ್. ಪುರ)

'ಪೊಲೀಸ್ ಚೌಕಿ ದುರಸ್ತಿಪಡಿಸಿ'

ನಗರದ ಹಲವು ಕಡೆಗಳಲ್ಲಿ ಸಂಚಾರ ಪೊಲೀಸ್ ಚೌಕಿ ಹೀನಾಯ ಸ್ಥಿತಿಗೆ ತಲುಪಿವೆ. ಇದರಿಂದಾಗಿ ಮಳೆ ಮತ್ತು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಸಂಚಾರ ಪೊಲೀಸರು ಪರದಾಟ ನಡೆಸಬೇಕಾಗಿದೆ. ಇದಕ್ಕೆ ಉತ್ತಮ ಉದಾಹರಣೆ ಬಿವಿಕೆ ಅಯ್ಯಂಗಾರ್ ರಸ್ತೆ ತಿರುವಿನ ವೃತ್ತದಲ್ಲಿ ಇರುವ ಸಂಚಾರ ಪೊಲೀಸ್ ಚೌಕ. ತುಕ್ಕು ಹಿಡಿದು ಅವಸಾನಕ್ಕೆ ತಲುಪಿರುವ ಚೌಕಿಗಳನ್ನು ತೆಗೆದು, ಸುಸಜ್ಜಿತ ಚೌಕಿಗಳನ್ನು ಅಳವಡಿಸಬೇಕು. ಈ ಮೂಲಕ ನಗರದ ಪ್ರಮುಖ ಸಮಸ್ಯೆಯಾದ ಸಂಚಾರ ದಟ್ಟಣೆ ನಿವಾರಣೆಗೆ ಶ್ರಮಿಸುತ್ತಿರುವ ಪೊಲೀಸರಿಗೆ ಅಗತ್ಯ ನೆರವು ಕಲ್ಪಿಸಬೇಕು.

ಶಿವಪ್ರಸಾದ್ ಎಸ್.



ಬಿವಿಕೆ ಅಯ್ಯಂಗಾರ್ ರಸ್ತೆಯ ತಿರುವಿನ ವೃತ್ತದಲ್ಲಿರುವ ಸಂಚಾರ ಪೊಲೀಸ್ ಚೌಕಿಯ ಸ್ಥಿತಿ

'ಮರದ ಬಳಿಯ ಕಸ ತೆರವುಗೊಳಿಸಿ'

ಹೊಸೂರು ರಸ್ತೆಯ ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದ ಬಳಿ ಮರವೊಂದಕ್ಕೆ ಹಾಕಿರುವ ಕಬ್ಬಿಣದ ತಂತಿ ಜಾಲರಿ ತುಂಬಾ ಕಸ ಹಾಕಲಾಗಿದೆ. ಇದನ್ನು ತೆರವುಗೊಳಿಸದಿದ್ದರಿಂದ ಅಲ್ಲಿಯೇ ಗಿಡಗಳು ಬೆಳೆಯುತ್ತಿವೆ. ಮರದ ಬೆಳವಣಿಗೆಗೆ ಕೂಡ ಸಮಸ್ಯೆಯಾಗಿದೆ. ಕೆಲವು ವೇಳೆ ಈ ಕಸಗಳು ಪಾದಚಾರಿ ಮಾರ್ಗವನ್ನು ಆವರಿಸಿಕೊಳ್ಳಲಿದೆ. ಮಳೆಗಾಲದಲ್ಲಿ ನೀರು ನಿಲ್ಲುವುದರಿಂದ ಕಸ ಕೊಳೆತು, ವಾಸನೆಯಾಗುತ್ತಿದೆ. ಇದೇ ರೀತಿ, ನಗರದ ಹಲವು ಕಡೆ ನೋಡಬಹುದಾಗಿದೆ. ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಕೂಡಲೇ ಕ್ರಮ ವಹಿಸಬೇಕು.

ರಾಜೇಶ್, ಸ್ಥಳೀಯ ನಿವಾಸಿ



ಮರಕ್ಕೆ ಜೋಡಿಸಿರುವ ಕಬ್ಬಿಣದ ತಂತಿ ಜಾಲರಿಯಲ್ಲಿ ಕಸ ಹಾಕಿರುವುದು

'ಅರ್ಧಕ್ಕೆ ನಿಂತ ರಸ್ತೆ ಕಾಮಗಾರಿ'

ಉತ್ತರಹಳ್ಳಿ ಮುಖ್ಯ ರಸ್ತೆಯ ವಿಸ್ತರಣೆ ಕಾಮಗಾರಿಯನ್ನು ಅರ್ಧಕ್ಕೆ ಏಕಾಏಕಿ ನಿಲ್ಲಿಸಲಾಗಿದೆ. ನಾಲ್ಕು ತಿಂಗಳಿಂದ ಇಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ. ಭಾರಿ ಪ್ರಮಾಣದ ಜಲ್ಲಿ ಮತ್ತು ಕಲ್ಲುಗಳು ರಸ್ತೆಯಲ್ಲಿ ಹರಡಿದ್ದು, ರಸ್ತೆಯುದ್ದಕ್ಕೂ ಗುಂಡಿಗಳು ಬಿದ್ದಿವೆ. ಪ್ರತಿ ದಿನ ಸಾವಿರಾರು ವಾಹನಗಳು ಇಲ್ಲಿ ಸಂಚರಿಸುತ್ತವೆ. ಪ್ರತಿ ವಾಹನ ಚಲಾಯಿಸಿದಾಗ ಭಾರಿ ಪ್ರಮಾಣದ ದೂಳು ಮೇಲೆದ್ದು, ಅಕ್ಕಪಕ್ಕದಲ್ಲಿ ವ್ಯಾಪಿಸಿಕೊಳ್ಳುತ್ತಿದೆ. ಇದು ಸುತ್ತಮುತ್ತಲಿನ ನಿವಾಸಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಪ್ರಸ್ತುತ ಈ ರಸ್ತೆ ಕೆಂಗೇರಿಯಿಂದ ಸಾವನ್ ದರ್ಭಾರ ಆಶ್ರಮದವರೆಗೆ (ಮೈಲಸಂದ್ರ ಕೆರೆ ಏರಿ ರಸ್ತೆ) ಸಂಪೂರ್ಣ ಹಾಳಾಗಿದೆ. ದಿನವೂ ಒಂದಿಲ್ಲ ಒಂದು ಅವಘಡ ಸಂಭವಿಸುತ್ತಿದೆ. ಸಂಬಂಧಪಟ್ಟವರು ಈ ರಸ್ತೆಯ ಕೆಲಸವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ವೈ.ಎನ್.ನಾಗರಾಜ, ಕೆಂಗೇರಿ



ಜಯನಗರದ ಕಲಾನಿಕೇತನ್ ಮಾಲ್ ಬಳಿ ಬಸ್ ನಿಲ್ದಾಣ ಇಲ್ಲದಿರುವುದರಿಂದ ಜನರು ನಿಂತಿರುವುದು

'ಬಸ್ ನಿಲ್ದಾಣ ನಿರ್ಮಿಸಿ'

ಶಿವಾಜಿನಗರ ಕಡೆಯಿಂದ ಸಂಜಯ ಗಾಂಧಿ ಆಸ್ಪತ್ರೆ, ಜಯದೇವ ಆಸ್ಪತ್ರೆ, ಬಿಟಿಎಂ ಲೇಔಟ್ ಹಾಗೂ ಹೊಸೂರು ರಸ್ತೆ ಕಡೆಗೆ ಹೋಗುವ ಪ್ರಯಾಣಿಕರು ಜಯನಗರದ ಕಲಾನಿಕೇತನ್ ಮಾಲ್ ಬಳಿ ಬಿಎಂಟಿಸಿ ಬಸ್ ಇಳಿದು, ಮತ್ತೊಂದು ಬಸ್‌ನಲ್ಲಿ ಪ್ರಯಾಣ ಮಾಡಬೇಕಾಗಿದೆ. ಆದರೆ, ಇಲ್ಲಿ ಬಸ್ ನಿಲ್ದಾಣ ಇಲ್ಲದಿರುವುದರಿಂದ ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಮಕ್ಕಳು ಮಳೆ ಬಿಸಿಲಿನಲ್ಲಿ ನಿಂತು ಬಸ್‌ಗೆ ಕಾಯಬೇಕಾಗಿದೆ. ಈ ಬಗ್ಗೆ ಸಂಬಂಧಿಸಿದವರು ಪರಿಶೀಲಿಸಿ, ಇಲ್ಲಿ ಒಂದು ಬಸ್ ನಿಲ್ದಾಣವನ್ನು ನಿರ್ಮಿಸಬೇಕು. ಈ ಮೂಲಕ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕು.

ಎಚ್. ದೊಡ್ಡ ಮಾರಯ್ಯ, ಸ್ಥಳೀಯ ನಿವಾಸಿ

'ಐ.ಟಿ, ಬಿ.ಟಿ ಕಾರಿಡಾರ್'ಗೆ 'ಎಸ್.ಎಂ.ಕೃಷ್ಣ ನಾಲೆಡ್ಜ್ ಸಿಟಿ' ನಾಮಕರಣಕ್ಕೆ ಒತ್ತಾಯ

'ರಾಜಕೀಯ ತರಬೇತಿ ಕೇಂದ್ರ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚೆಗೆ ರಾಜಕೀಯ ಕ್ಷೇತ್ರ ಪ್ರವೇಶಿಸುತ್ತಿರುವ ಅನೇಕರಿಗೆ ಸಂವಿಧಾನದ ಅರಿವಾಗಲಿ, ದೇಶ ಹಾಗೂ ರಾಜ್ಯದ ಇತಿಹಾಸವಾಗಲಿ ತಿಳಿದಿಲ್ಲ. ಅಂಥವರಿಗೆ ತರಬೇತಿ ನೀಡಲು ಕೇಂದ್ರವೊಂದನ್ನು ಸ್ಥಾಪಿಸುವುದು ಅಗತ್ಯ' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ಸಪ್ನ ಬುಕ್‌ಹೌಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಎನ್. ಜಗದೀಶ್ ಕೊಪ್ಪ ಅವರ 'ನೆಲದ ಸಿರಿ' (ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಜೀವನಗಾಥೆ) ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಆ ತರಬೇತಿ ಕೇಂದ್ರಕ್ಕೆ ಮಾದರಿ ರಾಜಕಾರಣಿ ಎಸ್.ಎಂ. ಕೃಷ್ಣ ಅವರ ಹೆಸರನ್ನೇ ಇಡಬೇಕು. ಕೃಷ್ಣ ಅವರ ಅಳಿಯ ದಿವಂಗತ ಸಿದ್ಧಾರ್ಥ ಅವರೂ ಇಂತಹದ್ದೇ ತರಬೇತಿ ಕೇಂದ್ರ ಆರಂಭಿಸುವ ಆಲೋಚನೆಯಲ್ಲಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ' ಎಂದು ಹೇಳಿದರು.

'ರಾಜಕೀಯ ಕ್ಷೇತ್ರದಲ್ಲಿ ಸಂಭಾವಿತನ ಎಂಬುದು ಕಳೆದು ಹೋಗಿದೆ. ವೈಯಕ್ತಿಕ ನಿಂದನೆ ನಡೆಯುತ್ತಿದೆ. ಇಂದು ರಾಜಕೀಯ ಕ್ಷೇತ್ರಕ್ಕೆ ಬೇರೆ ಬೇರೆ ಕಾರಣಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ' ಎಂದರು.

ಬಿಜೆಪಿ ಮುಖಂಡ ಡಾ.ಕೆ. ಸುಧಾಕರ್ ಮಾತನಾಡಿ, 'ಬೆಂಗಳೂರಿನ ಐ.ಟಿ– ಬಿ.ಟಿ ಕಾರಿಡಾರ್‌ಗೆ ಎಸ್.ಎಂ.ಕೃಷ್ಣ ನಾಲೆಡ್ಜ್ ಸಿಟಿ ಅಥವಾ ಎಸ್.ಎಂ.ಕೃಷ್ಣ ಐ.ಟಿ– ಬಿ.ಟಿ ಸಿಟಿ ಎಂದು ನಾಮಕರಣ ಮಾಡಬೇಕು' ಎಂದು ಆಗ್ರಹಿಸಿದರು.

'ಕೆಂಪೇಗೌಡ ಅವರು ಬೆಂಗಳೂರು ಕಟ್ಟಿದರೆ, ಎಸ್.ಎಂ.ಕೃಷ್ಣ ಆಧುನಿಕ ಬೆಂಗಳೂರು ನಿರ್ಮಿಸಿದರು. ಇವರನ್ನು ಹೈಟೆಕ್ ಸಿಎಂ ಎಂದು ಕರೆಯುತ್ತಿದ್ದರು. ಅದು ಸುಳ್ಳು. ಅವರು ಗ್ರಾಮೀಣ ಭಾಗ, ನೀರಾವರಿ ಕ್ಷೇತ್ರ ಹಾಗೂ ರೈತರಿಗೂ ನ್ಯಾಯ ಕಲ್ಪಿಸಿದ್ದರು' ಎಂದರು.

ಸಾಹಿತಿ ಹಂಪ ನಾಗರಾಜಯ್ಯ ಮಾತನಾಡಿ, 'ಜನಮುಖಿ ಹಾಗೂ ಸಮಾಜಮುಖಿ ಕೆಲಸ ಮಾಡಿದ್ದವರು ಕೃಷ್ಣ' ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಬರ, ಕಾವೇರಿ ಸಮಸ್ಯೆ, ರಾಜಕುಮಾರ್ ಅವರ ಅಪಹರಣ, ಆರ್ಥಿಕ ಸಂಕಷ್ಟವಿದ್ದ ಕಾಲದಲ್ಲಿ ಕೃಷ್ಣ ಅವರು ರಾಜ್ಯವನ್ನು ಸಮರ್ಥವಾಗಿ ಮುನ್ನಡೆಸಿದ್ದರು' ಎಂದು ಸ್ಮರಿಸಿದರು.

ಎಸ್.ಎಂ.ಕೃಷ್ಣ, ಬರಹಗಾರ ನರಹಳ್ಳಿ ಬಾಲಸುಬ್ರಮಣ್ಯ ಇದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬರಹಗಾರ ನರಹಳ್ಳಿ ಬಾಲಸುಬ್ರಹ್ಮಣ್ಯ (ಎಡದಿಂದ ಆರನೆಯವರು) ಅವರು ಎನ್.ಜಗದೀಶ್ ಕೊಪ್ಪ (ಎಡದಿಂದ ಮೂರನೆಯವರು) ಬರೆದ 'ನೆಲದ ಸಿರಿ' ಕೃತಿಯನ್ನು ಬಿಡುಗಡೆ ಮಾಡಿದರು. (ಎಡದಿಂದ) ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಬಿಜೆಪಿ ಮುಖಂಡ ಡಾ.ಕೆ.ಸುಧಾಕರ್, ಸಾಹಿತಿ ಹಂಪ ನಾಗರಾಜಯ್ಯ, ಎಸ್.ಎಂ.ಕೃಷ್ಣ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು. –ಪ್ರಜಾವಾಣಿ ಚಿತ್ರ

'ನನ್ನ ಮೇಲೆ ಮುನಿಸಿಕೊಂಡಿದ್ದ ಕೃಷ್ಣ'

'ಬೆಂಗಳೂರಿಗೆ ಮೊನೊ ರೈಲು ಯೋಜನೆ ಅನುಷ್ಠಾನಕ್ಕೆ ಕೃಷ್ಣ ಮುಂದಾಗಿದ್ದರು. ಅವರ ಸಂಪುಟದಲ್ಲಿದ್ದ ನಾನು ಆ ಯೋಜನೆ ವಿರೋಧಿಸಿದ್ದೆ. ಮೆಟ್ರೊ ರೈಲು ತರುವಂತೆ ಸಲಹೆ ನೀಡಿದ್ದೆ. ಅದಕ್ಕೆ ನನ್ನ ಮೇಲೆ ಮುನಿಸಿಕೊಂಡಿದ್ದರು. ನಂತರ, ಕೃಷ್ಣ ಅವರೇ ವಾಜಪೇಯಿ ಅವರನ್ನು ಭೇಟಿ ಮಾಡಿ ಮೆಟ್ರೊ ರೈಲು ತಂದರು. 'ನಮ್ಮ ಮೆಟ್ರೊ' ಸಹ ಕೃಷ್ಣ ಅವರ ಕೊಡುಗೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಕೃಷ್ಣ ಅವರೊಂದಿಗೆ ರಾಜಕಾರಣದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಬಂದಿದ್ದವು. ಅನೇಕರು ಚಾಡಿ ಹೇಳಿದ್ದರು. ಅವರು ನನ್ನನ್ನು ಸಂಪುಟದಿಂದ ಕೈಬಿಟ್ಟಿದ್ದರು. ಅದಕ್ಕೆ ಜಗಳ ಮಾಡಿದ್ದೆ. ನಂತರ, ಸಂಪುಟಕ್ಕೆ ಸೇರಿಸಿಕೊಂಡಿದ್ದರು' ಎಂದು ನೆನಪಿಸಿಕೊಂಡರು.

'ಕೃಷ್ಣ ಅವರು ಅವಧಿ ಪೂರ್ವ ಚುನಾವಣೆಗೆ ಮುಂದಾದ ವೇಳೆಯೂ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಬರಗಾಲ ಇದೆ. ನಿಮ್ಮ ಜಾತಕವೂ ಸರಿಯಿಲ್ಲ. ಅವಧಿಪೂರ್ವ ಚುನಾವಣೆಯ ನಿರ್ಧಾರ ಬೇಡ ಎಂದಿದ್ದೆ. ಆದರೂ ಕೇಳದೇ ಸರ್ಕಾರವನ್ನು ವಿಸರ್ಜಿಸಿ ಚುನಾವಣೆಗೆ ಹೋದರು. 132 ಕ್ಷೇತ್ರದಲ್ಲಿ ಗೆಲ್ಲುವ ಲೆಕ್ಕಾಚಾರದಲ್ಲಿ ಇದ್ದರು. ಆದರೆ, 72 ಸ್ಥಾನ ಮಾತ್ರ ಪಡೆಯಲು ಸಾಧ್ಯವಾಯಿತು' ಎಂದು ಹೇಳಿದರು.

ಕೃತಿ ಪರಿಚಯ

ಕೃತಿ: ನೆಲದ ಸಿರಿ (ಎಸ್.ಎಂ.ಕೃಷ್ಣ ಅವರ ಜೀವನಗಾಥೆ)
ಲೇಖಕ: ಎನ್.ಜಗದೀಶ್ ಕೊಪ್ಪ
ಬೆಲೆ: ₹295
ಪುಟಗಳು: 291
ಪ್ರಕಾಶನ: ಸಪ್ನ ಬುಕ್ ಹೌಸ್



ವಿಂಟೇಜ್ ಕಾರುಗಳ ಮೆರವಣಿಗೆ

ಅರಣ್ಯ ಇಲಾಖೆಯ 69ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲು 'ವೈಲ್ಡ್ ಲೈಫ್ ವೀಕ್ ಹಿಸ್ಟಾರಿಕಲ್ ಡ್ರೈವ್' ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿಂಟೇಜ್ ಕಾರುಗಳಾದ ಜಾಗ್ವಾರ್, ಫೋರ್ಡ್, ಲ್ಯಾನ್ಸಿಯಾ, ಹಿಲ್ಮ್ಯಾನ್, ಫಿಯೆಟ್, ಅಂಬಾಸಿಡರ್, ವೋಕ್ಸ್ ವ್ಯಾಗನ್ ಸೇರಿದಂತೆ ಅನೇಕ ಕಾರುಗಳ ಮೆರವಣಿಗೆ ನಡೆಯಿತು

ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

ಬ್ರಿಟನ್ ಮ್ಯೂಸಿಯಂ– ಮಹಾರಾಷ್ಟ್ರ ಸರ್ಕಾರ ನಡುವೆ ಶೀಘ್ರ ಒಪ್ಪಂದ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಂಡನ್: ಛತ್ರಪತಿ ಶಿವಾಜಿ ಮಹಾರಾಜ್ ಅವರದ್ದು ಎನ್ನಲಾದ 17ನೇ ಶತಮಾನದ ಹುಲಿ ಉಗುರಿನ ವಿನ್ಯಾಸದ ಆಯುಧವನ್ನು ಮೂರು ವರ್ಷಗಳವರೆಗೆ ಭಾರತಕ್ಕೆ ನೀಡುವ ಸಲುವಾಗಿ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂ ಹಾಗೂ ಮಹಾರಾಷ್ಟ್ರ ಸರ್ಕಾರದ ನಡುವೆ ಮುಂದಿನವಾರ ಒಪ್ಪಂದ ನಡೆಯಲಿದೆ.

'ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ 350ನೇ ವಾರ್ಷಿಕೋತ್ಸವ ಅಂಗವಾಗಿ 'ಹುಲಿ ಉಗುರಿನ' ಆಯುಧವನ್ನು ಭಾರತಕ್ಕೆ ನೀಡುತ್ತಿದ್ದೇವೆ. ಒಪ್ಪಂದಕ್ಕೆ ಸಹಿ ಹಾಕಲು ಆಗಮಿಸುವ ಮಹಾರಾಷ್ಟ್ರದ ನಿಯೋಗವನ್ನು ಬರಮಾಡಿಕೊಳ್ಳಲು ವಸ್ತುಸಂಗ್ರಹಾಲಯವು ಎದುರು ನೋಡುತ್ತಿದೆ' ಎಂದು ಮ್ಯೂಸಿಯಂ ವಕ್ತಾರರು ತಿಳಿಸಿದ್ದಾರೆ.

ಶ್ರೇಯಾಂಕ ಪಟ್ಟಿ ಕ.ವಿ.ವಿ.ಗೆ ಸ್ಥಾನ

ಧಾರವಾಡ: ಲಂಡನ್ ಮೂಲದ 'ದಿ ಟೈಮ್ಸ್' ಉನ್ನತ ಶಿಕ್ಷಣ ನಿಯತಕಾಲಿಕವು ವಿಶ್ವದ ಟಾಪ್ ವಿಶ್ವವಿದ್ಯಾಲಯಗಳ ಪಟ್ಟಿ ಪ್ರಕಟಿಸಿದ್ದು, ರಾಜ್ಯದ 19 ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಪ್ರಥಮ ಸ್ಥಾನದಲ್ಲಿದೆ.

ವಿಶ್ವ ಶ್ರೇಯಾಂಕ ಪಟ್ಟಿಯಲ್ಲಿ 1,000 ದಿಂದ 1,200 ಹಂತದ ರ್‍ಯಾಂಕ್ ಪಡೆದಿದೆ. ವಿಶ್ವದ 108 ರಾಷ್ಟ್ರಗಳ ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್ ನೀಡಲಾಗಿದೆ.

ಬೋಧನೆ, ಸಂಶೋಧನಾ ಪರಿಸರ, ಸಂಶೋಧನಾ ಗುಣಮಟ್ಟ, ಕೈಗಾರಿಕೆ ಮತ್ತು ಅಂತರರಾಷ್ಟ್ರೀಯ ದೃಷ್ಟಿಕೋನ ಸಹಿತ ಪ್ರಮುಖ ಐದು ವಿಷಯ ಮಾಪನಗಳನ್ನು 18 ಸೂಚ್ಯಂಕ ಒಳಗೊಂಡ ಜಾಗತಿಕ ವಿಶ್ವವಿದ್ಯಾಲಯಗಳ 3.0 ಸಂಶೋಧನಾ ಪದ್ಧತಿಯಲ್ಲಿ ವಿಶ್ವದ 2,673ಕ್ಕಿಂತ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸಮೀಕ್ಷೆ ಮಾಡಿತ್ತು.

'ರಾಜ್ಯದ ಮೂರು ವಿಶ್ವವಿದ್ಯಾಲಯಗಳು ಅರ್ಜಿ ಸಲ್ಲಿಕೆಗೆ ಮಾನ್ಯತೆ ಪಡೆದಿದ್ದವು' ಎಂದು ಕುಲಪತಿ ಪ್ರೊ. ಕೆ.ಬಿ.ಗುಡುಸಿ ತಿಳಿಸಿದ್ದಾರೆ.



ನಗರದಲ್ಲಿ ಭಾನುವಾರ ನಡೆದ ಸಿರಿಕಲಾ ಯಕ್ಷೋತ್ಸವದಲ್ಲಿ ಕಲಾವಿದರಾದ ಶ್ರಾವ್ಯ ಮತ್ತು ಲೋಕೇಶ್ ಅವರು 'ಧರ್ಮಾಂಗದ ದಿಗ್ವಿಜಯ' ಪ್ರಸಂಗವನ್ನು ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

'ಪ್ರಕೃತಿಯೊಂದಿಗೆ ಸಂವಹಿಸುವ ಪರಿಸರ ಸಾಹಿತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಸಾಹಿತ್ಯವು ಪರಿಸರ ಮತ್ತು ಜನಸಾಮಾನ್ಯರೊಂದಿಗೆ ಸಂವಹನ ನಡೆಸುತ್ತದೆ ಎಂದು ವಿಜ್ಞಾನ ಲೇಖಕ ನಾಗೇಶ ಹೆಗಡೆ ಹೇಳಿದರು.

ಎಚ್.ಎ. ಪುರುಷೋತ್ತಮ ರಾವ್ ಅವರ 'ಪೆದ್ದನ್ನನ ಇಕಾಲಜಿ ಮತ್ತು ಪರಿಸರ ಲೇಖನಗಳು' ಕೃತಿಯನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕನ್ನಡದಲ್ಲಿ ಕುವೆಂಪು ತನ್ನ ಸೃಜನಶೀಲ ಕೃತಿಗಳಲ್ಲಿ ಪರಿಸರವನ್ನು ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಬಿ.ಜಿ.ಎಲ್. ಸ್ವಾಮಿ, ಪೂರ್ಣಚಂದ್ರ ತೇಜಸ್ವಿ ಮೊದಲಾದವರು ಪರಿಸರಕ್ಕೆ ಸಂಬಂಧಿಸಿದಂತೆ ಗಣನೀಯವಾಗಿ ಬರೆದಿದ್ದಾರೆ ಎಂದು ವಿವರಿಸಿದರು.

ಸಂಜಯ್ ಗುಬ್ಬಿ, ಉಲ್ಲಾಸ್ ಕಾರಂತ, ಕೆ.ಎನ್. ಗಣೇಶಯ್ಯ ಮೊದಲಾದವರು ಪರಿಸರದ ಬಗೆಗೆ ವೈಜ್ಞಾನಿಕ ತಿಳಿವಳಿಕೆಯನ್ನು ಮೂಡಿಸಿದ್ದಾರೆ. ಕಾಡೆಂದರೆ ಹೆಮ್ಮರಗಳು, ಹೆಬ್ಬುಲಿಗಳು, ಆನೆಗಳಷ್ಟೇ ಅಲ್ಲ, ಸಣ್ಣ ಗುಡ್ಡಗಳು, ಅಲ್ಲಿ ವಾಸ ಮಾಡುವ ಮೊಲ, ಜಿಂಕೆ, ಬಾವಲಿಗಳೂ ಸೇರಿವೆ. ಕಿರು ಸಸ್ಯಗಳು, ಚಿಟ್ಟೆಗಳು, ಸಣ್ಣ ತೊರೆಗಳು ಕೂಡ ಅಷ್ಟೇ ಮಹತ್ವದವು. ಮಲೆನಾಡಿನಂತೆ ಕೋಲಾರ ಪ್ರದೇಶದ ಬೆಟ್ಟಗುಡ್ಡಗಳೂ ಮುಖ್ಯವಾದವುಗಳು. ಇಂಥ ಪರಿಸರವನ್ನು ಕುರಿತು ಪುರುಷೋತ್ತಮ ರಾವ್ ಪ್ರಬಂಧದ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಸಿರು ಕಾಳಜಿಯ ವಿಮರ್ಶಕ ಚಂದ್ರಶೇಖರ ನಂಗಲಿ ಕೃತಿ ಪರಿಚಯಿಸಿ, 'ನಿಸರ್ಗದಲ್ಲಿರುವ ಗಿಡಮರಗಳು, ಪ್ರಾಣಿ ಪಕ್ಷಿ ಸರಿಸೃಪಗಳನ್ನು ವೈಜ್ಞಾನಿಕವಾದ ಹೆಸರಿನಿಂದ ಗುರುತಿಸಲಾಗುತ್ತದೆ. ಕಾಡಿನ ನಿವಾಸಿಗಳು, ಹಳ್ಳಿಗಾಡಿನ ಜನರು ಗುರುತಿಸುವ ಪರಿಸರ ಜ್ಞಾನವನ್ನು ನಮ್ಮದಾಗಿಸಿಕೊಳ್ಳಬೇಕಾಗಿದೆ' ಎಂದರು.

'ಗಿರಿಜನರು ಬಳಸುವ ಪೊಂಗುಳಿ ಅಥವಾ ಮಳೆಕೋಗಿಲೆಯನ್ನು ಕುರಿತು ಕುವೆಂಪು ಹೇಳಿದ್ದಾರೆ. ಇದರ ಬಗೆಗೆ ವಿಜ್ಞಾನ ಸಾಹಿತ್ಯದಲ್ಲಿಲ್ಲ, ಆದಿನಿವಾಸಿ ಗಿರಿಜನರು ಪೈಡ್ ಹಾರ್ನ್ ಬಿಲ್ಲನ್ನು ಪೊಂಗುಳಿ ಅಥವಾ ಮಳೆಕೋಗಿಲೆಯೆಂದು ಕರೆಯುತ್ತಾರೆ. ಪರಿಸರದ ಸೂಕ್ಷ್ಮ ಸ್ತರವನ್ನು ಗುರುತಿಸುವುದೇ ಪರಿಸರ ಸಾಹಿತ್ಯದ ಮುಖ್ಯವಾದ ಕೆಲಸವಾಗಿದ್ದು, ಅದು ಈ ಕೃತಿ ಮೂಲಕ ಆಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನುವಾದಕ ಸ.ರಘುನಾಥ್ ಅಧ್ಯಕ್ಷತೆ ವಹಿಸಿದ್ದರು. ಎಚ್.ಎ. ರಾಘವೇಂದ್ರ, ಪ್ರಿಯಾಂಕ, ಕನ್ನಡ ಪ್ರಾಧ್ಯಾಪಕ ರುದ್ರೇಶ್ ಅದರಂಗಿ ಇದ್ದರು.



ಎಚ್.ಎ. ಪುರುಷೋತ್ತಮ ರಾವ್ ಅವರ 'ಪೆದ್ದನ್ನನ ಇಕಾಲಜಿ ಮತ್ತು ಪರಿಸರ ಲೇಖನಗಳು' ಪುಸ್ತಕವನ್ನು ವಿ.ವಿ.ಪುರಂನ ಮಾನಂದಿ ನಂಜುಂಡ ಶೆಟ್ಟಿ ಸಭಾಂಗಣದಲ್ಲಿ ವಿಜ್ಞಾನ ಲೇಖಕ ನಾಗೇಶ ಹೆಗಡೆ ಬಿಡುಗಡೆ ಮಾಡಿದರು. ಕನ್ನಡ ಪ್ರಾಧ್ಯಾಪಕ ರುದ್ರೇಶ್ ಆದರಂಗಿ, ಅನುವಾದಕ ಸ.ರಘುನಾಥ್, ವಿಮರ್ಶಕ ಚಂದ್ರಶೇಖರ ನಂಗಲಿ, ಕೃತಿಕಾರ ಎಚ್.ಎ. ಪುರುಷೋತ್ತಮ ರಾವ್, ಲಕ್ಷ್ಮೀ ಪುರುಷೋತ್ತಮ ರಾವ್ ಇದ್ದರು

ಬಸ್ ಮಾಲೀಕ ಆತ್ಮಹತ್ಯೆ

ಮಂಗಳೂರು: ಖಾಸಗಿ ಬಸ್ ಮಾಲೀಕ ಮಹೇಶ್ ಶೇಖ (42) ಅವರು ನಗರದ ಕದ್ರಿ ಕಂಬಳ ಬಳಿಯ ಮೌರಿಷ್ಕಾ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ನಗರ ಪೂರ್ವ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

'ಮಹೇಶ್ ಅವರ ಮೃತದೇಹವು, ಅವರು ವಾಸವಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯದ ಕೊಠಡಿಯ ಸೀಲಿಂಗ್ ಫ್ಯಾನ್‌ಗೆ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಭಾನುವಾರ ಸಂಜೆ 6.30ರ ಸುಮಾರಿಗೆ ಪತ್ತೆಯಾಗಿದೆ. ಮೃತದೇಹವನ್ನು ಅವರ ಪತ್ನಿ ನವ್ಯಾ ಅವರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಆರ್ಥಿಕ ಮುಗ್ಗಟ್ಟು ಅವರ ಆತ್ಮಹತ್ಯೆಗೆ ಕಾರಣವಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈತ್ರಿ ಮನವರಿಕೆ: ಗೊಂದಲಕ್ಕೆ ಜೆಡಿಎಸ್ ತೆರೆ

ಅಸಮಾಧಾನ ಶಮನ: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಶಾಸಕ ಶರಣಗೌಡ ಕಂದಕೂರ ಗೈರು

ಪ್ರಜಾವಾಣಿ ವಾರ್ತೆ

ರಾಮನಗರ: ಬಿಜೆಪಿ ಜತೆ ಮೈತ್ರಿಗೆ ನಿರ್ಧರಿಸಿದ ನಂತರ ಮೊದಲ ಬಾರಿಗೆ ಪಕ್ಷದ ಶಾಸಕರು, ಮುಖಂಡರು ಹಾಗೂ ಪದಾಧಿಕಾರಿಗಳೊಂದಿಗೆ ಭಾನುವಾರ ದಿನವಿಡೀ ಸಭೆ ನಡೆಸಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹಾಗೂ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಪಕ್ಷದೊಳಗೆ ಹೊಗೆಯಾಡುತ್ತಿದ್ದ ಅಸಮಾಧಾನ ಹಾಗೂ ಗೊಂದಲಕ್ಕೆ ತೆರೆ ಎಳೆದರು.

ಬಿಡದಿ ಬಳಿಯ ಕೇತಿಗಾನಹಳ್ಳಿಯ ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಅನಿವಾರ್ಯತೆ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಯಿತು. ಅದರ ಜೊತೆಗೆ 'ತಾಯಿ ಸಮಾನವಾದ ಪಕ್ಷಕ್ಕೆ ಯಾವುದೇ ಕಾರಣಕ್ಕೂ ದ್ರೋಹ ಬಗೆಯುವುದಿಲ್ಲ' ಎಂದು ಸಾಮೂಹಿಕವಾಗಿ ಪ್ರಮಾಣ ಮಾಡಲಾಯಿತು.



ಕೇತಿಗಾನಹಳ್ಳಿಯಲ್ಲಿರುವ ಎಚ್.ಡಿ.ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ನಡೆದ ಜೆಡಿಎಸ್ ಸಭೆಯಲ್ಲಿ 'ತಾಯಿ ಸಮಾನವಾದ ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ' ಎಂದು ಮುಖಂಡರು, ಪದಾಧಿಕಾರಿಗಳು ಪ್ರಮಾಣ ಮಾಡಿದರು

ಮೈತ್ರಿ ಬಳಿಕ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಈ ಸಭೆಯಿಂದಲೂ ದೂರ ಉಳಿದರು. ಅವರ ಅನುಪಸ್ಥಿತಿ ಸಭೆಯಲ್ಲಿ ಎದ್ದು ಕಾಣುತ್ತಿತ್ತು. ಜೆಡಿಎಸ್‌ನ 19 ಶಾಸಕರ ಪೈಕಿ ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಸಹ ಸಭೆಯತ್ತ ಸುಳಿಯಲಿಲ್ಲ. ಹನೂರು ಶಾಸಕ ಎಂ.ಆರ್. ಮಂಜುನಾಥ್ ವೈಯಕ್ತಿಕ ಕಾರಣಗಳಿಂದ ಬಂದಿರಲಿಲ್ಲ.

'ಮೈತ್ರಿ ವಿಚಾರದಲ್ಲಿ ಯಾರನ್ನೂ ಕತ್ತಲೆಯಲ್ಲಿ ಇಟ್ಟಿಲ್ಲ. ಇಡುವ ಅಗತ್ಯವೂ ಇಲ್ಲ. ಪಕ್ಷದ ತತ್ವ, ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ದೇವೇಗೌಡ ಮತ್ತು ಕುಮಾರಸ್ವಾಮಿ ಸ್ಪಷ್ಟನೆ ನೀಡುವ ಮೂಲಕ ಸಿ.ಎಂ. ಇಬ್ರಾಹಿಂ ಅವರ ಮುನಿಸು ಮತ್ತು ಪಕ್ಷದೊಳಗಿನ ಗೊಂದಲಗಳಿಗೆ ಪರೋಕ್ಷವಾಗಿ ಪ್ರತಿಕ್ರಿಯಿಸಿದರು.

'ಬಿಜೆಪಿ ಜತೆ ಮೈತ್ರಿ ಕುರಿತಂತೆ ದೇವೇಗೌಡ ಮತ್ತು ಕುಮಾರಸ್ವಾಮಿ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧ. ಎಲ್ಲರೂ ಒಗ್ಗಟ್ಟಾಗಿ ಮುಂದಿನ ಚುನಾವಣೆ ಎದುರಿಸುತ್ತೇವೆ' ಎಂದು ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರು ಒಕ್ಕೊರಲ ನಿರ್ಧಾರ ಪ್ರಕಟಿಸಿದರು.

'ಬಿಜೆಪಿ ಜತೆ ಮೈತ್ರಿಗೆ ಇಂದಿನ ಸಭೆಯಲ್ಲಿ ಸರ್ವಾನುಮತದ ಒಪ್ಪಿಗೆ ದೊರೆತಿದೆ. ಮುಂದಿನ ಒಂದು ತಿಂಗಳಲ್ಲಿ 31 ಜಿಲ್ಲೆಗಳಲ್ಲೂ ಸಭೆ ನಡೆಸಿ ಎಲ್ಲಾ ಸಮಸ್ಯೆ, ಗೊಂದಲಗಳನ್ನೂ ಬಗೆಹರಿಸಲಾಗುವುದು. ಮೈತ್ರಿಯಿಂದ ನಮ್ಮ ಅಭ್ಯರ್ಥಿಗಳಿಗೆ ಟಿಕೆಟ್ ಯಾವುದೇ ತೊಂದರೆ ಆಗುವುದಿಲ್ಲ. ಆ ಬಗ್ಗೆ ನಾನು ಭರವಸೆ ಕೊಡುತ್ತೇನೆ' ಎಂದು ಕುಮಾರಸ್ವಾಮಿ ಅಭಯ ನೀಡಿದರು.

ರಾಜ್ಯದ ಹಿತ ಅಡಗಿದೆ: 'ಮೈತ್ರಿಯಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಈ ಮೈತ್ರಿಯಲ್ಲಿ ರಾಜ್ಯದ ಹಿತ ಅಡಗಿದೆ. ರಾಜ್ಯ ಎದುರಿಸುತ್ತಿರುವ ಅನೇಕ ಜ್ವಲಂತ ಸಮಸ್ಯೆಗಳಿಗೆ ಈ ಮೈತ್ರಿ ಮೂಲಕ ಪರಿಹಾರ ಕಂಡುಕೊಳ್ಳಲಾಗುವುದು. ಅದಕ್ಕಾಗಿಯೇ ಈ ನಿರ್ಧಾರ ಕೈಗೊಂಡಿದ್ದೇನೆ. ಈ ಮೈತ್ರಿ ನನ್ನ ಸ್ವಾರ್ಥಕ್ಕಲ್ಲ, ನಾಡಿನ ಹಿತಕ್ಕಾಗಿ. ಮೈತ್ರಿಯಿಂದ ಅಧಿಕಾರಕ್ಕೆ ಬರುವುದು ನನ್ನ ಉದ್ದೇಶವಲ್ಲ' ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

'ಮತಕ್ಕಾಗಿ ಯಾವುದೇ ಒಂದು ಸಮುದಾಯವನ್ನು ಓಲೈಕೆ ಮಾಡಲಾರೆ. ಮುಸ್ಲಿಮರಿಗೆ ನಾನು ಅನ್ಯಾಯ ಮಾಡಿಲ್ಲ. ಯಾವ ಸಮುದಾಯವನ್ನು ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಂಡಿಲ್ಲ. ನನ್ನ ಬದ್ಧತೆ ಬಗ್ಗೆ ಆ ಸಮುದಾಯದವರಿಗೆ ಗೊತ್ತಿದೆ. ಕಾಂಗ್ರೆಸ್ ಪಕ್ಷದ ರೀತಿ ನಾನು ಪೊಳ್ಳು ಭರವಸೆ ನೀಡಲಾರೆ' ಎಂದರು.

'ರಾಜಕೀಯವಾಗಿ ನನ್ನ ಜತೆ ಇದ್ದ ಅನೇಕರು ಐಶ್ವರ್ಯ ಹುಡುಕಿಕೊಂಡು ಎಲ್ಲೆಲ್ಲೋ ಹೋದರು. ನಾನು ಇಲ್ಲಿಯೇ ಇದ್ದೇನೆ. ಇಳಿ ವಯಸ್ಸಿನಲ್ಲಿಯೂ ಪಕ್ಷವನ್ನು ಕಟ್ಟುತ್ತಿದ್ದೇನೆ. ನಿಮ್ಮನ್ನು ನಂಬಿ ಒಳ್ಳೆಯ ನಿರ್ಧಾರ ಕೈಗೊಂಡಿದ್ದೇನೆ. ರಾಜಕೀಯದಲ್ಲಿ ಹೊಸ ಬೆಳವಣಿಗೆಯಾಗುತ್ತಿದೆ' ಎಂದು ಎಚ್.ಡಿ. ದೇವೇಗೌಡ ಸಮರ್ಥಿಸಿಕೊಂಡರು.

ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದಿದ್ದ ಪಕ್ಷದ ಶಾಸಕರು, ಮುಖಂಡರು, ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಂಜೆಯವರೆಗೂ ನಡೆದ ಸಭೆಗೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ಇರಲಿಲ್ಲ.

ಹಿಂದುತ್ವಕ್ಕೆ ಶಿಫ್ಟ್ ಆಗಲ್ಲ: ಫಾರೂಕ್

'ಯಾವುದೇ ಕಾರಣಕ್ಕೂ ನಾವು ಹಿಂದುತ್ವದ ಅಜೆಂಡಾಕ್ಕೆ ಶಿಫ್ಟ್ ಆಗುವುದಿಲ್ಲ. ಅಲ್ಪಸಂಖ್ಯಾತರ ಭಾವನೆಗಳಿಗೆ ಧಕ್ಕೆಯಾಗಲು ಬಿಡುವುದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಎಂ. ಫಾರೂಕ್ ಭರವಸೆ ನೀಡಿದರು.

'ಹಿಂದೆಯೂ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು 20 ತಿಂಗಳು ಸರ್ಕಾರ ರಚಿಸಿದಾಗ ಅಲ್ಪಸಂಖ್ಯಾತರಿಗೆ ಏನಾದರೂ ತೊಂದರೆಯಾಗಿತ್ತಾ' ಎಂದು ಪ್ರಶ್ನಿಸಿದರು. 'ಜೆಡಿಎಸ್‌ನಿಂದ ಅಲ್ಪಸಂಖ್ಯಾತರು ದೂರವಾಗುತ್ತಿಲ್ಲ. ನಮ್ಮ ಹಿತರಕ್ಷಣೆಗೆ ಪಕ್ಷ ಬದ್ಧವಾಗಿದೆ.ನಮಗೆ ಪಕ್ಷ ಸಾಕಷ್ಟು ನೀಡಿದೆ' ಎಂದರು.

'ಬಿಜೆಪಿ ಜೊತೆ ಯಾವ ಪಕ್ಷ ತಾನೇ ಮೈತ್ರಿ ಮಾಡಿಕೊಂಡಿಲ್ಲ? ಬಿಎಸ್‌ಪಿ, ಶಿವಸೇನೆ, ಎನ್‌ಸಿಪಿ, ಜೆಡಿಯು ಕೂಡಾ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿಲ್ಲವೇ? ಆಗೆಲ್ಲಾ, ನಮ್ಮ ಸಮುದಾಯದ ಹಿತಾಸಕ್ತಿಯನ್ನು ಯಾರಾದರೂ ಬಲಿ ಕೊಟ್ಟರೇ?' ಎಂದರು.

ಇಬ್ರಾಹಿಂ ಬಗ್ಗೆ ಲಘುವಾಗಿ ಮಾತನಾಡಿಲ್ಲ. ಭದ್ರಾವತಿಯಿಂದ ಅವರನ್ನು ಕರೆತಂದು ಯುವ ಜನತಾದಳ ಅಧ್ಯಕ್ಷರನ್ನಾಗಿ ಮಾಡಿದೆ. ಈ ಸಭೆಗೆ ಅವರನ್ನು ಕರೆತರಲು ಬಹಳ ಪ್ರಯತ್ನಪಟ್ಟರೂ ಆಗಲಿಲ್ಲ
ಎಚ್.ಡಿ. ದೇವೇಗೌಡ, ಜೆಡಿಎಸ್ ವರಿಷ್ಠ

ಮೈತ್ರಿ ಕುರಿತು ನಮ್ಮ ಪಕ್ಷದಲ್ಲಿ ಅಸಮಾಧಾನ ಇಲ್ಲ. ಹಿಂದೆ ಕಾಂಗ್ರೆಸ್ ಜೊತೆ ಆಕಸ್ಮಿಕವಾಗಿ ಮೈತ್ರಿ ಆಗಿತ್ತು. ಬದಲಾದ ಸ್ಥಿತಿಯಲ್ಲಿ ಬಿಜೆಪಿ ಜೊತೆ ಮೈತ್ರಿ ಅನಿವಾರ್ಯವಾಗಿದೆ
ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ


ಹಿಂದೆ ನಮ್ಮ ಕ್ಷೇತ್ರದಲ್ಲಿ ಬಿಜೆಪಿ ಜತೆ ನೇರಾನೇರ ರಾಜಕಾರಣ ಮಾಡಿದ್ದೆವು. ಆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ದೇವೇಗೌಡರು ನಿರ್ಧಾರಕ್ಕೆ ಬದ್ಧ
ಡಿ.ಸಿ. ಗೌರಿಶಂಕರ್, ಮಾಜಿ ಶಾಸಕ, ತುಮಕೂರು ಗ್ರಾಮಾಂತರ

ಕಾಂಗ್ರೆಸ್ ನಿಜವಾದ ಮುಸ್ಲಿಂ ವಿರೋಧಿ. ಅಲ್ಪಸಂಖ್ಯಾತರು ಇಂದು ಒಳ್ಳೆಯ ಸರ್ಕಾರಿ ಹುದ್ದೆಗಳಲ್ಲಿ ಇದ್ದರೆ ಅದಕ್ಕೆ ದೇವೇಗೌಡರೇ ಕಾರಣ ಎಂಬುದನ್ನು ನಮ್ಮವರು ಅರಿಯಬೇಕು
ರಫೀಕ್, ಜೆಡಿಎಸ್ ಉಪಾಧ್ಯಕ್ಷ

ಸುದ್ದಿ 2 ನಿಮಿಷ

ಸಂಕಷ್ಟ ಸೂತ್ರದಡಿ ನಿರ್ಧಾರ ಕೈಗೊಳ್ಳಲಿ: ಎಸ್.ಎಂ.ಕೃಷ್ಣ

ಬೆಂಗಳೂರು: 'ವಾಡಿಕೆಯಷ್ಟು ಮಳೆ ಸುರಿಯದ ವರ್ಷಗಳಲ್ಲಿ ಕಾವೇರಿ ವಿವಾದ ಸದ್ದು ಮಾಡುತ್ತದೆ. ಕಾವೇರಿ ನದಿ ನೀರು ಬಳಸುವ ರಾಜ್ಯಗಳ ಮುಖ್ಯಮಂತ್ರಿಗಳು ಸಂಕಷ್ಟ ಸೂತ್ರದ ಅಡಿ ಸಮಾಲೋಚನೆ ನಡೆಸಿ, ಉತ್ತಮ ನಿರ್ಧಾರ ಕೈಗೊಳ್ಳಬೇಕು' ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸಲಹೆ ನೀಡಿದರು.



ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೂ ಕಾವೇರಿ ವಿವಾದ ತಲೆದೋರಿತ್ತು. ಅಂದು ಪ್ರಧಾನಿಯಾಗಿದ್ದ ವಾಜಪೇಯಿ ಅವರು ಸಂಧಾನ ಸಭೆ ಕರೆದಿದ್ದರು. ಸಭೆ ಫಲ ನೀಡಲಿಲ್ಲ. ಕೊನೆಯಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಬೇಕಾಯಿತು' ಎಂದು ನೆನಪಿಸಿಕೊಂಡರು.

'ಕಾವೇರಿ ವಿವಾದ ಸಂಬಂಧ ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿಗಳ ಸಲಹೆ ಪಡೆದುಕೊಂಡಿರುವುದು ಉತ್ತಮ ನಡೆ' ಎಂದೂ ಹೇಳಿದರು.

ಹಾರಂಗಿ ಒಳ ಹರಿವು ಹೆಚ್ಚಳ

ಮಡಿಕೇರಿ: ಕೊಡಗು ಜಿಲ್ಲೆಯ ಘಟ್ಟ ಪ್ರದೇಶಗಳಲ್ಲಿ ಮಳೆ ಮುಂದುವರಿದಿದ್ದು, ಇಲ್ಲಿನ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 3ಸಾವಿರ ಕ್ಯೂಸೆಕ್ ದಾಟಿದೆ. ನಾಪೋಕ್ಲು ಸಮೀಪದ ಬಲಮುರಿ ಗ್ರಾಮದ ಕಿರುಸೇತುವೆ ಭಾನುವಾರ ಮುಳುಗಡೆಯಾಗಿದೆ. ದೊಡ್ಡ ಸೇತುವೆ ಇರುವುದರಿಂದ ಸಂಚಾರಕ್ಕೆ ಯಾವುದೇ ತೊಂದರೆಯಾಗಿಲ್ಲ.

ಪೊನ್ನಂಪೇಟೆ ತಾಲ್ಲೂಕಿನ ಮತ್ತೂರು ಗ್ರಾಮದಲ್ಲಿ ಮಳೆಯಿಂದ ಅಡಿಕೆ ಮರ ಉರುಳಿ ಬಿದ್ದು ವಿದ್ಯುತ್ ತಂತಿಗಳು ತುಂಡಾಗಿ ಐದು ಹಸುಗಳು ಮೃತಪಟ್ಟಿವೆ.

ಹಾರಂಗಿ ಜಲಾಶಯಕ್ಕೆ ಭಾನುವಾರ 3,156 ಕ್ಯೂಸೆಕ್ ಒಳ ಹರಿವಿತ್ತು. ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ ಹಾಗೂ ಘಟ್ಟ ಪ್ರದೇಶಗಳಲ್ಲಿ ಶನಿವಾರ ರಾತ್ರಿಯಿಡೀ ಭಾರಿ ಮಳೆ ಸುರಿದಿದ್ದು, ಸರಾಸರಿ 11 ಸೆಂ.ಮೀ.ನಷ್ಟು ಮಳೆ ದಾಖಲಾಗಿದೆ. ಗೋಣಿಕೊಪ್ಪಲು ಭಾಗದಲ್ಲೂ ಭಾರಿ ಮಳೆಯಾಗಿದೆ. ಮಡಿಕೇರಿ ನಗರದಲ್ಲೂ ಮಳೆ ಮುಂದುವರಿದಿದೆ.

ಭಾರಿ ಮಳೆ: ನಾಳೆಯಿಂದ ಕುಮಾರ ಪರ್ವತ ಚಾರಣ ಸ್ಥಗಿತ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಇಲ್ಲಿನ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಹಿಂಭಾಗದಲ್ಲಿರುವ ಕುಮಾರಪರ್ವತದ ಚಾರಣಕ್ಕೆ ಅ.3ರಿಂದ ನಿರ್ಬಂಧ ವಿಧಿಸಲಾಗಿದೆ.

ಹವಾಮಾನ ಇಲಾಖೆಯು ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಿಸಿದ್ದು, ಈ ಭಾಗದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಮುಂದಿನ ಆದೇಶದವರೆಗೆ ಚಾರಣ ನಿಷೇಧಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಮೇ ತಿಂಗಳಿನಿಂದ ಸೆ. 29ರವರೆಗೆ ಅರಣ್ಯ ಇಲಾಖೆಯು ಕುಮಾರಪರ್ವತ ಚಾರಣಕ್ಕೆ ನಿರ್ಬಂಧ ವಿಧಿಸಿತ್ತು. ಶನಿವಾರದಿಂದ ನಿರ್ಬಂಧ ತೆರವುಗೊಳಿಸಿ ಚಾರಣಕ್ಕೆ ಅವಕಾಶ ನೀಡಿದ್ದರಿಂದ ಶನಿವಾರ, ಭಾನುವಾರ ಭಾರಿ ಸಂಖ್ಯೆಯಲ್ಲಿ ಚಾರಣಿಗರು ಬಂದಿದ್ದರು. ಭಾರಿ ಮಳೆಯಿಂದಾಗ ಚಾರಣ ಕಷ್ಟವಾಗಿತ್ತು.

'ಹಿಂದುಳಿದವರು, ದಲಿತರಿಗೆ ಅನ್ಯಾಯ'

ಬೆಂಗಳೂರು: 'ಚುನಾವಣೆಯಲ್ಲಿ 'ಅಹಿಂದ' ಹೆಸರಿನಲ್ಲಿ ಮತ ಕೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಕ್ಕೇರಿದ ಬಳಿಕ ಅಲ್ಪಸಂಖ್ಯಾತರ ಓಲೈಕೆಗೆ ಸೀಮಿತವಾಗಿದ್ದಾರೆ. ಅಲ್ಪಸಂಖ್ಯಾತರಿಗೆ ಬೆಣ್ಣೆ, ಹಿಂದುಳಿದವರು ಮತ್ತು ದಲಿತರಿಗೆ ಸುಣ್ಣ ಎಂಬ ನೀತಿ ಅನುಸರಿಸುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕ ವಾಗ್ದಾಳಿ ನಡೆಸಿದೆ.

ಪಕ್ಷದ ರಾಜ್ಯ ಘಟಕದ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಮುಖ್ಯಮಂತ್ರಿ ವಿರುದ್ಧ ಭಾನುವಾರ ಟೀಕಾಪ್ರಹಾರ ನಡೆಸಿದ್ದು, 'ಹಿಂದುಳಿದ ವರ್ಗಗಳು, ದಲಿತರಿಗೆ ನಿಗಮಗಳನ್ನು ಸ್ಥಾಪಿಸಿ, ಕೋಟ್ಯಂತರ ರೂಪಾಯಿ ಅನುದಾನ ನೀಡುವುದಾಗಿ ಚುನಾವಣೆಯಲ್ಲಿ ಭರವಸೆ ನೀಡಿದ್ದರು. ಸಿದ್ದರಾಮಯ್ಯ ಅವರು ಕುರ್ಚಿ ಏರಿದ ನಂತರ ಹಿಂದುಳಿದವರು, ದಲಿತರಿಗೆ ನಿಗಮವನ್ನೂ ಸ್ಥಾಪಿಸಿಲ್ಲ, ಅನುದಾನವನ್ನೂ ನೀಡಿಲ್ಲ' ಎಂದು ದೂರಿದೆ.

ನಿರ್ಲಕ್ಷ್ಯ ಆರೋಪದಡಿ ಎಫ್‌ಐಆರ್: ಆರೋಪಿ ಬಂಧನ, ಬಿಡುಗಡೆ

ನಟ ನಾಗಭೂಷಣ್ ಕಾರು ಗುದ್ದಿ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ



ನಾಗಭೂಷಣ್



ಎಸ್. ಪ್ರೇಮಾ

ಬೆಂಗಳೂರು: ಉತ್ತರಹಳ್ಳಿಯ ವಸಂತಪುರ ಮುಖ್ಯರಸ್ತೆಯಲ್ಲಿ ನಟ ನಾಗಭೂಷಣ್ ಅವರು ಚಲಾಯಿಸುತ್ತಿದ್ದ ಕಾರು ಗುದ್ದಿ ಪಾದಚಾರಿ ಎಸ್. ಪ್ರೇಮಾ (48) ಮೃತಪಟ್ಟಿದ್ದಾರೆ. ನಿರ್ಲಕ್ಷ್ಯದ ಚಾಲನೆ ಆರೋಪದಡಿ ನಾಗಭೂಷಣ್ ಅವರನ್ನು ಬಂಧಿಸಿ ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ.

ವಸಂತಪುರ ಮುಖ್ಯರಸ್ತೆಯ ಸುಪ್ರಭಾತ್ ಶ್ರೀಮ್ ಬ್ರೀಜೆ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ಪ್ರೇಮಾ ಹಾಗೂ ಪತಿ ಬಿ. ಕೃಷ್ಣ (58) ಅವರು ಶನಿವಾರ ರಾತ್ರಿ 9.45ರ ಸುಮಾರಿಗೆ ವಾಯುವಿಹಾರಕ್ಕೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಕೃಷ್ಣ ಅವರೂ ಗಾಯಗೊಂಡಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ತಿಳಿಸಿದರು.



ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಜಖಂಗೊಂಡ ಕಾರು

'ನಿರ್ಲಕ್ಷ್ಯ ಹಾಗೂ ಅತೀವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದಾಗಿ ಸ್ಥಳೀಯರು ಹೇಳಿಕೆ ನೀಡಿದ್ದಾರೆ. ಪ್ರೇಮಾ ಅವರ ಮಗ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಕಾರು ಜಪ್ತಿ ಮಾಡಲಾಗಿದೆ' ಎಂದರು.

ಸ್ನೇಹಿತನ ಮನೆಯಿಂದ ಹೊರಟಿದ್ದ ನಟ: 'ಜೆ.ಪಿ.ನಗರ ನಿವಾಸಿಯಾದ ಎನ್.ಎಸ್. ನಾಗಭೂಷಣ್, ಸ್ನೇಹಿತರನ್ನು ಭೇಟಿಯಾಗಲು ರಾಜರಾಜೇಶ್ವರಿನಗರಕ್ಕೆ ಹೋಗಿದ್ದರು. ಅಲ್ಲಿಂದ ತಮ್ಮ ಮನೆಯತ್ತ ಕಿಯಾ ಕಾರಿನಲ್ಲಿ ಹೋಗುತ್ತಿದ್ದಾಗ ಘಟನೆ ನಡೆದಿದೆ. ವಾಯುವಿಹಾರ ಮಾಡುತ್ತಿದ್ದ ಪ್ರೇಮಾ ಹಾಗೂ ಕೃಷ್ಣ ಅವರಿಗೆ ಗುದ್ದಿದ ನಂತರ ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದಿತ್ತು. ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ' ಎಂದರು.

ನಿರ್ಲಕ್ಷ್ಯದಿಂದ ಸಾವು (ಐಪಿಸಿ 304-ಎ) ಆರೋಪದಡಿ ನಾಗಭೂಷಣ್ ವಿರುದ್ಧ ಸದ್ಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆಯಲ್ಲಿ ಬೇರೆ ಅಂಶಗಳು ಪತ್ತೆಯಾದರೆ ಹೊಸ ಸೆಕ್ಷನ್ ಸೇರ್ಪಡೆ ಮಾಡಲಾಗುವುದು
ಶಿವಪ್ರಕಾಶ್ ದೇವರಾಜ್, ಸಂಚಾರ ವಿಭಾಗದ ಡಿಸಿಪಿ

'ತಮ್ಮ ಗುರುತು ಸಿಗಬಾರದೆಂದು ನಾಗಭೂಷಣ್ ಕಪ್ಪು ಜರ್ಕಿನ್ ಹಾಗೂ ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದರು. ಅವರೇ ಸ್ಥಳೀಯರ ಜೊತೆ ಸೇರಿ ಗಾಯಾಳುಗಳನ್ನು ಎಬ್ಬಿಸಿದ್ದರು. ನಂತರ, ಪ್ರೇಮಾ ಹಾಗೂ ಕೃಷ್ಣ ಅವರನ್ನು ಆಟೊದಲ್ಲಿ ಆಸ್ಪತ್ರೆಗೆ ಕರೆದೊಯ್ದಿದ್ದರು' ಎಂದೂ ಪೊಲೀಸರು ಹೇಳಿದರು.

'ತಲೆ ಹಾಗೂ ಮುಖಕ್ಕೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಪ್ರೇಮಾ ಮಾರ್ಗ ಮಧ್ಯೆಯೇ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಆಸ್ಪತ್ರೆಯಲ್ಲೇ ನಾಗಭೂಷಣ್ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತರಲಾಗಿತ್ತು. ಮದ್ಯ ಕುಡಿದು ಅಪಘಾತವನ್ನುಂಟು ಮಾಡಿರುವ ಬಗ್ಗೆ ಮಾಹಿತಿ ಇತ್ತು. ನಾಗಭೂಷಣ್ ಅವರನ್ನು ರಾತ್ರಿಯೇ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಈ ಕುರಿತು ವರದಿ ಬರಬೇಕಿದೆ' ಎಂದರು.

ನಟನ ಹೇಳಿಕೆ ದಾಖಲು: 'ಸ್ನೇಹಿತರನ್ನು ಭೇಟಿಯಾಗಿ ಕಾರಿನಲ್ಲಿ ಮನೆಗೆ ಹೊರಟಿದ್ದೆ. ದಂಪತಿ ಏಕಾಏಕಿ ರಸ್ತೆಗೆ ಇಳಿದಿದ್ದರು.ಅದನ್ನುಗಮನಿಸದಿದ್ದರಿಂದಕಾರು ಗುದ್ದಿತು. ಗಾಬರಿಯಾಗಿ ಕಾರನ್ನು ಪಕ್ಕದ ರಸ್ತೆಯತ್ತ ಚಲಾಯಿಸಿದ್ದೆ. ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಕಾರು ನಿಂತುಕೊಂಡಿತ್ತು. ನಂತರ, ಗಾಯಾಳುಗಳನ್ನು ನಾನೇ ಜನರ ಜೊತೆಸೇರಿ ಆಸ್ಪತ್ರೆಗೆ ಕರೆದೊಯ್ದೆ' ಎಂದು ನಾಗಭೂಷಣ್ ಹೇಳಿಕೆ ನೀಡಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

'ಇಕ್ಕಟ್' 'ಡೇರ್ ಡೇವಿಲ್ ಮುಸ್ತಫಾ', 'ಕೌಸಲ್ಯಾ ಸುಪ್ರಜಾ ರಾಮ', 'ಪೆಟ್ರೋಮ್ಯಾಕ್ಸ್', 'ಬಡವ ರಾಸ್ಕಲ್' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಾಗಭೂಷಣ್ ನಟಿಸಿದ್ದಾರೆ.

'ಜಾತಿ ಆಧಾರದಲ್ಲಿ ಹುದ್ದೆ ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಆಧಾರದಲ್ಲಿ ಅಧಿಕಾರಿಗಳಿಗೆ ಹುದ್ದೆ ಕಲ್ಪಿಸಲು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಈಗಿನ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿಪಾಡು ಆಗಿದೆ' ಎಂದು ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರ ಎಲ್ಲ ವರ್ಗವನ್ನೂ ಗಮನಿಸಬೇಕಿದೆ. ಮುಖ್ಯಮಂತ್ರಿ ಎಲ್ಲರನ್ನೂ ಸಮತೋಲನವಾಗಿ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ' ಎಂದರು.

'ಶಾಮನೂರು ಶಿವಶಂಕರಪ್ಪ ಅವರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಹೌದು. ಅವರಿಗೆ ಆ ಸಮಾಜಕ್ಕೆ ಎಷ್ಟು ಸ್ಥಾನ ಸಿಕ್ಕಿದೆ ಎಂಬ ಮಾಹಿತಿ ಇರಬಹುದು. ಅಧಿಕಾರಿಗಳೂ ಸಹಜವಾಗಿ ತಮಗೆ ಉತ್ತಮ ಹುದ್ದೆ ಸಿಗಬೇಕು ಎಂದು ನಿರೀಕ್ಷಿಸುತ್ತಾರೆ. ಆದರೆ, ಜಾತಿ ಆಧಾರದಲ್ಲಿ ಹುದ್ದೆ ಕಲ್ಪಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ಲಿಂಗಾಯತ ಸಮಾಜದ ಅಧ್ಯಕ್ಷರಾಗಿರುವ ಕಾರಣಕ್ಕೆ ಅವರ ಮೇಲೂ ಒತ್ತಡ ಇರುತ್ತದೆ. ಕೆಲವು ಅಧಿಕಾರಿಗಳು ಸಚಿವರ ಬಳಿಯೂ ಹೋಗಿ ಮನವಿ ಮಾಡಿದ್ದರು. ಈ ರೀತಿ ಕೇಳುವುದರಲ್ಲಿ ತಪ್ಪಿಲ್ಲ' ಎಂದರು.

'ಮುಖ್ಯಮಂತ್ರಿಗೆ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ಜವಾಬ್ದಾರಿ ಇದೆ' ಎಂದರು.

'ನಮ್ಮದು ಜಾತ್ಯತೀತ ಸರ್ಕಾರ'



ಸಿದ್ದರಾಮಯ್ಯ

ಬೆಂಗಳೂರು: 'ನಮ್ಮದು ಜಾತ್ಯತೀತ ಸರ್ಕಾರ. ಎಲ್ಲ ಜಾತಿಗಳನ್ನೂ ಸಮಾನವಾಗಿ ಕಾಣುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. 'ಈ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ' ಎಂಬ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಆಗ್ರಹಕ್ಕೆ ಮುಖ್ಯಮಂತ್ರಿ ಈ ರೀತಿ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಅನ್ನಭಾಗ್ಯ, ಶಕ್ತಿ, ಗೃಹಜ್ಯೋತಿ, ಗೃಹ ಲಕ್ಷ್ಮಿ ಯೋಜನೆಗಳ ಸೌಲಭ್ಯಗಳನ್ನು ಜಾತಿ ನೋಡಿ ಕೊಟ್ಟಿಲ್ಲ' ಎಂದರು.

'ಆರು ತಿಂಗಳಲ್ಲಿ ಈ ಸರ್ಕಾರ ಪತನವಾಗಲಿದೆ' ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಕುಮಾರಸ್ವಾಮಿ ಹತಾಶರಾಗಿದ್ದಾರೆ. ಸಮ್ಮಿಶ್ರ ಸರ್ಕಾರ ಬರುತ್ತದೆ. ನಾನೇ ಮುಖ್ಯಮಂತ್ರಿಯಾಗುತ್ತೇನೆ ಎಂದು ಅವರು ಆಸೆ ಇಟ್ಟುಕೊಂಡಿದ್ದರು. ಈಗ ಭ್ರಮನಿರಸನಗೊಂಡಿದ್ದಾರೆ. ಹೀಗಾಗಿ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ' ಎಂದು ಹೇಳಿದರು.

ಶಾಮನೂರಿಗೆ ಬಿಎಸ್‌ವೈ ಬೆಂಬಲ

ಬೆಂಗಳೂರು: 'ರಾಜ್ಯ ಸರ್ಕಾರದಲ್ಲಿ ವೀರಶೈವ, ಲಿಂಗಾಯತ ಅಧಿಕಾರಿಗಳನ್ನು ಕಡೆಗಣಿಸಲಾಗುತ್ತಿದೆ ಎಂಬ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಗೆ ನನ್ನ ಬೆಂಬಲವಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಸರ್ಕಾರಿ ಅಧಿಕಾರಿಗಳಲ್ಲಿ ವೀರಶೈವ, ಲಿಂಗಾಯತ ಸಮುದಾಯದವರು ದೊಡ್ಡ ಪ್ರಮಾಣದಲ್ಲಿದ್ದಾರೆ. ಆದರೆ, ಸಮುದಾಯವರನ್ನು ಕಡೆಗಣಿಸಲಾಗುತ್ತಿದೆ. ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಶಾಮನೂರು ಶಿವಶಂಕರಪ್ಪ ಅವರು ಕಳಕಳಿಯಿಂದ ಮಾತನಾಡಿದ್ದಾರೆ' ಎಂದರು.

ಈದ್ ಮಿಲಾದ್ ಮೆರವಣಿಗೆ ವೇಳೆ ಹಿಂಸೆ

ಒಂದನೇ ಪುಟದಿಂದ...

ಕ್ಷಿಪ್ರ ಕಾರ್ಯಾಚರಣೆ ಪಡೆ (ಆರ್‌ಎಎಫ್) ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಲಾಗಿದ್ದು, ಹೆಚ್ಚಿನ ಸಂಖ್ಯೆಯ ಪೊಲೀಸರನ್ನೂ ನಿಯೋಜಿಸಲಾಗಿದೆ.

ಈದ್ ಮಿಲಾದ್ ಅಂಗವಾಗಿ ರಾಗಿಗುಡ್ಡದಲ್ಲಿ ಹಾಕಿದ್ದ ಕಟೌಟ್‌ನ ಕೆಲವು ಭಾಗಕ್ಕೆ ಬಿಳಿ ಬಣ್ಣ ಬಳಿಯಲಾಗಿದೆ ಎಂದು ಆರೋಪಿಸಿ ಗುಂಪೊಂದು ಬೆಳಿಗ್ಗೆ ಪ್ರತಿಭಟನೆ ನಡೆಸಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್ ಕುಮಾರ್ ಸ್ಥಳಕ್ಕೆ ತೆರಳಿ ಪ್ರತಿಭಟನಕಾರರೊಂದಿಗೆ ಚರ್ಚಿಸಿ ಪರಿಸ್ಥಿತಿ ತಿಳಿಗೊಳಿಸಿ, ಭದ್ರತೆಗೆ ಪೊಲೀಸರನ್ನು ನಿಯೋಜಿಸಿದ್ದರು.

ಸಂಜೆ ರಾಗಿಗುಡ್ಡದ ಬಳಿ ಹಾದುಹೋದ ಈದ್ ಮಿಲಾದ್ ಮೆರವಣಿಗೆಯ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದಾರೆ ಎಂಬ ವದಂತಿಯಿಂದಾಗಿ ಗುಂಪೊಂದು ಹಿಂಸಾಚಾರ ನಡೆಸಿ, ಆಸ್ತಿಗೆ ನಷ್ಟ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈದ್ ಮಿಲಾದ್ ಮೆರವಣಿಗೆ ವೇಳೆ ಶಿವಮೊಗ್ಗದ ಗಾಂಧಿ ಬಜಾರ್ ಬಳಿ ಯುವಕರು ಮಾರಕಾಸ್ತ್ರ ಹಿಡಿದು ಸಾಗಿದರು ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಆದರೆ, ಪೊಲೀಸರು ಇದನ್ನು ಖಚಿತಪಡಿಸಿಲ್ಲ.

ಹೊಸ ಮಾರ್ಗಸೂಚಿ ದರ ಜಾರಿ

ಒಂದನೇ ಪುಟದಿಂದ...

ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಕೋಲಾರ ಸೇರಿದಂತೆ ಬೆಂಗಳೂರಿಗೆ ಸಮೀಪದಲ್ಲಿರುವ ಜಿಲ್ಲೆಗಳಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಏರಿಕೆಯಾಗಿದೆ.

ಎಲ್ಲ ನಗರ ಸ್ಥಳೀಯಸಂಸ್ಥೆಗಳಲ್ಲೂ ಅನುಮೋದಿತ ಬಡಾವಣೆಗಳ ಸ್ಥಿರಾಸ್ತಿಗಳ ಮಾರ್ಗಸೂಚಿದರಗಳನ್ನುಹೆಚ್ಚಿಸಲಾಗಿದೆ.ಗ್ರಾಮೀಣಪ್ರದೇಶದಲ್ಲಿಗ್ರಾಮಠಾಣಾವ್ಯಾಪ್ತಿಯಲ್ಲಿನ ಅನುಮೋದಿತ ನಿವೇಶನಗಳ ಮಾರ್ಗಸೂಚಿ ದರದಲ್ಲೂ ಏರಿಕೆ ಮಾಡಲಾಗಿದೆ. ಕೃಷಿ, ಕೃಷಿಯೇತರ ಜಮೀನುಗಳ ಮಾರ್ಗಸೂಚಿ ದರಗಳಲ್ಲೂ ಭಾರಿ ಬದಲಾವಣೆ ಆಗಿದೆ.

ಮಾರ್ಗಸೂಚಿ ದರಗಳಲ್ಲಿ ಸರಾಸರಿ ಶೇಕಡ 30ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. ಆದರೆ, ಬೆಂಗಳೂರು ಹೊರ ವಲಯವೂ ಸೇರಿದಂತೆ ಹಲವು ಕಡೆಗಳಲ್ಲಿ ಮಾರ್ಗಸೂಚಿ ದರದ ಏರಿಕೆಯು ಶೇ 70ಕ್ಕಿಂತಲೂ ಜಾಸ್ತಿ ಇದೆ. ಸ್ಥಿರಾಸ್ತಿ ಖರೀದಿ ಮತ್ತು ಮಾರಾಟ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಪ್ರದೇಶಗಳಲ್ಲೇ ದರ ಏರಿಕೆಯ ಪ್ರಮಾಣ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ಜಾತಿವಾದಿ ಪಕ್ಷದವರಂತೆ ಶಾಮನೂರು ಹೇಳಿಕೆ:ಎಚ್. ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಜಾತ್ಯತೀತ ಕಾಂಗ್ರೆಸ್ ಪಕ್ಷದ ಪ್ರತಿನಿಧಿ ಶಾಮನೂರು ಶಿವಶಂಕರಪ್ಪ ಜಾತಿಯ ಪಕ್ಷದ ಪ್ರತಿನಿಧಿಯಂತೆ ಮಾತನಾಡುತ್ತಿರುವುದನ್ನು ಖಂಡಿಸುತ್ತೇನೆ. ನಿಮಗೆ ಕಾಂಗ್ರೆಸ್‌ನಲ್ಲಿ ಅವಕಾಶಗಳು ಸಿಕ್ಕಿವೆ. ಏಳು ಮಂತ್ರಿ ಸ್ಥಾನ ಕೊಟ್ಟಿದ್ದಾರೆ. ಇನ್ನೆಷ್ಟು ಸ್ಥಾನ ಬೇಕಿತ್ತು' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ ಪ್ರಶ್ನಿಸಿದರು.

ಮುಖ್ಯಮಂತ್ರಿಯ ಹೇಳಿಕೆಯ ಬಳಿಕವೂ ತಮ್ಮ ಹೇಳಿಕೆಗೆ ಬದ್ಧ ಅನ್ನುವುದನ್ನು ನೋಡಿದರೆ ಶಾಮನೂರು ಹೇಳಿಕೆಯು ಬಹಳ ಗಂಭೀರವಾಗಿದೆ
ಬಸವರಾಜ ಬೊಮ್ಮಾಯಿ, ಶಾಸಕ


ವೀರಶೈವ ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯವಾಗಿದ್ದರೆ ಸರ್ಕಾರದ ವೇದಿಕೆಯಲ್ಲಿ ಚರ್ಚಿಸಬೇಕು. ಸರ್ಕಾರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು
ಸತೀಶ್ ಜಾರಕಿಹೊಳಿ, ಸಚಿವ

'ರಾಜ್ಯ ಸರ್ಕಾರದಲ್ಲಿ ಲಿಂಗಾಯತ ನಾಯಕರನ್ನು ಕಡೆಗಣಿಸಲಾಗಿದೆ' ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿಕೆಗೆ, ಭಾನುವಾರ ಅವರು ಹೀಗೆ ಪ್ರತಿಕ್ರಿಯಿಸಿದರು. 'ಈ ರೀತಿ ಜಾತಿಯ ವಿಷಯ ಮಾತನಾಡಿದರೆ ಆಡಳಿತ ಕುಸಿಯುತ್ತದೆ. ನಿಮಗೆ ಜವಾಬ್ದಾರಿ ಇಲ್ಲವೇ? ಸಿದ್ದರಾಮಯ್ಯ ಅವರಿಂದಲೇ ನೀವೆಲ್ಲ ಗೆದ್ದಿದ್ದೀರಿ, ಅನವಶ್ಯಕವಾಗಿ ಮಾತನಾಡಬೇಡಿ. ನೀವೇ ಹೀಗೆ ಮಾತನಾಡಿದರೆ ಸಣ್ಣ–ಪುಟ್ಟ ಜಾತಿಗಳ ಭವಿಷ್ಯವೇನು? ಅವೆಲ್ಲ ಗಮನದಲ್ಲಿಟ್ಟುಕೊಂಡು ಮಾತನಾಡಿ ಎಂದು ಖಾರವಾಗಿ ಹೇಳಬೇಕಾಗುತ್ತದೆ' ಎಂದರು.

'ನಮ್ಮಲ್ಲಿ ಜಾತಿ ಆಧರಿಸಿ ಯಾರಿಗೂ ಹುದ್ದೆ ಕೊಡುವುದಿಲ್ಲ. ಬೇರೆ ಬೇರೆ ಜಾತಿಯವರಿಗೆ ಎಲ್ಲೆಲ್ಲಿ ಅವಕಾಶ ಮಾಡಿಕೊಡಬೇಕೋ, ಅಲ್ಲಿ ಮಾಡಿಕೊಟ್ಟಿದ್ದೇವೆ. ಇನ್ನೆಷ್ಟು ಸ್ಥಾನ ಕೊಡಬೇಕು ನಿಮಗೆ' ಎಂದು ತಿರುಗೇಟು ನೀಡಿದರು.



ಎಂಬಿಬಿಎಸ್ ಅಥವಾ ಎಂಜಿನಿಯರಿಂಗ್ ಯಾವುದು ಮಾಡಲಿ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

● ಮುಂದಿನ ವರ್ಷ ಪಿಯು ಮುಗಿಯಲಿದೆ. ಎಂಬಿಬಿಎಸ್ ಅಥವಾ ಎಂಜಿನಿಯರಿಂಗ್ ಯಾವುದು ಮಾಡಿದರೆ ಸೂಕ್ತ?
ಹೆಸರು, ಊರು ತಿಳಿಸಿಲ್ಲ.

ನಿಮಗೆ ಯಾವುದು ಹೆಚ್ಚು ಸೂಕ್ತ ಎಂಬುದನ್ನು ತಿಳಿಯಿರಿ. ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಕೌಶಲಗಳ ಮೌಲ್ಯ ಮಾಪನ ಮಾಡಿ. ಸವಾಲು, ಧ್ಯೇಯಗಳನ್ನು ಗುರುತಿಸಿ, ವೃತ್ತಿಯನ್ನು ಆಯ್ಕೆ ಮಾಡಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

‘ತ್ರಿ’ ಪರೀಕ್ಷಾ ಸೂತ್ರ


ಎಸ್. ಸಂಪತ್

ಈ ಶೈಕ್ಷಣಿಕ ವರ್ಷದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ವರ್ಷದಲ್ಲಿ ಒಂದಲ್ಲ, ಎರಡಲ್ಲ ಮೂರು ಮುಖ್ಯ ಪರೀಕ್ಷೆ ಬರೆಯುವ ಅವಕಾಶ ಒದಗಿ ಬಂದಿದೆ. ಅದೂ ಐದು ತಿಂಗಳಲ್ಲಿ ಈ ಮೂರು ಪರೀಕ್ಷೆಗಳು ಜರುಗಲಿವೆ. ಆದರೆ, ವಿದ್ಯಾರ್ಥಿಗಳಿಗೆ ಈ ಮೂರೂ ಪರೀಕ್ಷೆಗಳನ್ನು ಬರೆಯುವುದು ಕಡ್ಡಾಯವಲ್ಲ. ಒಂದು ವೇಳೆ ಮೂರು ಪರೀಕ್ಷೆಗಳನ್ನೂ ಬರೆದರೆ, ಯಾವ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಬರುತ್ತವೆಯೋ ಅದನ್ನೇ ಉಳಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಅಲ್ಲದೆ ವಿಷಯವಾರು ಅಂಕಗಳನ್ನು ಹೆಚ್ಚಿಸಿಕೊಳ್ಳಲು ಸುವರ್ಣಾವಕಾಶ ಸಿಕ್ಕಿದಂತಾಗಿದೆ.

ಹೌದು, ಈ ಮೊದಲು ಒಂದು ವಾರ್ಷಿಕ ಪರೀಕ್ಷೆ ನಡೆಯುತ್ತಿತ್ತು. ಅದರಲ್ಲಿ ‘ಫೇಲ್’ ಆದವರು ಅಥವಾ ಪಡೆದ ಅಂಕಗಳಿಂದ ತೃಪ್ತರಾಗದವರು ಪೂರಕ ಪರೀಕ್ಷೆ ಬರೆಯಬಹುದಿತ್ತು. ಆಗ ಪೂರಕ ಪರೀಕ್ಷೆಯಲ್ಲಿ ಪಡೆದ ಅಂಕವೇ ಅಂತಿಮವಾಗುತ್ತಿತ್ತು. ವಾರ್ಷಿಕ ಪರೀಕ್ಷೆಗಿಂತ ಪೂರಕ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಅನಿವಾರ್ಯವಾಗಿ ಅದನ್ನೇ ಒಪ್ಪಿಕೊಳ್ಳಬೇಕಿತ್ತು. ಹಿಂದಿನ (ವಾರ್ಷಿಕ) ಪರೀಕ್ಷೆಯ ಅಂಕಗಳನ್ನು ಪರಿಗಣಿಸಲು ಅವಕಾಶ ಇರಲಿಲ್ಲ. ಆದರೆ, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಈ ನಿಯಮದಲ್ಲಿ ಮಹತ್ವದ ಬದಲಾವಣೆಯಾಗಿದ್ದು, ‘ವಿದ್ಯಾರ್ಥಿ ಸ್ನೇಹಿ’ಯಾಗಿ ರೂಪಿಸಲಾಗಿದೆ.

ಉದಾಹರಣೆಗೆ, 10ನೇ ತರಗತಿಯ ವಿದ್ಯಾರ್ಥಿಯೊಬ್ಬರಿಗೆ ಮೊದಲ ಪರೀಕ್ಷೆಯಲ್ಲಿ (ವಾರ್ಷಿಕ ಪರೀಕ್ಷೆ-1) ಗಣಿತ ವಿಷಯದಲ್ಲಿ ಹೆಚ್ಚು ಅಂಕ ಬಂದು, ವಿಜ್ಞಾನ ಮತ್ತು ಸಮಾಜ ವಿಜ್ಞಾನದಲ್ಲಿ ಕಡಿಮೆ ಅಂಕಗಳು ಬಂದಿರುತ್ತವೆ ಎಂದುಕೊಳ್ಳಿ. ಆಗ ಆ ವಿದ್ಯಾರ್ಥಿಯು ತನ್ನ ಅಂಕಗಳನ್ನು ಸುಧಾರಿಸಿಕೊಳ್ಳಲು ವಾರ್ಷಿಕ ಪರೀಕ್ಷೆ-2 ಬರೆಯಬಹುದು. ಆ ಪರೀಕ್ಷೆಯಲ್ಲಿ ವಿಜ್ಞಾನದಲ್ಲಿಯೂ ಹಾಗೂ ಮತ್ತೊಂದು ವಾರ್ಷಿಕ ಪರೀಕ್ಷೆ-3ರಲ್ಲಿ ಸಮಾಜ ವಿಜ್ಞಾನದಲ್ಲಿ ಹಿಂದಿನ ಪರೀಕ್ಷೆಗಳಿಗಿಂತ ಹೆಚ್ಚಿನ ಅಂಕಗಳನ್ನು ಗಳಿಸಬಹುದು. ಆಗ ಈ ಮೂರೂ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗೆ ವಿಷಯವಾರು ಯಾವುದರಲ್ಲಿ ಅತ್ಯಧಿಕ ಅಂಕಗಳು ಬಂದಿರುತ್ತವೆಯೋ ಅವು ಅಂಕಪಟ್ಟಿಯಲ್ಲಿ ಸೇರ್ಪಡೆಯಾಗಿ, ಅಂತಿಮ ಫಲಿತಾಂಶ ಲಭ್ಯವಾಗುತ್ತದೆ. ಒಂದು ವೇಳೆ ಮೊದಲ ಪರೀಕ್ಷೆಯ ಫಲಿತಾಂಶವೇ ವಿದ್ಯಾರ್ಥಿಗೆ ತೃಪ್ತಿಕರವಾಗಿದ್ದರೆ ಎರಡು, ಮೂರನೇ ಪರೀಕ್ಷೆ ಬರೆಯುವ ಅಗತ್ಯವಿರುವುದಿಲ್ಲ.

ಇನ್ನುಂದೆ ‘ಪೂರಕ ಪರೀಕ್ಷೆ’ ಇರಲ್ಲ: ಬಹಳ ಹಿಂದಿನಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ನಡೆದುಕೊಂಡು ಬರುತ್ತಿದ್ದ ‘ಪೂರಕ ಪರೀಕ್ಷೆ’ ಈ ಶೈಕ್ಷಣಿಕ ವರ್ಷದಿಂದ ಇರುವುದಿಲ್ಲ. ದಶಕದ ಹಿಂದೆ ಮುಖ್ಯ ಪರೀಕ್ಷೆ ಮುಗಿದ ಐದರಿಂದ ಆರು ತಿಂಗಳ ಅವಧಿಯಲ್ಲಿ ಪೂರಕ ಪರೀಕ್ಷೆಗಳು ನಡೆಯುತ್ತಿದ್ದವು. ಈ ಪರೀಕ್ಷೆಯಲ್ಲಿ ಪಾಸಾದವರು ಶಿಕ್ಷಣ ಮುಂದುವರಿಸಲು, ಹೊಸ ಶೈಕ್ಷಣಿಕ ವರ್ಷಕ್ಕಾಗಿ ಮತ್ತೆ ಆರು ತಿಂಗಳು ಕಾಯಬೇಕಾಗುತ್ತಿತ್ತು. ಒಂದು ಶೈಕ್ಷಣಿಕ ವರ್ಷ ನಷ್ಟವಾಗುತ್ತಿತ್ತು. ಸರ್ಕಾರ ಮುಖ್ಯ ಪರೀಕ್ಷೆ ನಡೆದ ಒಂದೂವರೆಯಿಂದ ಎರಡು ತಿಂಗಳೊಳಗೆ ಪೂರಕ ಪರೀಕ್ಷೆ ನಡೆಸಿ, ಫಲಿತಾಂಶ ಪ್ರಕಟಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿತು. ಇದರಿಂದ ವಿದ್ಯಾರ್ಥಿಗಳಿಗೆ ಮುಂದಿನ ವ್ಯಾಸಂಗಕ್ಕೂ ಅನುಕೂಲವಾಗುತ್ತಿತ್ತು. ಆದರೆ ಈ ವರ್ಷದಿಂದ ‘ಪೂರಕ ಪರೀಕ್ಷೆ’ಯೇ ಇರುವುದಿಲ್ಲ.



ಯಶಸ್ಸಿನ ಮಂತ್ರ

ಆದರೆ, ‘ಪೂರಕ ಪರೀಕ್ಷೆ’ ಬದಲಿಗೆ ವಾರ್ಷಿಕ ಪರೀಕ್ಷೆ 1, 2 ಮತ್ತು 3 ಎಂಬ ಹೆಸರಿನ ಮೂರು ಅವಕಾಶಗಳನ್ನು ಸರ್ಕಾರ ವಿದ್ಯಾರ್ಥಿಗಳಿಗೆ ಒದಗಿಸಿದೆ. ಮೂರನೇ ಪರೀಕ್ಷೆ ಮುಗಿದ ಬಳಿಕ ಅದೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು ಮುಂದಿನ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ಸರ್ಕಾರ ಅವಕಾಶ ಕಲ್ಪಿಸಲಿದೆ.

ಬದಲಾವಣೆ ಏಕೆ: ಒಂದು ವಾರ್ಷಿಕ ಮತ್ತು ಒಂದು ಪೂರಕ ಪರೀಕ್ಷಾ ಪದ್ಧತಿಯು ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಒತ್ತಡ ಮತ್ತು ಆತಂಕಕ್ಕೆ ಕಾರಣವಾಗುತ್ತಿತ್ತು. ವಿದ್ಯಾರ್ಥಿಗಳ ಜ್ಞಾನಧಾರಣೆ, ಅರ್ಥಪೂರ್ಣ ಕಲಿಕೆ ಮತ್ತು ಶೈಕ್ಷಣಿಕ ಪ್ರಗತಿ ಕುಂಠಿತವಾಗಿತ್ತು ಎಂಬುದನ್ನು ಸರ್ಕಾರ ಮನಗಂಡಿದೆ. ವಾರ್ಷಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳಿಂದ ವಿದ್ಯಾರ್ಥಿ ತೃಪ್ತರಾಗದಿದ್ದರೆ, ಅದನ್ನು ತಿರಸ್ಕರಿಸಿ ಪೂರಕ ಪರೀಕ್ಷೆ ಬರೆಯಬಹುದಿತ್ತು. ಆಗ ಪೂರಕ ಪರೀಕ್ಷೆಯಲ್ಲಿ ಪಡೆದ ಅಂಕವೇ ಅಂತಿಮವಾಗುತ್ತಿತ್ತು. ಎರಡೂ ಪರೀಕ್ಷೆಗಳಲ್ಲಿ ತನ್ನ ಅತ್ಯುತ್ತಮ ಅಂಕಗಳನ್ನು ಉಳಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಆಯ್ಕೆ ಇರಲಿಲ್ಲ. ಇದು ವಿದ್ಯಾರ್ಥಿ ಸ್ನೇಹಿ ಪರೀಕ್ಷಾ ವಿಧಾನ ಆಗಿರಲಿಲ್ಲ. ಆದ್ದರಿಂದ ಹೊಸ ಪರೀಕ್ಷಾ ಸೂತ್ರ (ವಾರ್ಷಿಕ ಪರೀಕ್ಷೆ 1, 2 ಮತ್ತು 3) ಅಳವಡಿಸಲಾಗಿದೆ ಎಂಬುದು ಸರ್ಕಾರದ ಪ್ರತಿಪಾದನೆ.

ಮೂರು ಪರೀಕ್ಷಾ ಅವಕಾಶಗಳನ್ನು ಒದಗಿಸಿ, ವಿದ್ಯಾರ್ಥಿಯ ಕಾರ್ಯಕ್ಷಮತೆ ಮತ್ತು ಸಕಾರಾತ್ಮಕ ಮನೋಭಾವವನ್ನು ಉತ್ತೇಜಿಸುವುದು ಪರೀಕ್ಷಾ ಕ್ರಮದ ಬದಲಾವಣೆಯ ಪ್ರಮುಖ ಉದ್ದೇಶ. ವಿದ್ಯಾರ್ಥಿಗಳ ಗ್ರಹಿಕೆ, ಓದು, ಸಾಮರ್ಥ್ಯ ಭಿನ್ನವಾಗಿರುತ್ತದೆ. ವಿದ್ಯಾರ್ಥಿಗಳ ವೇಗ ಮತ್ತು ಶೈಲಿಯೂ ವಿಭಿನ್ನವಾಗಿರುತ್ತದೆ. ಹೀಗಾಗಿ ವಾರ್ಷಿಕ 1, 2 ಮತ್ತು 3ನೇ ಪರೀಕ್ಷೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳು ವೇಗಕ್ಕೆ ಹೊಂದಿಕೊಳ್ಳಲು ಮತ್ತು ಸಮಯ ನಿರ್ಬಂಧಗಳಿಂದ ಎದುರಾಗುವ ಒತ್ತಡ ಕಡಿಮೆ ಮಾಡಲು ಸಹಾಯಕವಾಗುತ್ತದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ನಿರ್ದೇಶಕ ಎಚ್. ಎನ್. ಗೋಪಾಲಕೃಷ್ಣ ಪ್ರತಿಕ್ರಿಯಿಸುತ್ತಾರೆ. ಈ ಮೂರೂ ಪರೀಕ್ಷೆಗಳಲ್ಲಿ ವಿಷಯ ಮತ್ತು ಕಠಿಣತೆಯ ಮಟ್ಟದಲ್ಲಿ ಏಕರೂಪತೆಯನ್ನು ಮಂಡಳಿ ಕಾಯ್ದುಕೊಳ್ಳುತ್ತದೆ ಎಂದೂ ಹೇಳುತ್ತಾರೆ.

ಫಲಿತಾಂಶ ಸುಧಾರಣೆ, ಉನ್ನತ ಶಿಕ್ಷಣಕ್ಕೆ ಸಹಕಾರಿ: ಹೊಸ ವಿಧಾನವು ‘ವಿದ್ಯಾರ್ಥಿ ಸ್ನೇಹಿ’ ಆಗಿರುವುದರಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಫಲಿತಾಂಶದಲ್ಲೂ ಏರಿಕೆ ದಾಖಲಾಗುವ ಸಾಧ್ಯತೆ ಇದೆ. 2022-23ನೇ ಸಾಲಿನಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 74.67ರಷ್ಟು ಫಲಿತಾಂಶ ಬಂದಿತ್ತು. ಆಗ 5.24 ಲಕ್ಷ ವಿದ್ಯಾರ್ಥಿಗಳು ಪಾಸಾಗಿದ್ದರು. ಜೂನ್‌ನಲ್ಲಿ ನಡೆಸಿದ್ದ ಮೊದಲ ಪೂರಕ ಪರೀಕ್ಷೆಯಲ್ಲಿ 50,478 ವಿದ್ಯಾರ್ಥಿಗಳು ಪಾಸಾಗಿದ್ದರು. ಈ ವರ್ಷ ಪ್ರಥಮ ಬಾರಿಗೆ ನಡೆಸಿದ್ದ ಎರಡನೇ ಪೂರಕ ಪರೀಕ್ಷೆಯಲ್ಲಿ 41,961 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಅಂದರೆ ಎರಡು ಪೂರಕ ಪರೀಕ್ಷೆಯಿಂದ 92,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಇಷ್ಟು ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅನುಕೂಲ ಆಯಿತು. ಇದೇ ರೀತಿ ಮೂರು ಪರೀಕ್ಷಾ ವಿಧಾನದಿಂದಲೂ ಫಲಿತಾಂಶದಲ್ಲಿ ಏರಿಕೆ ದಾಖಲಾಗುವುದರ ಜತೆಗೆ, ವಿದ್ಯಾರ್ಥಿಗಳ ಮುಂದಿನ ವ್ಯಾಸಂಗಕ್ಕೂ ಸಹಕಾರಿಯಾಗಲಿದೆ ಎನ್ನುತ್ತಾರೆ ಮಂಡಳಿಯ ಅಧಿಕಾರಿಗಳು.

ಸಂಭವನೀಯ ವೇಳಾಪಟ್ಟಿ

ದ್ವಿತೀಯ ಪಿಯುಸಿ

ಪರೀಕ್ಷೆ 1
- ಮಾರ್ಚ್ 1 ರಿಂದ ಮಾರ್ಚ್ 25
- ಫಲಿತಾಂಶ ಏಪ್ರಿಲ್ 22

ಪರೀಕ್ಷೆ 2
- ಮೇ 15 ರಿಂದ ಜೂನ್ 5
- ಜೂನ್ 21 ಫಲಿತಾಂಶ

ಪರೀಕ್ಷೆ 3
- ಜುಲೈ 12 ರಿಂದ ಜುಲೈ 30
- ಆಗಸ್ಟ್ 16 ಫಲಿತಾಂಶ

ಎಸ್ಸೆಸ್ಸೆಲ್ಸಿ ಪರೀಕ್ಷೆ

ಪರೀಕ್ಷೆ 1
- ಮಾರ್ಚ್ 30 ರಿಂದ ಏಪ್ರಿಲ್ 15ರವರೆಗೆ
- ಫಲಿತಾಂಶ ಮೇ 8

ಪರೀಕ್ಷೆ 2
- ಜೂನ್ 12 ರಿಂದ ಜೂನ್ 19
- ಜೂನ್ 29 ಫಲಿತಾಂಶ

ಪರೀಕ್ಷೆ 3
- ಜುಲೈ 29 ರಿಂದ ಆಗಸ್ಟ್ 5
- ಆಗಸ್ಟ್ 19 ಫಲಿತಾಂಶ

(ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ: ಪರೀಕ್ಷಾ ನಿಯಮಗಳು)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(xii) $\sqrt{2}, \sqrt{8}, \sqrt{18}, \sqrt{32}$ ....

ಪರಿಹಾರ: (......ಹಿಂದಿನ ಸಂಚಿಕೆಯಿಂದ)

$$=3\sqrt{2}-2\sqrt{2}=\sqrt{2}$$
$$a_4-a_3=\sqrt{32}-\sqrt{18}$$
$$=4\sqrt{2}\ \ -3\sqrt{2}=\sqrt{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=\sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$\sqrt{32}+\sqrt{2} = 4\sqrt{2}+\sqrt{2}=5\sqrt{2}=\sqrt{50}$$
$$5\sqrt{2})+\sqrt{2} = 6\sqrt{2}=\sqrt{72}$$
$$6\sqrt{2})+\sqrt{2} = 7\sqrt{2}=\sqrt{98}$$

(xiv) $1^2, 3^2, 5^2, 7^2$ ....

ಪರಿಹಾರ: $a_2-a_1=3^2-1^2=9-1=8$

$$a_3-a_2=3^2-5^2=9-25=16$$

ಇಲ್ಲಿ $a_2-a_1 \neq a_3-a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xv) $1^2, 5^2, 7^2, 73, \ldots$

ಪರಿಹಾರ: $a_2-a_1=5^2-1^2=25-1=24$

$$a_3-a_2=7^2-5^2=49-25=24$$
$$a_4-a_3=73-7^2=73-49=24$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=24$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$73+24=97$$
$$97+24=121$$
$$121+24=145$$

ನಿಮ್ಮ ಹೆಚ್ಚಿನ ಅಭ್ಯಾಸಕ್ಕಾಗಿ ಎಕ್ಸ್‌ಟ್ರಾ ಪ್ರಶ್ನೆಗಳು

1) ಒಂದು ತ್ರಿಭುಜದ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ. ಅತ್ಯಂತ ಚಿಕ್ಕಕೋನ 50^0 ಇದ್ದರೆ, ಉಳಿದೆರಡು ಕೋನಗಳನ್ನು ಕಂಡುಹಿಡಿಯಿರಿ.

ಪರಿಹಾರ:– $a=50^0$ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ ಮತ್ತು ಮೂರು ಕೋನಗಳ ಮೊತ್ತ 180^0

$$\therefore a+(a+d)+(a+2d)=180$$
$$50+(50+d)+(50+2d)=180$$
$$50+50+d+50+2d=180$$
$$150+3d=180$$
$$3d=180-150$$
$$d=\frac{30}{3}=10$$

$\therefore$ ಮೊದಲ ಕೋನ $a=50^0$

ಎರಡನೇ ಕೋನ $(a+d)=50+10=60^0$

ಮೂರನೇ ಕೋನ $(a+2d)=50+2(10)$

$$=50+20=70^0$$

2) 12, 10, 8.... ಸಮಾಂತರ ಶ್ರೇಢಿಯ ಯಾವ ಪದವು –48 ಆಗಿದೆ?

ಪರಿಹಾರ:– $a=12,\ d=10-12=-2,\ T_n=-48,\ n=?$

$$T_n=a+(n-1)d$$
$$-48=12+(n-1)(-2)$$
$$-48=12-2n+2$$
$$2n=14+48$$
$$n=\frac{62}{2}=31$$
$$n=31$$

$\therefore$ ಈ ಸಮಾಂತರ ಶ್ರೇಢಿಯ 31ನೇ ಪದವು –48 ಆಗಿದೆ.

3) 50 ಪದಗಳನ್ನು ಹೊಂದಿರುವ ಸಮಾಂತರ ಶ್ರೇಢಿಯಲ್ಲಿ 3ನೇ ಪದ 12 ಮತ್ತು ಕೊನೆಯ ಪದ 106 ಆಗಿದೆ. ಅದರ 29ನೇ ಪದವನ್ನು ಕಂಡುಹಿಡಿಯಿರಿ.

ಪರಿಹಾರ:– $n=50,\ T_3=12,\ T_{50}=106,\ T_{29}=?$

$$d=\frac{T_p-T_q}{p-q}=\frac{T_3-T_{50}}{3-50}=\frac{12-106}{-47}=\frac{-94}{-47}=2$$
$$T_3=a+2d$$
$$12=a+2(2)$$
$$a=12-4=8$$
$$T_{29}=a+28d$$
$$\Rightarrow =8+28(2)$$
$$\Rightarrow =8+56$$
$$T_{29}=64$$

4) ಒಂದು ಸಮಾಂತರ ಶ್ರೇಢಿಯ 4ನೇ ಮತ್ತು 8ನೇ ಪದಗಳ ಮೊತ್ತವು 24 ಹಾಗೂ ಅದೇ ಶ್ರೇಢಿಯ 6ನೇ ಮತ್ತು 10ನೇ ಪದಗಳ ಮೊತ್ತವು 44 ಆಗಿದೆ. ಅದರ ಮೊದಲ 3 ಪದಗಳನ್ನು ಕಂಡುಹಿಡಿಯಿರಿ.

ಉತ್ತರ:– ದತ್ತ ಹೇಳಿಕೆಯಂತೆ,

$T_4+T_8=24$ ಮತ್ತು $T_6+T_{10}+44$

$a+3d+a+7d=24$ | $a+5d+a+9d=44$

$2a+10d=24$ | $2a+14d=44$

2 ರಿಂದ ಭಾಗಿಸಿದಾಗ | 2 ರಿಂದ ಭಾಗಿಸಿದಾಗ

$a+5d=12$ .... (1) | $a+7d=22$ ....(2)

2ರಲ್ಲಿ 1 ಅನ್ನು ಕಳೆದಾಗ

$$a+7d=22$$
$$\underline{a\pm 5d=12}$$
$$2d=10$$
$$d=\frac{10}{2}=5$$

2 ರಿಂದ $a+7d=22$

$$a+7(5)=22$$
$$a+35=22 \Rightarrow a=22-35 \Rightarrow a=-13$$

$\therefore$ I ಪದ $=a=-\underline{13}$

II ಪದ $=a+d=-13+5=-\underline{8}$

III ಪದ $=a+2d \Rightarrow =-13+2(5) \Rightarrow =-13+10=\underline{-3}$

ಅಭ್ಯಾಸ 1.2

1. ಕೆಳಗಿನ ಕೋಷ್ಟಕದಲ್ಲಿ ಬಿಟ್ಟಿರುವ ಜಾಗವನ್ನು ತುಂಬಿ. ಸಮಾಂತರ ಶ್ರೇಢಿಯ ಮೊದಲ ಪದ a, ಸಾಮಾನ್ಯ ವ್ಯತ್ಯಾಸ d ಮತ್ತು nನೇ ಪದ a_n ಆಗಿದೆ

	a	d	n	a_n
(i)	7	3	8	......
(ii)	– 18	......	10	0
(iii)	....	– 3	18	– 5
(iv)	– 18.9	2.5	......	3.6
(v)	3.5	0	105	......

ಪರಿಹಾರ:–

(ಮುಂದುವರಿಯುವುದು)

II PUC PHYSICS

Chapter – 1

ELECTRIC CHARGES AND FIELDS

Problems:-

3. An electric dipole consisting of a pair of equal and opposite charges each of magnitude 5μC has dipole moment equal to 5.0 x 10⁻⁷ Cm. Find the length of the dipole.

Soln:- $q = 5\,\mu C = 5 \times 10^{-6}\,C$

$$p = 5.0 \times 10^{-7}\ Cm$$

Using $p = q \times 2l$,

we get Length of the dipole,

$$2l = \frac{p}{q}$$
$$= \frac{5.0 \times 10^{-7}}{5 \times 10^{-6}} = 0.1\ m$$

4. Two point charges + 2 μC and -2 μC are located 10cm apart in air.

a) Calculate the electric field at the midpoint P of the line RS joining the two charges.

b) If a negative charge of 1.6 x 10⁻¹⁹ C is placed at that point, find the force experienced by this charge.

Soln:- Given that - two point charges + 2 μC and -2 μC are located 10 cm apart in air.

$$q_1 = 2\mu C = 2\times10^{-6}\ C$$
$$q_2 = -2\mu C = -2\times10^{-6}\ C$$
$$r = 10\ cm = 0.1\ m$$
$$\therefore\ RP = PS = \frac{0.1}{2} = 0.05\ m$$




Fig (a)




Fig (b)

(a) *Electric field intensity* - at P is given by

E = Electric field due to q_1 at P (along PS) + Electric field due to q_2 at P (along PS)

$$= \frac{1}{4\pi\epsilon_0}\left(\frac{q_1}{(RP)^2}\right) + \frac{1}{4\pi\epsilon_0}\left(\frac{q_2}{(PS)^2}\right)$$
$$= \frac{9\times10^9 \times 2\times10^{-6}}{(0.05)^2} + \frac{9\times10^9\times2\times10^{-6}}{(0.05)^2}$$
$$= 7.2 \times 10^6 + 7.2 \times 10^6$$
$$= 14.4 \times 10^6\ NC^{-1};\ \text{along PS}$$

(b) *Electric force acting on charge*


$q = -1.6\times10^{-9}\,C$ is given by,

$$F = qE = -1.6 \times 10^{-9} \times 14.4 \times 10^6$$
$$= -2.3 \times 10^{-2}\ N;\ \text{along PR}$$

5. Two charges q and -3q are placed fixed on x-axis separated by distance ‘d’. Where should a third charge 2q be placed such that it will not experience any force?

Ans:- At P: on 2q, force due to q is to the left and that due to -3q is to the right.

$$\therefore \frac{2q^2}{4\pi\varepsilon_0 x^2} = \frac{6q^2}{4\pi\varepsilon_0 (d+x)^2}$$
$$\therefore (d+x)^2 = 3x^2$$
$$\therefore 2x^2 - 2dx - d^2 = 0$$



$$X = \frac{d}{2} \pm \frac{\sqrt{3}\,d}{2}$$


(-ve sign would be between q and -3q and hence is unacceptable.)

$$X = \frac{d}{2} + \frac{\sqrt{3}\,d}{2}$$
$$= \frac{d}{2}(1+\sqrt{3})\ \text{to the left of q.}$$

6. Figure represents a crystal unit of Cesium Chloride, CsCl. The cesium atoms, represented by open circles are situated at the corners of a cube of side 0.40nm, whereas a Cl atom is situated at the center of the cube. The Cs atoms are deficient in one electron while the Cl atom carries an excess election.

(i) What is the net electric field on the Cl atom due to eight Cs atoms?

(ii) Suppose that the Cs atom at the corner A is missing. What is the net force now on the Cl atom due to seven remaining Cs atoms?



Ans:- **(i) Zero from symmetry.**

(ii) Removing a +ve Cs ion is equivalent to adding singly charged –ve Cs ion at that location.

Net force then is,

$$F = \frac{e^2}{4\pi\varepsilon_0 r^2}$$

Where r = distance between the Cl ion and a Cs ion.

$$= \sqrt{(0.20)^2 + (0.20)^2 + (0.20)^2}\,x10^{-9}$$
$$= \sqrt{3(0.20)^2}\,x10^{-9}$$
$$= 0.346 \times 10^{-9} m$$

Hence, $F = \dfrac{(8.99\times10^9)(1.6\times10^{-19})^2}{(0.346\times10^{-9})^2}$

$$= 192 \times 10^{-11}$$
$$= 1.92 \times 10^{-9}\ N$$

1.92×10^{-9} N, directed from A to Cl^-

7. Four charges +q, +q, -q, -q are placed respectively at the four corners of a square of side a. Find the magnitude and direction of the electric field at the centre of the square.

Soln:- Here, $AC = \sqrt{a^2+a^2} = \sqrt{2}\ a = BD$

$$\therefore AO = BO = CO = DO = \frac{\sqrt{2}}{2}a = \frac{a}{\sqrt{2}}$$

Step- 1. Electric field at O due to charge at A is *(Contd)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ



❦ ಸುಭಾಷಿತ ❦

ಅಹಿಂಸಾತ್ಮಕ ವ್ಯಕ್ತಿಗೆ ಇಡೀ ಜಗತ್ತು ಒಂದು ಕುಟುಂಬದಂತೆ. ಹೀಗಾಗಿ, ಅವನು ಯಾರಿಗೂ ಹೆದರುವುದಿಲ್ಲ ಮತ್ತು ಯಾರನ್ನೂ ಹೆದರಿಸುವುದಿಲ್ಲ.

–ಮಹಾತ್ಮ ಗಾಂಧಿ

ರಾಜಕೀಯ ಮೇಲಾಟಕ್ಕೆ ಕೊನೆಹಾಡಿ ವಿಶ್ವವಿದ್ಯಾಲಯ ನಿರ್ಮಾಣ ಮಾಡಿ

ಅಭಿವೃದ್ಧಿ ಕಾರ್ಯಗಳಲ್ಲಿ ರಾಜಕೀಯ ಮೇಲಾಟವೂ ಸೇರಿಬಿಟ್ಟರೆ ಆ ಕಾರ್ಯಗಳು ಹೇಗೆ ಹಳ್ಳ ಹಿಡಿಯುತ್ತವೆ ಎನ್ನುವುದಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಸಂಕೀರ್ಣ ನಿರ್ಮಾಣಕ್ಕೆ ಐದನೇ ಸಲ ಭೂಮಿಪೂಜೆ ನಡೆಯುತ್ತಿರುವುದೇ ಜ್ವಲಂತ ನಿದರ್ಶನ. ಆರ್‌ಜಿಯುಎಚ್‌ಎಸ್‌ನ ಕ್ಯಾಂಪಸ್ ಅನ್ನು ರಾಮನಗರದ ಸಮೀಪದ ಅರ್ಚಕರಹಳ್ಳಿಯಲ್ಲಿ ನಿರ್ಮಿಸಲು ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಂಡು ಹದಿನಾರು ವರ್ಷಗಳೇ ಕಳೆದಿವೆ. ಈ ಅವಧಿಯಲ್ಲಿ ಭವ್ಯವಾದ ಸೌಧ ಮೇಲೆದ್ದು, ವಿಶ್ವವಿದ್ಯಾಲಯದ ಚಟುವಟಿಕೆಗಳು ಅಲ್ಲಿಯೇ ನಡೆಯಬೇಕಾಗಿತ್ತು. ಆದರೆ, ರಾಜಕೀಯ ಮೇಲಾಟದಿಂದ ಕಟ್ಟಡ ನಿರ್ಮಾಣ ಕೆಲಸ ಇನ್ನೂ ಆರಂಭವಾಗಿಲ್ಲ. ಸಾಮಾನ್ಯವಾಗಿ ರಾಜಕೀಯ ಬೆಂಬಲ ಇಲ್ಲದ ಕೆಲವು ಯೋಜನೆಗಳು ಕುಂಟುತ್ತಾ ಸಾಗುವುದುಂಟು. ಆದರೆ, ಇಲ್ಲಿ ಎದುರಾಗಿರುವುದು ಬೇರೊಂದು ರೀತಿಯ ಸಮಸ್ಯೆ. ಅಜೀರ್ಣವಾಗುವಷ್ಟು ರಾಜಕೀಯ 'ಬಲ' ಈ ಭಾಗದಲ್ಲಿ ಸಾಂದ್ರೀಕರಣಗೊಂಡಿರುವುದೇ ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೆ ತೊಡಕಾಗಿ ಪರಿಣಮಿಸಿದೆ. 2007ರಲ್ಲಿ ಜೆಡಿಎಸ್-ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಆರ್‌ಜಿಯುಎಚ್‌ಎಸ್‌ನ ಕ್ಯಾಂಪಸ್ ಅನ್ನು ರಾಮನಗರಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಅವರು ರಾಮನಗರ ವಿಧಾನಸಭಾ ಕ್ಷೇತ್ರವನ್ನೇ ಪ್ರತಿನಿಧಿಸುತ್ತಿದ್ದುದರಿಂದ ವಿಶ್ವವಿದ್ಯಾಲಯವನ್ನು ಅಲ್ಲಿಗೆ ಸ್ಥಳಾಂತರಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದರು. ರಾಮನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಶಂಕುಸ್ಥಾಪನೆಯನ್ನೂ ನೆರವೇರಿಸಿದ್ದರು. ಆದರೆ, ಆ ಸರ್ಕಾರ ಹೆಚ್ಚು ಕಾಲ ಬಾಳದ ಕಾರಣ ನಿರ್ಮಾಣ ಕಾಮಗಾರಿ ಶುರುವಾಗಲಿಲ್ಲ. 2008ರಲ್ಲಿ ಅಸ್ತಿತ್ವಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರದಿಂದ ಅದೇ ಕಾಮಗಾರಿಗೆ ಎರಡು ಬಾರಿ ಭೂಮಿಪೂಜೆ ನಡೆಸಲಾಯಿತು. ಬಳಿಕ ಕಾಂಗ್ರೆಸ್ ನೇತೃತ್ವದ ಸರ್ಕಾರವು 2017ರಲ್ಲಿ ವಿಶ್ವವಿದ್ಯಾಲಯ ಕಚೇರಿಯನ್ನು ರಾಮನಗರದ ಹಳೆ ಕಂದಾಯ ಭವನದ ಕಚೇರಿಯಲ್ಲಿ ತಾತ್ಕಾಲಿಕವಾಗಿ ಆರಂಭಿಸಲು ಮುಂದಾಯಿತು. ಆ ಕಚೇರಿ ಕಾರ್ಯಾರಂಭ ಮಾಡಲಿಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಈ ವರ್ಷದ ಮಾರ್ಚ್‌ನಲ್ಲಿ ಮತ್ತೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ಇತ್ತೀಚೆಗೆ ನಡೆಸಿದ್ದು ಐದನೇ ಭೂಮಿಪೂಜೆಯನ್ನು. ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಕಾರ್ಯ ಇಷ್ಟೊಂದು ವಿಳಂಬವಾಗುವುದಕ್ಕೆ ಮೂರೂ ಪಕ್ಷಗಳು ಸಮಾನವಾಗಿ ಕಾರಣವಾಗಿವೆ.




ಅಭಿವೃದ್ಧಿ ವಿಷಯದಲ್ಲಿ ಕ್ಷುಲ್ಲಕ ರಾಜಕೀಯವನ್ನು ಸುಳಿಯಗೊಡದೆ, ಕಾಮಗಾರಿ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಎಲ್ಲ ಪಕ್ಷಗಳ ನಾಯಕರ ಹೊಣೆ

ಒಂದೇ ಕಾಮಗಾರಿಗೆ ಐದೈದು ಸಲ ಭೂಮಿಪೂಜೆಯನ್ನು ನಡೆಸುವುದು, ಸರ್ಕಾರ ಕೈಗೊಂಡ ತೀರ್ಮಾನದ ಮೇಲೆ ಹದಿನಾರು ವರ್ಷಗಳಾದರೂ ಕ್ರಮ ಜರುಗಿಸದೇ ಇರುವುದು ನಮ್ಮ ವ್ಯವಸ್ಥೆ ಎಷ್ಟು ಜಡ್ಡುಗಟ್ಟಿದೆ ಎನ್ನುವುದಕ್ಕೆ ಉದಾಹರಣೆ. ಸರ್ಕಾರವು ವಿಶ್ವವಿದ್ಯಾಲಯದ ಸ್ಥಳಾಂತರಕ್ಕೆ ಮೊದಲ ಬಾರಿಗೆ ನಿರ್ಧಾರ ಮಾಡಿದಾಗ, ಅದಕ್ಕೆ ಅಗತ್ಯವಾದ ಭೂಮಿ ಸ್ವಾಧೀನ ಆಗಿರಲಿಲ್ಲ. ಮುಂದೆ, ಫಲವತ್ತಾದ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ ಎಂದು ದೂರಿ ರೈತರು ಕೋರ್ಟ್ ಮೆಟ್ಟಿಲೇರಿದ್ದರಿಂದ ಯೋಜನೆಯು ಅನಿಶ್ಚಿತತೆಯ ಸುಳಿಗೆ ಸಿಲುಕಿತ್ತು. ಒಂದೂವರೆ ದಶಕದ ವಿಳಂಬದಿಂದ ಯೋಜನಾ ವೆಚ್ಚವು ₹ 330 ಕೋಟಿಯಿಂದ ₹ 600 ಕೋಟಿಗೆ ಹೆಚ್ಚಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅವರ ಸಹೋದರ ಡಿ.ಕೆ.ಸುರೇಶ್, ಜೆಡಿಎಸ್‌ನ ಕುಮಾರಸ್ವಾಮಿ ಮತ್ತು ಬಿಜೆಪಿಯ ಕೆಲವು ಮಾಜಿ ಸಚಿವರು ಈ ಜಿಲ್ಲೆಯ ಮೇಲೆ ಹಿಡಿತ ಸಾಧಿಸಲು ಹಾತೊರೆಯುತ್ತಿರುವುದರಿಂದ ನಡೆದಿರುವ [illegible] ಯೋಜನೆ [illegible]. ಕನಕಪುರಕ್ಕೆ ಮಂಜೂರಾಗಿದ್ದ ವೈದ್ಯಕೀಯ ಕಾಲೇಜನ್ನು ಹಿಂದಿನ ವೈದ್ಯಕೀಯ ಶಿಕ್ಷಣ ಸಚಿವ ಕೆ.ಸುಧಾಕರ್ ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರವಾಗುವಂತೆ ನೋಡಿಕೊಂಡರು. ಆರ್‌ಜಿಯುಎಚ್‌ಎಸ್ ಕ್ಯಾಂಪಸ್‌ನಲ್ಲಿ ತಲೆ ಎತ್ತಬೇಕಿದ್ದ ವೈದ್ಯಕೀಯ ಕಾಲೇಜನ್ನು, ಪ್ರಸ್ತುತ ಕಾಂಗ್ರೆಸ್ ನೇತೃತ್ವದ ಸರ್ಕಾರ ಕನಕಪುರಕ್ಕೆ ಸ್ಥಳಾಂತರಿಸಿದೆ. ಈ ಸ್ಥಳಾಂತರಕ್ಕೆ ವಿರೋಧ ವ್ಯಕ್ತವಾಗಿದ್ದು, ರಾಮನಗರ ಬಂದ್ ಕೂಡ ನಡೆಸಲಾಗಿದೆ. ಈ ಮಧ್ಯೆ, 'ವಿಶ್ವವಿದ್ಯಾಲಯದ ಜೊತೆಗೆ ವೈದ್ಯಕೀಯ ಕಾಲೇಜನ್ನು ಸಹ ಅರ್ಚಕರಹಳ್ಳಿಯ ಕ್ಯಾಂಪಸ್ಸಿನಲ್ಲೇ ನಿರ್ಮಿಸಬೇಕು. ಕಾಲೇಜನ್ನು ಕನಕಪುರಕ್ಕೆ ಸ್ಥಳಾಂತರ ಮಾಡುವುದಾದರೆ, ನಮ್ಮ ಭೂಮಿ ವಾಪಸ್ ಕೊಡಬೇಕು' ಎಂದು ಆಗ್ರಹಿಸಿರುವ ಅರ್ಚಕರಹಳ್ಳಿ ಭಾಗದ ರೈತರು, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಅಭಿವೃದ್ಧಿ ವಿಷಯದಲ್ಲಿ ಕ್ಷುಲ್ಲಕ ರಾಜಕೀಯವನ್ನು ಸುಳಿಯಗೊಡದೆ ಕಾಮಗಾರಿ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಎಲ್ಲ ಪಕ್ಷಗಳ ನಾಯಕರ ಹೊಣೆ. ಲೋಪ ತಿದ್ದಿಕೊಂಡು, ವಿಶ್ವವಿದ್ಯಾಲಯದ ಸಂಕೀರ್ಣ ಈಗಲಾದರೂ ಬೇಗ ನಿರ್ಮಾಣವಾಗುವಂತೆ ಎಲ್ಲರೂ ಸಹಕರಿಸಬೇಕು.

ದಿನದ ಟ್ವೀಟ್

ಸ್ವಚ್ಛತೆಯೇ ಮೂಲಮಂತ್ರ

ಆರೋಗ್ಯಕರ ಪರಿಸರವು ಸ್ವಚ್ಛವಾದ ಪರಿಸರದ ಮೂಲಕ ಆರಂಭವಾಗುತ್ತದೆ... ಭಾರತವನ್ನು ಸ್ವಚ್ಛವಾಗಿ ಇಡೋಣ...
#SwachhBharat



ರಜನಿಕಾಂತ್, ಚಲನಚಿತ್ರನಟ

ಕಿಡಿನುಡಿ

ಬಿಜೆಪಿ ಮತ್ತು ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಸಾಮಾನ್ಯ ಜನರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹದಗೆಟ್ಟ ರಸ್ತೆ, ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ, ಶುದ್ಧ ಕುಡಿಯುವ ನೀರು ಹಾಗೂ ಆರೋಗ್ಯ ಸೌಲಭ್ಯಗಳ ಕೊರತೆಯಂತಹ ಸಮಸ್ಯೆಗಳಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ. ಆದರೆ, ಇವು ಚುನಾವಣಾ ವಿಷಯಗಳಾಗುತ್ತವೆಯೇ ಎಂದು ಹೇಳಲಾಗದು.



ಮಾಯಾವತಿ, ಮುಖ್ಯಸ್ಥೆ, ಬಹುಜನ ಸಮಾಜವಾದಿ ಪಕ್ಷ (ಬಿಎಸ್‌ಪಿ)

25 ವರ್ಷಗಳ ಹಿಂದೆ

ಶುಕ್ರವಾರ, 2-10-1998

● **ಕಡೆಗೂ ಅದ್ದೂರಿ ಜಂಬೂ ಸವಾರಿ: ಲಕ್ಷಾಂತರ ಜನರ ವೀಕ್ಷಣೆ**

ಮೈಸೂರು, ಅ. 1– ಕಡೇ ಗಳಿಗೆಯ ಅಡಚಣೆಗಳ ನಡುವೆಯೂ ದಸರಾ ಜಂಬೂ ಸವಾರಿ ಇಂದು ಮಧ್ಯಾಹ್ನ ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಆರಂಭವಾಯಿತು. ನಂತರ ಸುಸೂತ್ರವಾಗಿ ನಡೆಯಿತು.

ಆನೆ 'ಬಲರಾಮ'ನ ಮೇಲೆ ಚಿನ್ನದ ಅಂಬಾರಿಯನ್ನು ಕಟ್ಟಲು ಬೇಕಾದ ಹಗ್ಗವನ್ನು ಕೊಡಲು ಕಡೇ ಗಳಿಗೆವರೆಗೂ ಸತಾಯಿಸಿದ ಅರಮನೆ ಸಿಬ್ಬಂದಿಯಿಂದ ಅಂಬಾರಿಯನ್ನು ಸರಿಯಾಗಿ ಕಟ್ಟಲಾಗದೆ, ಎರಡನೆಯ ಬಾರಿ ಅದರ ಸಿದ್ಧತೆ ಮೊದಲಾದ ಅಡಚಣೆಗಳು ಎದುರಾದವು. ಬೆಳಿಗ್ಗೆಯೇ ಮೈಸೂರಿನಲ್ಲಿ ಹಬ್ಬದ ಸಡಗರ. ಮಧ್ಯಾಹ್ನ ಅರಮನೆಯ ಬಲರಾಮ ದ್ವಾರದಲ್ಲಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ವಿಜಯದಶಮಿಯ ದಿನವಾದ ಇಂದು ಜಂಬೂ ಸವಾರಿಗೆ ಚಾಲನೆ ನೀಡಿದರು.

● **ದೋಣಿ ಮುಳುಗಿ ರಾಜ್ಯದ 16 ಯಾತ್ರಿಗಳ ಸಾವು**

ನವದೆಹಲಿ, ಅ. 1– ಉತ್ತರ ಭಾರತದ ಪ್ರವಾಸಕ್ಕೆ ಬಂದಿದ್ದ ಕರ್ನಾಟಕದ 36 ಮಂದಿ ಯಾತ್ರಾರ್ಥಿಗಳಿದ್ದ ದೋಣಿಯೊಂದು ಬುಧವಾರ ಬೆಳಿಗ್ಗೆ ವಾರಾಣಸಿಯ ಗಂಗಾ ನದಿಯಲ್ಲಿ ಮುಳುಗಿದ ದುರಂತದಲ್ಲಿ 16 ಮಂದಿ ಸತ್ತಿರುವುದಾಗಿ ಶಂಕಿಸಲಾಗಿದೆ.

ಏಳು ಮಂದಿಯ ಮೃತದೇಹಗಳನ್ನು ಪತ್ತೆಹಚ್ಚಲಾಗಿದೆ. ಇನ್ನೂ ಒಂಬತ್ತು ಮಂದಿ ಕಣ್ಮರೆಯಾಗಿದ್ದು ಅವರ ಮೃತದೇಹಗಳನ್ನು ಪತ್ತೆ ಹಚ್ಚುವ ಕಾರ್ಯ ನಡೆದಿದೆ.

ಗಂಗಾ ನದಿಯ ಶಿರಾಲ ಘಾಟ್ ಬಳಿ ದೋಣಿ ಹೋಗುವಾಗ ನೀರಿನ ರಭಸ ಹೆಚ್ಚಾಗಿ ಸೇತುವೆಯ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದು ಮುಳುಗಿತು.

50 ವರ್ಷಗಳ ಹಿಂದೆ

ಮಂಗಳವಾರ, 2-10-1973

● **ಆರು ಅಂಶಗಳ ಸೂತ್ರಕ್ಕೆ ಪ್ರತ್ಯೇಕತಾವಾದಿ ಆಂಧ್ರ ಕಾಂಗ್ರೆಸ್ ಕ್ರಿಯಾ ಸಮಿತಿ ಸರ್ವಾನುಮತದ ಒಪ್ಪಿಗೆ**

ಹೈದರಾಬಾದ್, ಅ. 1– ಪ್ರತ್ಯೇಕತಾವಾದಿ ಆಂಧ್ರ ಕಾಂಗ್ರೆಸ್ ಕ್ರಿಯಾ ಸಮಿತಿಯು ಇಂದು ಐದೂವರೆ ಗಂಟೆಗಳ ಸುದೀರ್ಘ ಚರ್ಚೆಯ ನಂತರ, ಆಂಧ್ರ ಸಮಸ್ಯೆಗೆ ಕೇಂದ್ರ ನೀಡಿರುವ ಆರು ಅಂಶಗಳ ಸೂತ್ರಕ್ಕೆ ಸರ್ವಾನುಮತದ ಅಂಗೀಕಾರ ನೀಡಿದೆ.

ಆಂಧ್ರ ಕಾಂಗ್ರೆಸ್ ಕ್ರಿಯಾ ಸಮಿತಿ ಹಾಗೂ ಮಾಜಿ ಉಪಮುಖ್ಯಮಂತ್ರಿ ಬಿ.ವಿ.ಸುಬ್ಬಾರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ 70 ಮಂದಿ ವಿಧಾನಸಭಾ ಸದಸ್ಯರೂ 20 ಮಂದಿ ವಿಧಾನಪರಿಷತ್ತಿನ ಸದಸ್ಯರೂ 7 ಮಂದಿ ಸಂಸತ್ ಸದಸ್ಯರೂ ಜಿಲ್ಲಾ ಪರಿಷತ್ತಿನ ಒಬ್ಬ ಅಧ್ಯಕ್ಷರೂ 65 ಮಂದಿ ಪಂಚಾಯಿತಿ ಸದಸ್ಯರೂ ಹಾಜರಿದ್ದರು.

ನಿರ್ಣಯವನ್ನು ಆಂಧ್ರ ಕಾಂಗ್ರೆಸ್ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ವಿ. ಕೃಷ್ಣಮೂರ್ತಿ ಅವರು ಮಂಡಿಸಿದರು.

● **ಉನ್ನತ ಶಿಕ್ಷಣದ ಸುಧಾರಣೆಗಾಗಿ ಕಾಲೇಜುಗಳಿಗೆ ಸ್ವಾಯತ್ತತೆ: ವಿಶ್ವವಿದ್ಯಾನಿಲಯಗಳಿಗೆ ಶಿಫಾರಸು**

ನವದೆಹಲಿ, ಅ. 1– ಉನ್ನತ ಶಿಕ್ಷಣದ ಸುಧಾರಣೆಯತ್ತ ಮಹತ್ವದ ಕ್ರಮವಾಗಿ ವಿಶ್ವವಿದ್ಯಾನಿಲಯಗಳು ತಮ್ಮ ಅಧೀನದಲ್ಲಿನ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ತತ್ವವನ್ನು ಅನುಷ್ಠಾನಕ್ಕೆ ತರಬೇಕೆಂದು ವಿಶ್ವವಿದ್ಯಾನಿಲಯಗಳ ಧನ ವಿನಿಯೋಗ ಆಯೋಗವು ಶಿಫಾರಸು ಮಾಡಿದೆ.

ಮಹಾತ್ಮನ 'ಕರ್ಮಪ್ರಪಂಚ'ದಲ್ಲಿ ಇಂದಿಗೂ ಪ್ರಮುಖ ಎನಿಸುವ ಅನೇಕ ಸಂಗತಿಗಳಿವೆ

ಅಹಿಂಸೆ ಎನ್ನುವ ಗಾಂಧಿ ತತ್ವಪಥ



ವಿಶ್ಲೇಷಣೆ

ರಾಜಾರಾಮ ತೋಳ್ಪಾಡಿ
ನಿತ್ಯಾನಂದ ಬಿ. ಶೆಟ್ಟಿ

ಒಂದು ಪ್ರದೇಶವಾಗಿ, ದೇಶವಾಗಿ ಮತ್ತು ವಿಶ್ವವಾಗಿ ನಾವಿಂದು ಅನುಭವಿಸುತ್ತಿರುವ ಸಂಕಷ್ಟಗಳು ಒಂದಲ್ಲ, ಎರಡಲ್ಲ. ಅಸಂಖ್ಯಾತ ವೈರುಧ್ಯಗಳಿಂದ ಕೂಡಿದ ಈ ನಮ್ಮ ಸಮಾಜವನ್ನು ಮೈತ್ರಿಯ ಬೆಸುಗೆಯಲ್ಲಿ ಬೆಸೆಯಲು ಅನೇಕ ಮಹನೀಯರು, ಧೀಮಂತರು ಪ್ರಯತ್ನ ನಡೆಸಿದ್ದಾರೆ. ಅಂಥವರಲ್ಲಿ ಪ್ರೀತಿಯಿಂದ ಬಾಪೂ ಎಂದೂ ಗೌರವದಿಂದ ಮಹಾತ್ಮ ಎಂದೂ ನಾವು ಕರೆಯುವ ಮೋಹನದಾಸ ಕರಮಚಂದ ಗಾಂಧಿ ಅವರನ್ನು ನೆನಪಿಸಿಕೊಳ್ಳುವ ದಿನ ಇದು.

ತಾತ್ವಿಕವಾಗಿ ದಟ್ಟವಾದ ಗಾಂಧೀಜಿಯವರ 'ಚಿಂತನವಿಶ್ವ' ಹಾಗೂ ಅದರಿಂದ ಬೇರ್ಪಡಿಸಲಾಗದ ಅವರ 'ಕರ್ಮಪ್ರಪಂಚ'ದಲ್ಲಿ ಗಹನವಾದ ಮತ್ತು ಇಂದಿನ ನಮ್ಮ ಸಂಕಷ್ಟದ ಕಾಲದಲ್ಲಿ ಪ್ರಮುಖವಾಗುವ ಅನೇಕ ಸಂಗತಿಗಳಿವೆ. ಈ ಕುರಿತು ವಿಶ್ವದಾದ್ಯಂತ ಗಂಭೀರವಾದ ಅಧ್ಯಯನಗಳೂ ನಡೆದಿವೆ.

ಗಾಂಧಿಯವರ ಚಿಂತನಶೀಲ, ಕ್ರಿಯಾಶೀಲ ಬಾಳ್ವೆಯಲ್ಲಿ ಅಹಿಂಸೆ ಪ್ರತ್ಯೇಕವಾದುದಲ್ಲ. ಅದವರ ಬದುಕಿನ ಜೀವಧಾತು. ಒಂದರ್ಥದಲ್ಲಿ ಗಾಂಧಿಯವರ ಈ ವಿಶ್ವನೋಟವು ಸಮಗ್ರ ನೋಟವೂ ಹೌದು. ಗಾಂಧಿಯವರ ಚಿಂತನೆಯ ಜಗತ್ತಿನಲ್ಲಿ ಹಾಸುಹೊಕ್ಕಂತಿರುವ ಅಹಿಂಸೆಯು ತತ್ವವೂ ಹೌದು, ಪಥವೂ ಹೌದು, ವಿಚಾರವೂ ಹೌದು, ಆಚಾರವೂ ಹೌದು, ಸಾಧನೆಯೂ ಹೌದು, ಸಾಧನವೂ ಹೌದು. ಗಾಂಧಿಯವರ ಪ್ರಕಾರ, ಅಹಿಂಸೆಯೆಂದರೆ ಮೈತ್ರಿ. ನಮ್ಮ ಸುತ್ತಲಿನ ಚರಾಚರ ಪ್ರಪಂಚದ ಜೊತೆಗೆ ನಮಗಿರುವ ಅವಿನಾಭಾವ ಸಂಬಂಧ ಮತ್ತು ಅದರ ಅರಿವು. ಹಾಗೆಯೇ ಅಹಿಂಸೆಯೆಂದರೆ ಸಾಮುದಾಯಿಕ ಸಹಬಾಳ್ವೆಯಲ್ಲೇ ಸಾರ್ಥಕ್ಯವನ್ನು ಕಂಡುಕೊಳ್ಳುವುದು. ಜೊತೆಗೆ ಅಹಿಂಸೆಯೆಂದರೆ ಕಾಯಕದ ಕುರಿತು ನಮಗಿರಬೇಕಾದ ನಿಷ್ಠೆ ಮತ್ತು ಶಿಸ್ತು. ಕೊನೆಯದಾಗಿ, ಅಹಿಂಸೆಯೆಂದರೆ ಅಧಿಕಾರದ ಎದುರು ಮತ್ತು ಸತ್ಯದ ಪರವಾಗಿ ದಿಟ್ಟತನದಿಂದ ನಿಲ್ಲುವ ಸ್ಥೈರ್ಯ.

ಗಾಂಧಿಯವರ ಬಗ್ಗೆ ಆಳವಾದ ಅಧ್ಯಯನ ನಡೆಸಿದ ಇತಿಹಾಸಕಾರ ವಿನಯಲಾಲ್, ಅಹಿಂಸೆಯ ಕುರಿತು ಮಹತ್ವದ ಸಂಗತಿಯೊಂದನ್ನು ಪ್ರಸ್ತಾಪಿಸುತ್ತಾರೆ. ಗಾಂಧಿಯವರಿಗೆ ಅಹಿಂಸೆಯೆಂದರೆ ಹಿಂಸೆಯ ಗೈರುಹಾಜರಿಯಷ್ಟೇ ಅಲ್ಲ, ಬದುಕಿನ ಶ್ರದ್ಧಾಕೇಂದ್ರವೂ ಹೌದು. ಗಾಂಧಿಯವರ ಈ ತಿಳಿವನ್ನು ಕ್ರೈಸ್ತ ತತ್ವಜ್ಞಾನಿ ಸಂತ ಆಗಸ್ಟಿನ್‌ನ (354- 430) 'ಒಳಿತಿನ' ಕಲ್ಪನೆಯ ಜೊತೆ ವಿನಯಲಾಲ್ ಹೋಲಿಸುತ್ತಾರೆ. ಆಗಸ್ಟಿನ್‌ಗೆ ಒಳಿತು ಎಂದರೆ ಕೆಡುಕಿನ ಅನುಪಸ್ಥಿತಿ ಮಾತ್ರವಲ್ಲ, ಅದೊಂದು ಸಕಾರಾತ್ಮಕವಾದ ನೈತಿಕ, ಆಧ್ಯಾತ್ಮಿಕ ನೋಟವೂ ಹೌದು. ಗಾಂಧಿಯವರ ಅಹಿಂಸೆಯ ಕುರಿತಾದ ಶ್ರದ್ಧೆಗೂ ಆಗಸ್ಟಿನ್‌ನ ಒಳಿತಿನ ಕುರಿತಾದ ಆಧ್ಯಾತ್ಮಿಕ ನೋಟಕ್ಕೂ ಇರುವ ಸಹಸಂಬಂಧ ಅಚ್ಚರಿ ಹುಟ್ಟಿಸುವಂಥದ್ದೇನಲ್ಲ. ಪಶ್ಚಿಮದ ಅನೇಕ ಕ್ರೈಸ್ತ ಧರ್ಮೀಯ ಚಿಂತಕರಿಂದ ಆಳವಾದ ಪ್ರಭಾವವನ್ನು ಪಡೆದಿರುವ ಗಾಂಧಿಯವರಿಗೆ ನೇರವಾಗಿಯೋ ಪರೋಕ್ಷವಾಗಿಯೋ ಆಗಸ್ಟಿನ್‌ನ ಈ ಆಧ್ಯಾತ್ಮಿಕ ನೋಟ ತಲುಪಿರುವುದು ಸಹಜವೇ ಆಗಿದೆ.

ಈ ಮಾತುಗಳ ಆಧಾರದಲ್ಲಿ ಗಾಂಧಿಯವರ ಚಿಂತನೆಯನ್ನು ಪರಿಶೀಲಿಸುವುದಾದರೆ, ಅಹಿಂಸೆ ಎಂಬುದು ಗಾಂಧಿಯವರಿಗೆ ವಿಶೇಷವಾದ ಆಧ್ಯಾತ್ಮಿಕ ಅನುಭೂತಿ. ತಮ್ಮ ಕ್ರಿಯಾಶೀಲ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ಹಾಗೂ ನಿರ್ದಿಷ್ಟ ರಾಜಕೀಯ ಒತ್ತಡಗಳ ಸಮಕ್ಷಮದಲ್ಲಿ ಚಿಗುರೊಡೆದ ಗಾಂಧಿಯವರ ಅಹಿಂಸೆಯೆನ್ನುವ ತತ್ವಪಥವು ಮನುಷ್ಯನ ಬದುಕನ್ನು ಆವರಿಸಿರುವ ಹಿಂಸೆಯನ್ನು ಬದಿಗೆ ಸರಿಸಿ ನಿಲ್ಲುವ ನೈತಿಕ ಊರುಗೋಲು ಕೂಡ ಹೌದು. ದಕ್ಷಿಣ ಆಫ್ರಿಕಾದಲ್ಲಿನ ತಮ್ಮ ಸಂಘರ್ಷಮಯ ರಾಜಕಾರಣದಿಂದ ಆರಂಭಿಸಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಏಳುಬೀಳುಗಳಲ್ಲಿ ವಿಕಾಸ ಹೊಂದಿ, ಭಾರತ ವಿಭಜನೆಯ ಕಡುಹಿಂಸೆಯ ಅಗ್ನಿಕುಂಡದಲ್ಲಿ ತಾತ್ವಿಕವಾಗಿ ಸೂಕ್ಷ್ಮಗೊಂಡ ಗಾಂಧಿಯವರ ಅಹಿಂಸೆಯ ಕುರಿತಾದ ಕಾಣ್ಕೆಯನ್ನು ಒಂದರ್ಥದಲ್ಲಿ ಘೋರ ತಪಸ್ಸಿನ ಕೊನೆಗೆ ಸಂತನೊಬ್ಬ ಗಳಿಸಿಕೊಳ್ಳುವ ಸಾಕ್ಷಾತ್ಕಾರವೂ ಹೌದು ಎಂದು ಪರಿಭಾವಿಸಬಹುದು. ಹಾಗೆಯೇ ಬುದ್ಧನಂತೆ ಅಥವಾ ಜೀಸಸ್‌ನಂತೆ ಮನುಷ್ಯ ಬದುಕಿನ ಕಷ್ಟ-ಕೋಟಲೆಗಳ ನಡುವೆ ದಕ್ಕಿಸಿಕೊಂಡ ಲೋಕಾನುಭೂತಿಯೆಂದೂ ತಿಳಿದುಕೊಳ್ಳಬಹುದು.

ಅಹಿಂಸೆಯ ಕುರಿತಾದ ಗಾಂಧಿಯವರ ಚಿಂತನೆಯನ್ನು ಪಶ್ಚಿಮದ ಮತ್ತೊಬ್ಬ ಪ್ರಮುಖ ದಾರ್ಶನಿಕ ಇಮಾನ್ಯುವೆಲ್ ಕಾಂಟ್‌ನ (1724-1804) ವಿಶೇಷವಾದ ಲೌಕಿಕ ಅನುಭೂತಿಯೊಂದರ ಜೊತೆಗೂ ಹೋಲಿಸಬಹುದಾಗಿದೆ. ಕಾಂಟ್‌ನ ಅತ್ಯಂತ ಅಮೂರ್ತವಾದ ತತ್ವಜ್ಞಾನ ಮತ್ತು ಗಾಂಧಿಯವರ ಅನುಭವನಿಷ್ಠವಾದ ಅಹಿಂಸೆಯ ರಾಜಕಾರಣ ಸಂಪೂರ್ಣವಾಗಿ ಭಿನ್ನಭಿನ್ನವಾದವು. ಹಾಗಿದ್ದರೂ ಗಾಂಧಿಯವರು ಅಹಿಂಸೆಗೆ ನೀಡಿರುವ ಮಹತ್ವವನ್ನು ಅರಿಯಲು ಈ ಹೋಲಿಕೆಯನ್ನು ಮಾಡುವುದು ಸೂಕ್ತ. ದಾರ್ಶನಿಕ ಚಳವಳಿಯ (ದಿ ಎನ್‌ಲೈಟನ್‌ಮೆಂಟ್) ಸಂದರ್ಭದ ಮಹತ್ವದ ತತ್ವಜ್ಞಾನಿಯಾದ ಕಾಂಟ್, ತನ್ನ ಕಣ್ಣೆದುರಿನಲ್ಲೇ ಧರ್ಮವು ಅದರ ಪಾರಮ್ಯವನ್ನು ಕಳೆದುಕೊಂಡಾಗ ಮನುಷ್ಯನ ಬದುಕನ್ನು ಸಂತೈಸಬಲ್ಲ, ಸಲಹಬಲ್ಲ, ವಿಘಟನೆಯ ವಿನಾಶದಿಂದ ರಕ್ಷಿಸಬಲ್ಲ ತತ್ವ ಯಾವುದು ಎನ್ನುವ ಕುರಿತು ಆಳವಾಗಿ ಚಿಂತನೆ ನಡೆಸುತ್ತಾನೆ. ಆತನ ಪ್ರಕಾರ 'ನ್ಯಾಯ'ವೇ ಧರ್ಮಕ್ಕೆ ಬದಲಿಯಾಗಬಲ್ಲ ಪರಮೋಚ್ಚ ಪ್ರಶ್ನಾತೀತ ತತ್ವ.



ಕಾಂಟ್ ತನ್ನ ಚಿಂತನೆಯಲ್ಲಿ ಕಂಡುಕೊಂಡ ನ್ಯಾಯವೆನ್ನುವ ತತ್ವದಂತೆಯೇ ಗಾಂಧಿ ತಮ್ಮ ಕಣ್ಣಮುಂದಿನ ಸುಡುವಾಸ್ತವ ಪ್ರಪಂಚದ ಅನುಭವದ ಹಿನ್ನೆಲೆಯಲ್ಲಿ ಕಂಡುಕೊಂಡ ಪ್ರಶ್ನಾತೀತ ತತ್ವವೇ ಅಹಿಂಸೆ. ಈ ಮಾತಿನ ಅರ್ಥ, ಗಾಂಧಿಯವರು ಕಾಂಟ್‌ನನ್ನು ತಿಳಿದುಕೊಂಡಿದ್ದರೆಂದಾಗಲೀ ಅಥವಾ ಕಾಂಟ್‌ನ ವಿಚಾರಗಳಿಂದ ಪ್ರಭಾವಿತರಾಗಿದ್ದರೆಂದಾಗಲೀ ಅಲ್ಲ. ಯಾವುದೇ ಶ್ರೇಷ್ಠ ವಿಚಾರವು ಯಾವುದೇ ಕಾಲಕ್ಕೆ ಯಾವುದೇ ಚಿಂತಕನಿಗೆ ಸೀಮಿತವಾಗಿ ಇರುವುದಿಲ್ಲ. ಮಾನವ ಚಿಂತನೆಯ ಶ್ರೇಷ್ಠ ಕಾಣ್ಕೆಗಳು ವಿಭಿನ್ನ ಕಾಲಘಟ್ಟಗಳಲ್ಲಿ, ವಿಭಿನ್ನ ಚಿಂತಕರುಗಳಲ್ಲಿ ವಿಶಿಷ್ಟ ರೀತಿಯಲ್ಲಿ ಮರು ಅಭಿವ್ಯಕ್ತಿಯನ್ನು ಪಡೆಯುತ್ತವೆ. ಈ ಅರ್ಥದಲ್ಲಿ, ಹದಿನೆಂಟನೆಯ ಶತಮಾನದ ಕಾಂಟ್‌ನಿಗೂ ಇಪ್ಪತ್ತನೆಯ ಶತಮಾನದ ಗಾಂಧಿಗೂ ನಂಟು ಇರಲು ಸಾಧ್ಯ.

ಭಾರತೀಯ ಸಮಾಜದಲ್ಲಿ ಅಹಿಂಸೆಯನ್ನು ಒಂದು ತತ್ವವಾಗಿ ಮತ್ತು ಕ್ರಿಯೆಯಾಗಿ ಪರಿಚಯಿಸುವಾಗ ಗಾಂಧಿ ಅವರಿಗಿದ್ದ ಸ್ಪಷ್ಟತೆ ಅನೇಕ ಬಾರಿ ದಿಟ್ಟವಾಗಿಯೇ ವ್ಯಕ್ತಗೊಂಡಿದೆ. ಆ ಅರಿವು ಏನೆಂದರೆ, ಮನುಷ್ಯರು ಒಂದು ಸಾಮಾಜಿಕ ಸಂಬಂಧದಲ್ಲಿದ್ದಾಗ ಮಾಡುವ ಯಾವುದೇ ಕೆಲಸ, ಅವರಿರುವ ಇತರ ಸಾಮಾಜಿಕ ಸಂಬಂಧಗಳ ಮೇಲೂ ಪರಿಣಾಮವನ್ನು ಬೀರುತ್ತದೆ ಎಂಬುದು. ಇದನ್ನು ವಿವರಿಸುವುದಾದರೆ, ನಮ್ಮಲ್ಲಿ ಅಧಿಕ ಮುಖಬೆಲೆಯ ನೋಟು ರದ್ದತಿ ಮಾಡಲಾಯಿತು. ಇದರಿಂದ ದೇಶದ ಬಡಪಾಯಿಗಳನೇಕರು ಪಡಬಾರದ ಕಷ್ಟ ಅನುಭವಿಸಿದರು. ನೋವಿಗೆ ಕಾರಣರಾದವರು ನೋವನ್ನು ಅನುಭವಿಸುತ್ತಾರೋ ಇಲ್ಲವೋ ಆದರೆ ಉಳಿದವರೆಲ್ಲರೂ ಅನುಭವಿಸಬೇಕಾಗುತ್ತದೆ. ಇದು ಪಕ್ಕಾ ಸಾಮುದಾಯಿಕ ಪರಿಕಲ್ಪನೆ. 'ಬೇರೆಯವರು ಮಾಡಿದ ಅನ್ಯಾಯಕ್ಕೆ ನಾನೂ ಹೊಣೆಗಾರ' ಎಂಬ ಜವಾಬ್ದಾರಿ. ಅಹಿಂಸೆಯ ಹಿಂದೆ ಇರುವುದು ಇಂತಹ ಸಾಮುದಾಯಿಕ ಚಿಂತನೆ. 'ಇಡಿಯ ವಿಶ್ವ ನನ್ನ ಭಾಗ. ನಾನು ವಿಶ್ವದ ಒಂದು ಭಾಗ' ಎಂಬ ಆಧ್ಯಾತ್ಮಿಕ ತಿಳಿವಳಿಕೆಯಿಂದ ಗಾಂಧಿಯವರ ಅಹಿಂಸೆಯ ಚಿಂತನೆ ಹೊರಹೊಮ್ಮಿದೆ.

ಗಹನವಾದ ಸಾಧನೆಗಾಗಿ ಗಾಂಧಿ ಅಹಿಂಸೆಯ ರಾಜಕಾರಣ ಮಾಡಿದರು. ಅವರ ಧ್ಯೇಯವು ಲೋಕದ ಒಳಿತು ಸಾಧಿಸುವುದು. ಆದರೆ ಗಾಂಧಿಯವರು ಮಾಡಲು ಒದ್ದಾಡಿದ ಈ ಒಳಿತಿನ ಬಗ್ಗೆ ಭಾರತದ ಒಳಗೆ ಭಿನ್ನಮತಗಳಿದ್ದವು. ಗಾಂಧಿಯವರು ತಮ್ಮ ಕಾರ್ಯದ ಬಗ್ಗೆ ಹೇಗೆ ಮತ್ತು ಏನು ಯೋಚನೆ ಮಾಡುತ್ತಿದ್ದರೋ ಹಾಗೆಯೇ ಉಳಿದವರೂ ಅವರನ್ನು ನೋಡಬೇಕೆಂದೇನೂ ಇಲ್ಲವಲ್ಲ. ಹಾಗಾಗಿ, ಕೆಲವು ಗುರುತಿಸುವಿಕೆಗಳು ಸಾಮಾಜಿಕ ಸಂಬಂಧಗಳಲ್ಲಿ ಅಪಗುರುತಿಸುವಿಕೆ ಆಗುತ್ತವೆ. ಇವನ್ನು 'ಮಿಸ್ ರೀಡಿಂಗ್'ಗಳು ಅಥವಾ 'ಡಿಫರೆಂಟ್ ರೀಡಿಂಗ್'ಗಳು ಎಂದೂ ಹೇಳಬಹುದು.

ಇಂತಹ ಭಿನ್ನ ಓದುಗಳಲ್ಲಿ ಒಂದು ಬಗೆಯ ಓದು ಗಾಂಧಿಯವರ ಹತ್ಯೆ ಮಾಡಿದೆ, ಇನ್ನೊಂದು ದ್ವೇಷಿಸಿದೆ, ಮತ್ತೊಂದು ಟೀಕಿಸಿದೆ, ಇನ್ನು ಕೆಲವು ಗಾಂಧಿಯವರನ್ನು ವಿಮರ್ಶಿಸಿವೆ ಮತ್ತು ಕೆಲವು ಗಾಂಧಿಯವರನ್ನು ಚಾರಿತ್ರಿಕವಾಗಿ ಮರುನಿರೂಪಿಸಿವೆ. ಓದಿನ ಈ ಬಹುರೂಪವು ಅಹಿಂಸೆಯನ್ನು ಮಾತ್ರವಲ್ಲ, 'ಚಿಂತನೆ' ಎಂಬ ಬೌದ್ಧಿಕ ಕೆಲಸದ ಬಗೆಗೂ 'ಚಿಂತನೆ' ನಡೆಸುವಂತೆ ನಮ್ಮನ್ನು ಒತ್ತಾಯಿಸುವಂತಿದೆ.

ಚುರುಮುರಿ



ಪಂಚವಾರ್ಷಿಕ ಸಂಕಲ್ಪ

● ಸುಮಂಗಲಾ

ಭಾನುವಾರ ಬೆಕ್ಕಣ್ಣ ನನಗೆ ಉದ್ದ ಕಸಬರಿಕೆ ಕೊಟ್ಟು, 'ನಾ ಮನಿವಳಗ ಸ್ವಚ್ಛ ಮಾಡತೀನಿ, ಹತ್ತು ಗಂಟೆಗೆ ಸ್ವಚ್ಛತಾ ಆಂದೋಲನ ಮಾಡ್ತಾರಲ್ಲ, ನೀ ಅದ್ರಾಗೆ ಭಾಗವಹಿಸು' ಎಂದು ಒತ್ತಾಯ ಮಾಡಿ ಮನೆಯಿಂದ ಹೊರದಬ್ಬಿತು.

ನಾನು ಹೊರಹೋಗಿ, ಎಲ್ಲರ ಜೊತೆ ನಾಕಾರು ಪ್ಲಾಸ್ಟಿಕ್ ಬಾಟಲಿ, ಹಳೇ ಪೇಪರಿನ ತುಣುಕುಗಳನ್ನು ಆರಿಸಿ, ಫೋಟೊಗೆ ಪೋಸು ಕೊಟ್ಟು ಒಳಬಂದೆ. ಹಳೇ ಪೇಪರುಗಳನ್ನು ಜೋಡಿಸಿಡುತ್ತಿದ್ದ ಬೆಕ್ಕಣ್ಣ ಸುದ್ದಿಯೊಂದನ್ನು ಓದುತ್ತ, ಕಣ್ಣೊರೆಸಿಕೊಳ್ಳುವುದು ಕಾಣಿಸಿತು.

'ಹಂತಾಪರಿ ಅಳ್ಳೋತ ಏನ್ ಸುದ್ದಿ ಓದಾಕ ಹತ್ತೀಯಲೇ' ಬೆಕ್ಕಣ್ಣನಿಗೆ ಕಣ್ಣೊರೆಸಿಕೊಳ್ಳಲು ಕರ್ಚೀಫು ಕೊಡುತ್ತ ಕೇಳಿದೆ.

'ನನಗೆ ಸ್ವಂತ ಮನಿ ಇಲ್ಲದಿದ್ದರೂ ಕೋಟ್ಯಂತರ ಮಹಿಳೆಯರಿಗೆ ಮನಿ ಕಟ್ಟಿಸಿಕೊಟ್ಟು, ಮನೆಯೊಡತಿ ಮಾಡೀನಿ ಅಂತ ಮೋದಿಮಾಮಾ ಹೇಳ್ಯಾನ. ಇಡೀ ದೇಶದ ಪ್ರಧಾನಿ, ಪಾಪ... ಅವ್ರಂಗೇ ಮನಿಯಿಲ್ಲ' ಎಂದು ಮತ್ತೆ ಮೂಗಿನಲ್ಲಿ ಸೊರ್ ಸೊರ್ ಸದ್ದು ಮಾಡಿತು.

'ಅವರಿಗೆ ಈಗ ಸದ್ಯಕ್ಕೆ ಸರ್ಕಾರಿ ಬಂಗಲೆ ಐತಲ್ಲ... ಇನ್ನಾ ಎಷ್ಟೋ ವರ್ಷ ನಾನೇ ಪ್ರಧಾನಿಯಾಗಿರತೀನಿ ಅಂತ ಹೇಳತಾನೆ ಇರತಾರಲ್ಲ, ಸರ್ಕಾರಿ ಬಂಗಲೆ ಇದ್ದೇ ಇರತೈತಿ' ಎಂದೆ.

'75 ವರ್ಷ ಆದಮ್ಯಾಗೆ ನಮ್ ಬಿಜೆಪಿವಳಗ ರಿಟೈರ್‌ಮೆಂಟು ಅಂತಿದ್ದರಲ್ಲ, ರಿಟೈರ್ ಆದಮೇಲೆ ಅವರಿಗೆ ಮನಿ ಬೇಕಲ್ಲ' ಬೆಕ್ಕಣ್ಣನಿಗೆ ಅಳುವುಕ್ಕಿತು.

'ಅವರ ಹತ್ರ ಎರಡು ಕೋಟಿ ರೂಪಾಯಿ ಐತೆ ಅಂತ ಪ್ರಧಾನಿ ಕಚೇರಿ ವೆಬ್‌ಸೈಟೇ ಹೇಳತೈತಿ. ಆಮ್ಯಾಗೆ ಒಂದು ಮನಿ ತಗಳತಾರೆ, ನೀ ಎದಕ್ಕ ಅಳತೀ' ಎಂದು ಜೋರು ಮಾಡಿದೆ.

ಕಣ್ಣು, ಮೂಗು ಒರೆಸಿಕೊಂಡ ಬೆಕ್ಕಣ್ಣ 'ಸಂಕಲ್ಪ ಸಪ್ತಾಹ'ದ ಸುದ್ದಿ ಓದುತ್ತ, 'ಮುಂದಿನ ಅಕ್ಟೋಬರಿನಾಗೆ ಸಂಕಲ್ಪ ಸಪ್ತಾಹ ನೋಡಾಕೆ ನಾನೇ ಇರತೀನಿ ಅಂತ ಮೋದಿಮಾಮಾ ಪಂಚವಾರ್ಷಿಕ ಸಂಕಲ್ಪ ಮಾಡ್ಯಾನ. ಮುಂದಿನ ಐದು ವರ್ಷ ಮೋದಿಮಾಮಗೆ ಮನಿಯಿಲ್ಲ ಅನ್ನೂ ಚಿಂತೆಯಿಲ್ಲ' ಎಂದು ಖುಷಿಯಿಂದ ಕುಣಿಯಿತು!

ಸಂಗತ

ಗಿಣ್ಣು ಹಾಲು: ಕೇಳದಿರಿ ಪಾಲು

ಕರು ಹುಟ್ಟಿದ ಅರ್ಧಗಂಟೆಯೊಳಗೆ ಹಾಲು ಕುಡಿಸುವುದು ತುಂಬಾ ಮುಖ್ಯ. ಕರುವಿಗೆ ಸರಿಯಾಗಿ ಹಾಲು ಕುಡಿಸುವಲ್ಲಿ ಚೌಕಾಸಿ ಸಲ್ಲದು

● ಡಾ. ಮುರಳೀಧರ ಕಿರಣಕೆರೆ

'ಡಾಕ್ಟ್ರೇ, ನಮ್ ಹಸು ಬೆಳಿಗ್ಗೆ ಕರು ಹಾಕಿದೆ. ಹಾಲು ತಂದ್ಕೊಡ್ಲಾ? ಮನೇಲಿ ಗಿಣ್ಣು ಮಾಡ್ತೀರಾ?' ಪರಿಚಿತ ರೈತರೊಬ್ಬರು ಕರೆ ಮಾಡಿ ವಿಚಾರಿಸಿದಾಗ, ಆ ಅಭಿಮಾನಕ್ಕೆ ಖುಷಿಯಾದರೂ ಮನದೊಳಗೆ ಕಸಿವಿಸಿ! 'ಬೇಡ' ಎಂದು ಮುಖದ ಮೇಲೆ ಹೊಡೆದ ಹಾಗೆ ಹೇಳಲು ಮನಸ್ಸಾಗಲಿಲ್ಲ. 'ಯಜಮಾನ್ರೇ, ನಮ್ಮನೇಲಿ ಯಾರೂ ಗಿಣ್ಣು ತಿನ್ನಲ್ಲ. ಕರುವಿಗೆ ಗೀಬು (ಗಿಣ್ಣುಹಾಲು) ಚೆನ್ನಾಗಿ ಕುಡಿಸಿ. ಹಾಲು ಹೆಚ್ಚಿಗೆ ಇದ್ರೆ ಮಾತ್ರ ಗಿಣ್ಣಿನ ಬಗ್ಗೆ ಯೋಚ್ನೆ ಮಾಡಿ' ಎಂದೆ.

'ಹೆಣ್ಣುಕರು, ನೋಡಕ್ಕೆ ಬಾಳಾ ಚೆನ್ನಾಗಿದೆ. ಸ್ವಲ್ಪ ಹಾಲು ಉಣ್ಸಿದ್ದೇನೆ. ಜಾಸ್ತಿ ಬಿಟ್ರೆ ಭೇದಿಗೀದಿ ಶುರುವಾಗಿ ಕರು ಉಳ್ಯಲ್ಲ ಅಂತಾಳೆ ಇವ್ಳು. ಗಿಣ್ಣು ಅಂದ್ರೆ ಎಲ್ರಿಗೂ ಇಷ್ಟ ಅಲ್ವಾ ಅದಕ್ಕೆ ಕೇಳಿದ್ದು' ವಿವರಿಸಿದರು ಅವರು.

ಗಿಣ್ಣು ಹಾಲಿನ ಮಹತ್ವದ ಬಗ್ಗೆ ಸಣ್ಣದಾಗಿ ತಿಳಿಹೇಳಿ, ಕರುವಿಗೆ ಅದರ ಅನಿವಾರ್ಯ ಮತ್ತು ಅಗತ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ ಆ ರೈತರಿಗೆ ತಾವು ಮಾಡುತ್ತಿದ್ದ ತಪ್ಪಿನ ಅರಿವಾಗಿತ್ತು.


ಹೌದು, ನಮ್ಮಲ್ಲಿ ಹಲವು ಹೈನುಗಾರರಿಗೆ ಮೊದಲ ಹಾಲು ಅಥವಾ ಗಿಣ್ಣು ಹಾಲಿನ ಪ್ರಾಮುಖ್ಯತೆಯ ಅರಿವಿಲ್ಲ. ಗೀಬು ಕುಡಿಸಿದರೆ ಕರುವಿಗೆ ಹೊಟ್ಟೆ ಹುಳ ಆಗುತ್ತೆ, ಭೇದಿ ಆಗಿ ಸಾಯುತ್ತೆ ಎಂಬಂತಹ ಮೂಢನಂಬಿಕೆಗಳೇ ಹೆಚ್ಚು. ಕರುವಿಗೆ ಸ್ವಲ್ಪ ಮಾತ್ರ ಉಣಿಸಿ, ಮಿಕ್ಕಿದ್ದನ್ನೆಲ್ಲಾ ಕರೆದು ಬೆಲ್ಲ, ರವೆ, ಅವಲಕ್ಕಿ, ಏಲಕ್ಕಿ ಎಂದೆಲ್ಲಾ ಸೇರಿಸಿ ರುಚಿಕಟ್ಟಾದ ಗಿಣ್ಣು ಮಾಡಿ ಬಾಯಿಚಪಲ ತೀರಿಸಿಕೊಳ್ಳುವ ಅಭ್ಯಾಸ. ಇನ್ನು ಇಳುವರಿ ಚೆನ್ನಾಗಿದ್ದರೆ ಬಂಧು-ಮಿತ್ರರಿಗೆಲ್ಲಾ ಹಂಚಿ ಖುಷಿಪಡುವುದೂ ಉಂಟು. ಕೆಲವರು ತಮ್ಮ ಕಾಯದ ಕಾಂತಿ ಹೆಚ್ಚಿಸಿಕೊಳ್ಳುವ ಹಂಬಲದಲ್ಲಿ ಮೈಗೆಲ್ಲಾ ಹಚ್ಚಿಕೊಳ್ಳುತ್ತಾರೆ.

ಪ್ರಕೃತಿಯು ಕರುವಿಗೆಂದೇ ಸೃಷ್ಟಿಸಿದ ಈ ಅತ್ಯಮೂಲ್ಯ ಪರಿಪೂರ್ಣ ಆಹಾರದ ಸಂಪೂರ್ಣ ಹಕ್ಕುಸ್ವಾಮ್ಯ ಕರುವಿಗೆ ಮಾತ್ರ ಸೇರಿದ್ದು. ಅದಕ್ಕೆ ವಂಚಿಸಿ ನಮ್ಮ ಬಾಯಿರುಚಿಗಾಗಿ ಬಳಸಿಕೊಳ್ಳುವುದು ನಿಜಕ್ಕೂ ಅಕ್ಷಮ್ಯ!

ಮನುಷ್ಯ, ಹಸು, ಎಮ್ಮೆ ಸೇರಿದಂತೆ ಸಸ್ತನಿ ವರ್ಗದ ಜೀವಿಗಳಿಗೆಲ್ಲಾ ನಿಸರ್ಗ ನೀಡಿರುವ ಸಂಜೀವಿನಿ ಗಿಣ್ಣು ಹಾಲು. ತುಸು ಹಳದಿ ಬಣ್ಣದಲ್ಲಿದ್ದು ಅಂಟಂಟಾಗಿರುವ ಈ ದ್ರಾವಣ ಪೌಷ್ಟಿಕಾಂಶಗಳ ಆಗರ. ಶರ್ಕರ ಪಿಷ್ಟ, ಮೇದಸ್ಸು, ಕೊಬ್ಬು, ಖನಿಜಾಂಶಗಳು, ಜೀವಸತ್ವಗಳು, ಬೆಳವಣಿಗೆಯ ಪ್ರಚೋದಕಗಳು, ರೋಗನಿರೋಧಕ ಶಕ್ತಿ ಬೆಳೆಸುವ ಪ್ರತಿಕಾಯಗಳು ಗೀಬು ಹಾಲಿನಲ್ಲಿ ಧಾರಾಳವಾಗಿರುತ್ತವೆ. ಹಾಗಾಗಿಯೇ ಇದು ಅಮೃತಕ್ಕೆ ಸಮಾನ. ಈ ವಿಶಿಷ್ಟ ಅಂಶಗಳ ಸಾಂದ್ರತೆ ಕಡಿಮೆಯಾಗುತ್ತಾ ಐದಾರು ದಿನಗಳಲ್ಲಿ ಮಾಮೂಲು ಹಾಲಿನ ರೂಪ ಬರುತ್ತದೆ.

ಕರು ಹುಟ್ಟಿದ ಅರ್ಧಗಂಟೆಯೊಳಗೆ ಹಾಲು ಕುಡಿಸುವುದು ತುಂಬಾ ಮುಖ್ಯ. ಹಾಲಿನಲ್ಲಿರುವ ಎಲ್ಲಾ ಬಗೆಯ ಪೌಷ್ಟಿಕಾಂಶಗಳನ್ನು ಹೀರಿಕೊಳ್ಳಲು ಕರುಳಿನ ಲೋಳ್ಪೊರೆಯಲ್ಲಿ ರಂಧ್ರಗಳಿವೆ. ಅವು ಮೊದಲ ಹನ್ನೆರಡು ಗಂಟೆಗಳವರೆಗೆ ಪೂರ್ಣವಾಗಿ ತೆರೆದುಕೊಂಡಿದ್ದು, ನಂತರದ ಅರ್ಧ ದಿನದಲ್ಲಿ ಮುಚ್ಚಿಕೊಳ್ಳುತ್ತವೆ. ಹಾಗಾಗಿ, ಹುಟ್ಟಿದ ಮೊದಲ ಅರ್ಧಗಂಟೆಯೊಳಗೇ ಗಿಣ್ಣು ಹಾಲು ಕುಡಿಸಲು ಆರಂಭಿಸಬೇಕು. ಇಂತಹ ಕರುಗಳಲ್ಲಿ ಸಹಜವಾಗಿಯೇ ರೋಗ ಪ್ರತಿರೋಧಕ ಶಕ್ತಿ ಪ್ರಬಲವಾಗಿರುತ್ತದೆ. ಅತಿಸಾರ, ಜ್ವರ, ಸೋಂಕುರೋಗಗಳ ಬಾಧೆ ತಟ್ಟದು. ಗಿಣ್ಣು ಹಾಲು ಕುಡಿಸುವುದರಿಂದ ಮೊದಲ ಮಲ ಮೃದುವಾಗಿ ಬೇಗನೆ ಹೊರಬರಲು ಅನುಕೂಲ. ಇದರಿಂದ ಪಚನಕ್ರಿಯೆ ಸರಾಗಗೊಳ್ಳುವುದಲ್ಲದೆ ಜೀರ್ಣಾಂಗಗಳ ಬೆಳವಣಿಗೆ, ಕರುಳಿನ ಅವಶ್ಯಕ ಸೂಕ್ಷ್ಮಾಣುಜೀವಿಗಳ ವೃದ್ಧಿಗೂ ಸಹಾಯಕ.

ಹಸುವೊಂದು ಕರು ಹಾಕಿದಾಗ ಅದರ ಕಸ ಅಥವಾ ಮಾಸು ಸಂಪೂರ್ಣವಾಗಿ ಹೊರಬೀಳುವವರೆಗೆ ಕೆಲವರು ಹಾಲು ಕುಡಿಸುವುದಿಲ್ಲ. ಒಮ್ಮೊಮ್ಮೆ ಹಸು ಕಸ ಹಾಕಲು ಒಂದು ದಿನಕ್ಕೂ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈ ಅವಧಿಯಲ್ಲಿ ಹಾಲು ಕುಡಿಸದಿದ್ದರೆ ಗಿಣ್ಣುಹಾಲಿನ ಪ್ರಯೋಜನ ದಕ್ಕದು. ಕೆಚ್ಚಲನ್ನು ಶುಭ್ರಗೊಳಿಸಿ ಬೇಗನೆ ಹಾಲುಣಿಸುವುದರಿಂದ ಮಾಸು ಬೀಳಲೂ ಅನುಕೂಲ.



ಕರುವಿಗೆ ಹಾಲು ಸರಿಯಾಗಿ ಸಿಗದಿದ್ದರೆ ಬೆಳವಣಿಗೆ ಕುಂಠಿತವಾಗುವುದರಿಂದ ಬೆದೆಗೆ ಬರಲು ಹಲವು ವರ್ಷ ಕಾಯಬೇಕಾಗುತ್ತದೆ. ಸಾಮಾನ್ಯವಾಗಿ ಮೊದಲ ಮೂರ್ನಾಲ್ಕು ತಿಂಗಳು ಚೆನ್ನಾಗಿ ಹಾಲುಂಡು ಉತ್ತಮ ಪೋಷಣೆಯಲ್ಲಿರುವ ಮಿಶ್ರತಳಿ ಹೆಣ್ಣುಗರು ವರ್ಷದೊಳಗೆ ಸಂತಾನೋತ್ಪತ್ತಿ ಸಾಮರ್ಥ್ಯ ಗಳಿಸುತ್ತದೆ! ದೇಸಿ ತಳಿಗಳಲ್ಲಿ ಈ ಅವಧಿಯು ಸ್ವಲ್ಪ ಜಾಸ್ತಿಯಿರುತ್ತದೆ. ಅದೇ ಅಗತ್ಯದಷ್ಟು ಹಾಲು ಕುಡಿಸದಿದ್ದಾಗ ಎರಡು ಮೂರು ವರ್ಷಗಳಾದರೂ ಬೆದೆಗೆ ಬರುವುದಿಲ್ಲ. ಬಂದರೂ ಗರ್ಭಕೋಶದ ಬೆಳವಣಿಗೆ ಸರಿಯಿರದೆ ಗರ್ಭ ಕಟ್ಟಲು ಸತಾಯಿಸುತ್ತದೆ. ಈ ಅನುತ್ಪಾದಕ ಅವಧಿಯ ಸಾಕಾಣಿಕಾ ಖರ್ಚಿನ ಜೊತೆಗೆ ವೈದ್ಯಕೀಯ ವೆಚ್ಚವೂ ಸೇರಿ ರೈತನಿಗೆ ಅಧಿಕ ಹೊರೆಯಾಗುತ್ತದೆ.

ಲಾಭದಾಯಕ ಹೈನುಗಾರಿಕೆಯಲ್ಲಿ ಕರುಗಳ ಹಂತದಿಂದಲೇ ಸರಿಯಾದ ಪಾಲನೆ, ಪೋಷಣೆ ತುಂಬಾ ಮಹತ್ವದ್ದು. ಅದರಲ್ಲೂ ಮೊದಲ ಮೂರ್ನಾಲ್ಕು ತಿಂಗಳು ಕರುಗಳಿಗೆ ಹಾಲು ಕುಡಿಸುವುದು ಭವಿಷ್ಯದಲ್ಲಿ ಲಾಭಕ್ಕೆ ಠೇವಣಿ ಇಟ್ಟಂತೆ.

ಇಂದಿನ ಕರುವೇ ನಾಳಿನ ಹಸು. ಕರು ಶೀಘ್ರವಾಗಿ ಬೆಳೆದು ಉತ್ಪಾದನಾ ಹಂತಕ್ಕೇರಲು ಮೊದಲ ಪ್ರಮುಖ ಹೆಜ್ಜೆಯೇ ಚೆನ್ನಾಗಿ ಹಾಲು ಕುಡಿಸುವುದು. ಇದರಲ್ಲಿ ಚೌಕಾಸಿ ಖಂಡಿತಾ ಸಲ್ಲದು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಉಪಪಂಗಡಗಳ ಬಗ್ಗೆ ಕಾಳಜಿ ವಹಿಸಿ

'ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳ ಸ್ಥಿತಿ ಈಗ ನಾಯಿಪಾಡಾಗಿದೆ. ತಮ್ಮ ಸಮುದಾಯದವರು ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೆ ಆಯಕಟ್ಟಿನ ಸ್ಥಾನ ಸಿಗುತ್ತಿತ್ತು' ಎಂದು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ (ಪ್ರ.ವಾ., ಸೆ. 30). ಆಯಕಟ್ಟಿನ ಸ್ಥಾನ ಎಂದರೆ ಏನು? ಅವು ದಿನನಿತ್ಯ ನೋಟುಗಳನ್ನು ಎಣಿಸುವ ಗಲ್ಲಾಪೆಟ್ಟಿಗೆಗಳು ಇದ್ದಂತೆಯೇ? ಅಂದರೆ, ಇವರು ಭ್ರಷ್ಟ ಅಧಿಕಾರಿಗಳ ಪರ ವಕಾಲತ್ತು ವಹಿಸುತ್ತಿದ್ದಾರೆ ಎಂದರ್ಥವೇ?

ಯಾವ ಜಾತಿಯವರು ಅಧಿಕಾರಕ್ಕೆ ಬಂದರೂ ಅವರನ್ನು ಸುತ್ತುವರಿಯುವುದು ಆಯಾ ಜಾತಿಯ ಭ್ರಷ್ಟ ಅಧಿಕಾರಿಗಳು ಮತ್ತು ದಲ್ಲಾಳಿಗಳು ಮಾತ್ರ. ಮಹಾಸಭೆ ಸ್ಥಾಪನೆಯಾಗಿರುವುದು ಲಿಂಗಾಯತ ಧರ್ಮದಲ್ಲಿರುವ ಕುಲಕಸುಬುದಾರರು ಮತ್ತು ಕಾಯಕಜೀವಿಗಳ ಏಳಿಗೆಗಾಗಿಯೇ ವಿನಾ ಅಧಿಕಾರಿಗಳ ಹಿತರಕ್ಷಣೆಗಾಗಿ ಅಲ್ಲ. ಲಿಂಗಾಯತರು ಎಂದರೆ ಅದೊಂದು ಒಕ್ಕೂಟ. ನೂರಕ್ಕೂ ಹೆಚ್ಚು ವಿವಿಧ ಉಪಪಂಗಡಗಳಿವೆ. ಲಿಂಗಾಯತ ಮಡಿವಾಳರು, ಲಿಂಗಾಯತ ಕುರುಬರು, ಲಿಂಗಾಯತ ಕುಂಬಾರರು, ಲಿಂಗಾಯತ ಹೂಗಾರರು, ಲಿಂಗಾಯತ ಮೇದರು, ಲಿಂಗಾಯತ ಕಮ್ಮಾರರು, ಲಿಂಗಾಯತ ಗಾಣಿಗರು, ಲಿಂಗಾಯತ ಕ್ಷೌರಿಕರು... ಹೀಗೆ ಒಂದು ದೊಡ್ಡ ಪಟ್ಟಿಯೇ ಇದೆ. ಅವರಲ್ಲಿ ಹೆಚ್ಚಿನವರ ಪರಿಸ್ಥಿತಿ ಹೀನಾಯವಾಗಿದೆ. ಅಂತಹವರ ಬಗ್ಗೆ ಮೊದಲು ಕಾಳಜಿ ವಹಿಸಬೇಕಾಗಿದೆ.

ಸಿ.ರುದ್ರಪ್ಪ, ಬೆಂಗಳೂರು

ಕಲಾವಿದರಿಂದ ನೈತಿಕ ಬೆಂಬಲ

ಕಾವೇರಿ ನೀರಿಗೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದ 'ಕರ್ನಾಟಕ ಬಂದ್'ಗೆ ಕನ್ನಡ ಚಿತ್ರರಂಗದವರು ಬೆಂಬಲ ನೀಡಿದ್ದು ಸರಿಯಷ್ಟೆ. ಈ ಸಾಂಕೇತಿಕ ಹೋರಾಟದ ನೇತೃತ್ವ ವಹಿಸಿದ್ದ ನಟ ಶಿವರಾಜ್‌ಕುಮಾರ್ ಅವರು ಮಾತನಾಡುತ್ತಾ, 'ಕಲಾವಿದರು ಹೋರಾಟಕ್ಕೆ ಇಳಿದ ತಕ್ಷಣ ಸಮಸ್ಯೆ ಪರಿಹಾರವಾಗುವುದಿಲ್ಲ' ಎಂದು ಹೇಳಿರುವುದು ಸರಿಯಲ್ಲ. ಭಾಷಾ ನೀತಿಗೆ ಸಂಬಂಧಿಸಿದಂತೆ ಎಂಬತ್ತರ ದಶಕದಲ್ಲಿ ನಡೆದ ಗೋಕಾಕ್ ಚಳವಳಿಯು ಬರೀ ಕೆಲವು ಸಾಹಿತಿಗಳಿಂದ ಶುರುವಾಯಿತು. ಯಾವಾಗ ಕನ್ನಡ ಚಿತ್ರರಂಗದ ಮೇರುನಟ ಡಾ. ರಾಜ್‌ಕುಮಾರ್ ನೇತೃತ್ವ ವಹಿಸಿಕೊಂಡರೋ ಆಗ ಈ ಚಳವಳಿಯಲ್ಲಿ ಸಂಚಲನ ಮೂಡಿತಲ್ಲದೆ ಅದೊಂದು ಮಾದರಿ ಚಳವಳಿಯಾಗಿ ಇತಿಹಾಸವನ್ನೇ ನಿರ್ಮಿಸಿತು. ನೆಲ, ಜಲ, ಭಾಷೆಯಂತಹ ಭಾವನಾತ್ಮಕ ವಿಷಯಗಳಲ್ಲಿ ಕಲಾವಿದರ ಭಾಗವಹಿಸುವಿಕೆಯು ನಿಜಕ್ಕೂ ನೈತಿಕ ಬೆಂಬಲವನ್ನು ತಂದುಕೊಡುತ್ತದೆ.

ಎಂ.ಜೆ.ಅಭಿಷೇಕ್, ಬೆಂಗಳೂರು

ಆಹಾರವೇ ಕಲುಷಿತ ಆಗಿರುವಾಗ...

ದೇಶದಲ್ಲಿ ಐದು ವರ್ಷದವರೆಗಿನ 43 ಲಕ್ಷಕ್ಕೂ ಹೆಚ್ಚಿನ ಮಕ್ಕಳು ಸ್ಥೂಲಕಾಯದವರಿದ್ದಾರೆ, ಇದರ ಜೊತೆಗೆ ತೀವ್ರ ಹಾಗೂ ಮಧ್ಯಮ ಪ್ರಮಾಣದ ಅಪೌಷ್ಟಿಕತೆ ಇರುವ ಮಕ್ಕಳೂ ಅಷ್ಟೇ ಪ್ರಮಾಣದಲ್ಲಿ ಇದ್ದಾರೆ ಎಂಬುದನ್ನು ವಿವರಿಸಿರುವ ಡಾ. ಕೆ.ಎಸ್.ಚೈತ್ರಾ ಅವರ ಲೇಖನ (ಪ್ರ.ವಾ., ಸೆ. 30) ಓದಿ, ಮಕ್ಕಳ ಭವಿಷ್ಯದ ಬಗ್ಗೆ ಗಾಬರಿಯಾಯಿತು. ನಮ್ಮ ಬಾಲ್ಯದಲ್ಲಿ ಈಗಿನಂತೆ ಜಂಕ್‌ಫುಡ್‌ಗಳ ಹಾವಳಿ ಇರಲಿಲ್ಲ. ಸಂತೆಗೆ ಹೋದಾಗ ಗೆಣಸು ತಂದು ಬೇಯಿಸಿ ಕೊಡುತ್ತಿದ್ದರು. ಮನೆಯಲ್ಲಿ ರೊಟ್ಟಿ ಸೀಕಲು ಧಾರಾಳವಾಗಿ ಸಿಗುತ್ತಿತ್ತು. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸಹಜವಾಗಿ ಸಿಗುತ್ತಿದ್ದವು. ಬೆಳಗಿನ ಉಪಾಹಾರಕ್ಕೂ ಮಧ್ಯಾಹ್ನದ ಊಟಕ್ಕೂ ವ್ಯತ್ಯಾಸವೇನೂ ಇರುತ್ತಿರಲಿಲ್ಲ. ಅದೇ ಅನ್ನ, ಸಾರು, ಮುದ್ದೆ ತಿನ್ನಬೇಕಾಗಿತ್ತು. ಒಳಕಲ್ಲು, ಬೀಸುವಕಲ್ಲು, ಹಸೆಕಲ್ಲಿಗೆ ಬಿಡುವಿಲ್ಲದ ಕೆಲಸವಿತ್ತು. ಪ್ರತಿ ಊರಲ್ಲೂ ಎಣ್ಣೆ ತೆಗೆಯುವ ಗಾಣ, ಬೆಲ್ಲ ತೆಗೆಯುವ ಆಲೆಮನೆಗಳಿದ್ದವು. ರಾಗಿ, ಭತ್ತದ ಜೊತೆಗೆ ಆರಕ, ಸಜ್ಜೆ, ನವಣೆ, ಜೋಳದಂತಹ ಧಾನ್ಯಗಳೂ ಇರುತ್ತಿದ್ದವು.

ಈಗ ಎಲ್ಲವೂ ಬದಲಾಗಿವೆ. ಮನೆ, ಹೋಟೆಲ್, ಬೇಕರಿಗಳಲ್ಲಿ ಮೈದಾ, ಡಾಲ್ಡಾ, ಸೋಡ, ಸಕ್ಕರೆ, ರಿಫೈನ್ಡ್ ಆಯಿಲ್, ಮಸಾಲೆಯುಕ್ತ ಪದಾರ್ಥಗಳನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ. ಆಹಾರಪದಾರ್ಥ ಕೆಡದಂತಿರಲು ಬಳಸುವ ರಾಸಾಯನಿಕಗಳು ಸಲೀಸಾಗಿ ದೇಹ ಸೇರುತ್ತಿವೆ. ಈ ಅನಾಹುತ ತಡೆಯಲು ಸರ್ಕಾರ ಇಲ್ಲವೇ ಯಾವುದೇ ಜವಾಬ್ದಾರಿಯುತ ಸಂಘ ಸಂಸ್ಥೆಗಳು ಕೆಲಸ ಮಾಡುತ್ತಿಲ್ಲ. ಊಟದಲ್ಲಿ ಏನಿದೆ, ಏನಿಲ್ಲ, ಏನಿರಬೇಕು ಎಂಬ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ. ಎಲ್ಲಕ್ಕೂ ವೈದ್ಯರ ಸಲಹೆ ಪಡೆಯುವುದು ಮತ್ತು ಔಷಧ ಸೇವನೆಗಾಗಿ ಬದುಕನ್ನು ಒಗ್ಗಿಸಿಕೊಂಡಾಗಿದೆ. ಆದ್ದರಿಂದ ನಾವೀಗ ಪ್ರಜ್ಞಾಪೂರ್ವಕವಾಗಿ ಸೂಕ್ತ ನಿದ್ದೆ, ಪೌಷ್ಟಿಕ ಆಹಾರ, ಅಗತ್ಯ ಪ್ರಮಾಣದಲ್ಲಿ ನೀರು ಸೇವನೆಯ ಜೊತೆಗೆ ಒತ್ತಡ ನಿಯಂತ್ರಣ ಕ್ರಮಗಳನ್ನೂ ಅಭ್ಯಾಸ ಮಾಡಬೇಕಾಗಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮೂರ್ತಿ–ಕೀರ್ತಿ

ಇಂದು, ಗಾಂಧೀಜಿ, ಶಾಸ್ತ್ರೀಜಿ
ಇಬ್ಬರದೂ ಜಯಂತಿ,
ಗಾಂಧಿ ಮಹಾತ್ಮ
ಸರಳತೆಯ
ಸಾಕಾರಮೂರ್ತಿ,
ಲಾಲ್ ಬಹದ್ದೂರ್ ಶಾಸ್ತ್ರಿ
ಪ್ರಾಮಾಣಿಕತೆಗೇ
ತಂದರು ಕೀರ್ತಿ.

ಮ.ಗು.ಬಸವಣ್ಣ
ನಂಜನಗೂಡು

ಹೂಳು ತೆಗೆಯಲು ಬೇಕು ಇಚ್ಛಾಶಕ್ತಿ

ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿನ ಕೆಲವು ಜಲಾಶಯಗಳು, ಕಾಲುವೆಗಳು ಮತ್ತು ತೊರೆಗಳು ಹೂಳಿನಿಂದ ಮುಚ್ಚಿಹೋಗಿರುವುದನ್ನು ತಿಳಿದು (ಆಳ- ಅಗಲ, ಪ್ರ.ವಾ., ಸೆ. 29) ಮನಸ್ಸಿಗೆ ಖೇದ, ನಿರಾಸೆಯಾಯಿತು. ಜೊತೆಗೆ, ಇದುವರೆಗೂ ನಮ್ಮನ್ನು ಆಳುತ್ತಾ ಬರುತ್ತಿರುವ ಜನಪ್ರತಿನಿಧಿಗಳು, ಅಧಿಕಾರಿಗಳ ಕಾರ್ಯವೈಖರಿ ಕಂಡು ಜುಗುಪ್ಸೆಯೂ ಆಯಿತು. ಮಳೆಗಾಲದಲ್ಲಿ ಜಲಾಶಯಗಳು ತುಂಬಿ ಸುತ್ತಮುತ್ತಲಿನ ಕಾಡುಮೇಡು, ಗ್ರಾಮ, ಪಟ್ಟಣಗಳಿಗೆ ಪ್ರವಾಹವಾಗಿ ಹರಿದಾಗ, ಆ ಪ್ರದೇಶಗಳನ್ನು ಸರ್ಕಾರವು ಅತಿವೃಷ್ಟಿಪೀಡಿತ ಎಂದು ಘೋಷಿಸಬಹುದು. ಹಾಗೆಯೇ ಮಳೆ ಬಾರದೆ ಆ ಜಲಾಶಯಗಳ ನೀರು ಖಾಲಿಯಾಗಿ ಬರಡಾದಾಗ, ಅನಾವೃಷ್ಟಿಪೀಡಿತ ಪ್ರದೇಶವೆಂದು ಘೋಷಿಸಿ ರಾಜಕೀಯವಾಗಿ, ಸಾಮಾಜಿಕವಾಗಿ ಲೆಕ್ಕಾಚಾರದ ಪರಿಹಾರ ಘೋಷಿಸಬಹುದು ಎಂಬ ಸರಳ ಆಲೋಚನೆ ಇದರ ಹಿಂದೆ ಇರುವಂತೆ ಕಾಣುತ್ತದೆ! ಜಲಾಶಯಗಳಲ್ಲಿನ ಹೂಳನ್ನು ಆಗಾಗ ವೈಜ್ಞಾನಿಕ ರೀತಿಯಲ್ಲಿ ತೆಗೆಯಲು ಸರ್ಕಾರಗಳು ಇಚ್ಛಾಶಕ್ತಿ ಪ್ರದರ್ಶಿಸಿದರೆ, ಕಾವೇರಿ ನೀರಿಗಾಗಿ ವರ್ಷವರ್ಷವೂ ಬಡಿದಾಡುವ ಸ್ಥಿತಿ ಬರುವುದಿಲ್ಲ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ ಬಯಲು ಬಹಿರ್ದೆಸೆ ಮುಕ್ತ ಎಂಬುದು ಎಷ್ಟು ಸತ್ಯ?

● ಜಯಸಿಂಹ ಆರ್.

'ಭಾರತ ಬಯಲು ಬಹಿರ್ದೆಸೆ ಮುಕ್ತ ದೇಶವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿ ಸೋಮವಾರಕ್ಕೆ (2023ರ ಅಕ್ಟೋಬರ್ 2ಕ್ಕೆ) ನಾಲ್ಕು ವರ್ಷಗಳಾದವು. ಆದರೆ, ವಾಸ್ತವದಲ್ಲಿ ಭಾರತ ಸಂಪೂರ್ಣವಾಗಿ ಬಯಲು ಬಹಿರ್ದೆಸೆ ಮುಕ್ತ ದೇಶವಾಗಿಲ್ಲ. ಜಿಲ್ಲಾಡಳಿಗಳು, ರಾಜ್ಯ ಸರ್ಕಾರಗಳ ಸ್ವಯಂಘೋಷಣೆಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಭಾರತವನ್ನು 'ಬಯಲು ಬಹಿರ್ದೆಸೆ ಮುಕ್ತ ದೇಶ' ಎಂದು ಘೋಷಿಸಿತ್ತು. ಹೀಗೆ ಮಾಡಿಕೊಳ್ಳಲಾದ ಎಲ್ಲಾ ಸ್ವಯಂಘೋಷಣೆಗಳನ್ನು ಕೇಂದ್ರ ಸರ್ಕಾರ ಪರಿಶೀಲಿಸಿಲ್ಲ. ಎಲ್ಲಾ ಗ್ರಾಮಗಳು, ತಾಲ್ಲೂಕುಗಳು, ಜಿಲ್ಲೆಗಳು ಮತ್ತು ರಾಜ್ಯಗಳು ಬಯಲು ಬಹಿರ್ದೆಸೆ ಮುಕ್ತವಾಗಿವೆ ಎಂಬುದನ್ನು ದೃಢಪಡಿಸಿಕೊಳ್ಳದೆಯೇ ಕೇಂದ್ರ ಸರ್ಕಾರವು 'ಭಾರತವು ಬಯಲು ಬಹಿರ್ದೆಸೆ ಮುಕ್ತ ದೇಶ' ಎಂದು ಘೋಷಿಸಿಬಿಟ್ಟಿತು.

ಈ ಘೋಷಣೆಯು ಕಾಗದದ ಮೇಲೆ ಮಾತ್ರವೇ ಇದೆ, ದೇಶದ ಎಲ್ಲಾ ಮನೆಗಳಲ್ಲಿ ಶೌಚಾಲಯಗಳಿಲ್ಲ. ಚಿತ್ರದುರ್ಗದ ಕವಾಡಿಗರಹಟ್ಟಿ ಬಡಾವಣೆಯು ಈಚೆಗೆ ಸುದ್ದಿಯಲ್ಲಿತ್ತು. ಚಿತ್ರದುರ್ಗ ನಗರದಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಈ ಬಡಾವಣೆಯು, ನಗರಸಭೆ ವ್ಯಾಪ್ತಿಯಲ್ಲಿರುವ ಒಂದು ಸಣ್ಣ ವಸತಿ ಪ್ರದೇಶ. ಇಲ್ಲಿನ ಕುಡಿಯುವ ನೀರು ಕಲುಷಿತಗೊಂಡು 260ಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡಿದ್ದರು ಮತ್ತು ಹಲವು ಜನರು ಮೃತಪಟ್ಟಿದ್ದರು. ಆನಂತರ ಈ ಬಡಾವಣೆಗೆ ಮೂಲಸೌಕರ್ಯಗಳನ್ನು ಒದಗಿಸಲು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಸಮರೋಪಾದಿಯಲ್ಲಿ ಕಾಮಗಾರಿ ಆರಂಭಿಸಿವೆ. ಆದರೆ ಈ ದುರ್ಘಟನೆಯು ಬಹಿರಂಗಪಡಿಸಿದ ಸಂಗತಿಯೆಂದರೆ, ಈ ಬಡಾವಣೆಯ ಎಲ್ಲಾ ಮನೆಗಳಲ್ಲಿ ಶೌಚಾಲಯಗಳಿಲ್ಲ ಎಂಬುದು.

ಚಿತ್ರದುರ್ಗ ನಗರಸಭೆಯ 17ನೇ ವಾರ್ಡ್‌ನಲ್ಲಿರುವ ಕವಾಡಿಗರಹಟ್ಟಿ ಬಡಾವಣೆಯಲ್ಲಿ 735 ಕುಟುಂಬಗಳು ವಾಸಿಸುತ್ತಿವೆ. ಈ ಕುಟುಂಬಗಳ ಮನೆಗಳಲ್ಲಿ ಪ್ರತ್ಯೇಕ ಶೌಚಾಲಯಗಳಿಲ್ಲ. ಸ್ಥಳಾಭಾವದ ಕಾರಣದಿಂದ ಶೌಚಾಲಯಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ ಎಂದು ಇಲ್ಲಿನ ನಿವಾಸಿಗಳು ಹೇಳುತ್ತಾರೆ. 'ಶೌಚಾಲಯ ನಿರ್ಮಿಸಿಕೊಳ್ಳಲು ಸ್ಥಳದ ಕೊರತೆ ಇದೆ. ಮನೆ ಕಿರಿದಾಗಿರುವುದರಿಂದ ಶೌಚಾಲಯಕ್ಕೆ ಅವಕಾಶ ಕಲ್ಪಿಸಲು ಸಾಧ್ಯವಾಗಿಲ್ಲ ಎಂಬುದು ಪರಿಶೀಲನೆಯ ವೇಳೆ ಗೊತ್ತಾಗಿದೆ. ಸಾರ್ವಜನಿಕ ಶೌಚಾಲಯ ನಿರ್ಮಿಸಲು ಆಲೋಚಿಸುತ್ತಿದ್ದೇವೆ' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ. ಅವರು ಹೇಳಿದ್ದರು. ಕವಾಡಿಗರಹಟ್ಟಿಯಲ್ಲಿ ಸುಸ್ಥಿತಿಯಲ್ಲಿರುವ ಸಾರ್ವಜನಿಕ ಶೌಚಾಲಯವೂ ಇಲ್ಲ ಎಂಬುದನ್ನು ಇದು ದೃಢಪಡಿಸುತ್ತದೆ.

ಆದರೆ, ಕೇಂದ್ರ ಸರ್ಕಾರದ ದಾಖಲೆಗಳ ಪ್ರಕಾರ 2018ರ ಆಗಸ್ಟ್ 28ರಂದು ಇಡೀ ಚಿತ್ರದುರ್ಗ ಜಿಲ್ಲೆಯನ್ನು 'ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ' ಎಂದು ಘೋಷಿಸಲಾಗಿದೆ. ಚಿತ್ರದುರ್ಗ ನಗರಸಭೆ ವ್ಯಾಪ್ತಿಯಲ್ಲಿ 32,110 ಕುಟುಂಬಗಳಿದ್ದು, ಎಲ್ಲವೂ ಶೌಚಾಲಯ ಹೊಂದಿವೆ. 35 ವಾರ್ಡ್‌ಗಳಿದ್ದು, ಎಲ್ಲಾ ವಾರ್ಡ್‌ಗಳು ಬಯಲು ಬಹಿರ್ದೆಸೆ ಮುಕ್ತವಾಗಿವೆ ಎಂದು ಘೋಷಿಸಲಾಗಿದೆ. ಆದರೆ ಶೌಚಾಲಯಗಳೇ ಇಲ್ಲದ ಕವಾಡಿಗರಹಟ್ಟಿಯು ಚಿತ್ರದುರ್ಗ ನಗರಸಭೆಯ 17ನೇ ವಾರ್ಡ್‌ನಲ್ಲಿದೆ. ಶೌಚಾಲಯಗಳು ನಿರ್ಮಾಣವಾಗದೇ ಇದ್ದರೂ, ಚಿತ್ರದುರ್ಗ ನಗರಸಭೆಯನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ.

ಯಾವುದೇ ಗ್ರಾಮ/ಗ್ರಾಮ ಪಂಚಾಯಿತಿ/ನಗರಸಭೆ/ತಾಲ್ಲೂಕು/ಜಿಲ್ಲೆ/ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲು ನಾಲ್ಕು ಷರತ್ತುಗಳನ್ನು ಪೂರೈಸಬೇಕಾಗುತ್ತದೆ.

61,524 ಗ್ರಾಮಗಳಿಗಿಲ್ಲ ಇನ್ನೂ 'ಒಡಿಎಫ್' ಗರಿ

ದೇಶದಲ್ಲಿರುವ ಎಲ್ಲಾ ಗ್ರಾಮಗಳು, ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲೆಗಳು 'ಬಯಲು ಬಹಿರ್ದೆಸೆ ಮುಕ್ತ–ಒಡಿಎಫ್' ಎಂದು ಸ್ವಯಂಘೋಷಣೆ ಮಾಡಿಕೊಂಡಿಲ್ಲ. ಹೀಗಿದ್ದೂ ಇಡೀ ಭಾರತವೇ 'ಬಯಲು ಬಹಿರ್ದೆಸೆ ಮುಕ್ತ ದೇಶ' ಎಂದು 2019ರಲ್ಲಿ ಸರ್ಕಾರ ಘೋಷಿಸಿತ್ತು.

ಒಂದನೇ ಹಂತದ ಸ್ವಚ್ಛ ಭಾರತ ಅಭಿಯಾನ–ಗ್ರಾಮೀಣ ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಕೇಂದ್ರ ಸರ್ಕಾರವು 'ಸ್ವಚ್ಛ ಭಾರತ ಅಭಿಯಾನ–ಗ್ರಾಮೀಣ ಡ್ಯಾಶ್‌ಬೋರ್ಡ್'ನಲ್ಲಿ ನೀಡುತ್ತದೆ. ಈ ಡ್ಯಾಶ್‌ಬೋರ್ಡ್‌ನಲ್ಲಿ 2022ರ ಮಾರ್ಚ್ 31ರವರೆಗಿನ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಅಲ್ಲಿರುವ ದತ್ತಾಂಶಗಳ ಪ್ರಕಾರ ದೇಶದಲ್ಲಿ ಇನ್ನೂ 61 ಸಾವಿರಕ್ಕೂ ಹೆಚ್ಚು ಗ್ರಾಮಗಳು, 7 ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳು ಮತ್ತು 24 ಜಿಲ್ಲೆಗಳಿಗೆ 'ಒಡಿಎಫ್' ಸ್ಥಾನ ದೊರೆತಿಲ್ಲ. ಆದರೆ ಸರ್ಕಾರವು ಇದೇ ಡ್ಯಾಶ್‌ಬೋರ್ಡ್‌ನಲ್ಲಿ, '2019–20ರ ಅಂತ್ಯದ ವೇಳೆಗೆ ದೇಶದ ಎಲ್ಲಾ ಮನೆಗಳೂ ಪ್ರತ್ಯೇಕ ಶೌಚಾಲಯ ಹೊಂದಿದ್ದವು' ಎಂದು ಘೋಷಿಸಿದೆ.

ಕೇಂದ್ರ ಸರ್ಕಾರದ ಒಂದೇ ಇಲಾಖೆಯು, ತನ್ನದೇ ಒಂದೇ ಡ್ಯಾಶ್‌ಬೋರ್ಡ್‌ನಲ್ಲಿ ಪರಸ್ಪರ ವ್ಯತಿರಿಕ್ತವಾದ ಮಾಹಿತಿಯನ್ನು ನೀಡಿದೆ.

735 ದೇಶದಲ್ಲಿರುವ ಒಟ್ಟು ಜಿಲ್ಲೆಗಳ ಸಂಖ್ಯೆ	**6.62** ಲಕ್ಷ ದೇಶದಲ್ಲಿರುವ ಒಟ್ಟು ಗ್ರಾಮಗಳ ಸಂಖ್ಯೆ	**2.69** ಲಕ್ಷ ದೇಶದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ
711 ಸ್ವಚ್ಛಭಾರತ ಮಿಷನ್ ಅಡಿಯಲ್ಲಿ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಂಡ ಜಿಲ್ಲೆಗಳು	**6.01** ಲಕ್ಷ ಸ್ವಚ್ಛಭಾರತ ಮಿಷನ್ ಅಡಿಯಲ್ಲಿ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಂಡ ಗ್ರಾಮಗಳು	**2.62** ಲಕ್ಷ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಂಡ ಗ್ರಾಮ ಪಂಚಾಯಿತಿಗಳ ಸಂಖ್ಯೆ
24 ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಳ್ಳದೇ ಇರುವ ಜಿಲ್ಲೆಗಳ ಸಂಖ್ಯೆ	**61,524** ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಳ್ಳದೇ ಇರುವ ಗ್ರಾಮಗಳ ಸಂಖ್ಯೆ	**7,172** ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿಕೊಳ್ಳದೇ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ




ಬಯಲು ಬಹಿರ್ದೆಸೆಯ ಅಪಾಯಗಳು ಮತ್ತು ಶೌಚಾಲಯ ಬಳಕೆಯ ಅಗತ್ಯಗಳ ಬಗ್ಗೆ ರಾಯಚೂರು ತಾಲ್ಲೂಕಿನ ಮಾಸದೊಡ್ಡಿ ಗ್ರಾಮದಲ್ಲಿ ಇದೇ ಮೇನಲ್ಲಿ ನಡೆದಿದ್ದ ಜಾಗೃತಿ ಕಾರ್ಯಕ್ರಮ (ಎಡಚಿತ್ರ). ಯಾದಗಿರಿ ನಗರದ ವಾರ್ಡ್ 9ರಲ್ಲಿ ನಿರ್ಮಿಸಲಾಗಿರುವ ಶೌಚಾಲಯ ಹೀಗಿತ್ತು —ಪ್ರಜಾವಾಣಿ ಚಿತ್ರಗಳು

1. ಆ ವ್ಯಾಪ್ತಿಯಲ್ಲಿರುವ ಎಲ್ಲಾ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇರಬೇಕು.
2. ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇಲ್ಲದೇ ಇದ್ದರೆ, ಆ ಮನೆಯಿಂದ 500 ಮೀಟರ್ ಒಳಗೆ ಸಾರ್ವಜನಿಕ ಶೌಚಾಲಯವಿರಬೇಕು.
3. ಆ ಪ್ರದೇಶದಲ್ಲಿ ಯಾರೂ ಬಯಲು ಬಹಿರ್ದೆಸೆಗೆ ಹೋಗಬಾರದು
4. ಬಯಲು ಬಹಿರ್ದೆಸೆಗೆ ಹೋಗುವವರಿಗೆ ದಂಡ ವಿಧಿಸುವ ವ್ಯವಸ್ಥೆ ಜಾರಿಯಲ್ಲಿರಬೇಕು.

ಈ ಎಲ್ಲಾ ಷರತ್ತುಗಳನ್ನು ಈಡೇರಿಸುವಂತಿದ್ದರೆ ಮಾತ್ರ ಆ ಪ್ರದೇಶವನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಬೇಕು.

ಚಿತ್ರದುರ್ಗ ನಗರಕೇಂದ್ರದಿಂದ ಶಿವಮೊಗ್ಗಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿಯಲ್ಲಿ ಕವಾಡಿಗರಹಟ್ಟಿ ಇದೆ. ಇಲ್ಲಿನ ಎಲ್ಲಾ ಮನೆಗಳಲ್ಲಿ ಶೌಚಾಲಯಗಳಿಲ್ಲ, 500 ಮೀಟರ್ ಒಳಗೆ ಸಾರ್ವಜನಿಕ ಶೌಚಾಲಯವೂ ಇಲ್ಲ, ಇಲ್ಲಿನ ಬಹುತೇಕ ಮಂದಿ ಬಯಲು ಬಹಿರ್ದೆಸೆಗೆ ಹೋಗುತ್ತಾರೆ ಮತ್ತು ಬಯಲು ಬಹಿರ್ದೆಸೆಗೆ ಹೋಗುವವರಿಗೆ ದಂಡ ವಿಧಿಸುತ್ತಿಲ್ಲ. ಈ ಪ್ರದೇಶದಲ್ಲಿರುವ ಕವಾಡಿಗರಹಟ್ಟಿ ಮಾತ್ರವಲ್ಲ, ಬೇರೆ ಬಡಾವಣೆಗಳು ಮತ್ತು ನಗರದ ಹೊರವಲಯದ ಹಲವು ಗ್ರಾಮಗಳಲ್ಲಿ ಇದೇ ಪರಿಸ್ಥಿತಿ ಇದೆ.

ಇದು ಚಿತ್ರದುರ್ಗ ಜಿಲ್ಲೆ ಒಂದಕ್ಕೆ ಮಾತ್ರ ಸಂಬಂಧಿಸಿದ ಮಾಹಿತಿ. ರಾಜ್ಯದ ಬೇರೆ ಎಲ್ಲಾ ಜಿಲ್ಲೆಗಳು ಅಥವಾ ದೇಶದ ಬೇರೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಶೌಚಾಲಯ ನಿರ್ಮಾಣದ ಪೂರ್ಣ ಪ್ರಮಾಣದ ಪರಿಶೀಲನೆ ನಡೆದಿಲ್ಲ. ಹೀಗಿದ್ದೂ, ಇಡೀ ದೇಶವನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ. ದೇಶದಲ್ಲಿ ಈಗ, ಶೌಚ ತ್ಯಾಜ್ಯ ವೈಜ್ಞಾನಿಕ ವಿಲೇವಾರಿ, ಮನೆತ್ಯಾಜ್ಯ ವೈಜ್ಞಾನಿಕ ವಿಲೇವಾರಿಯನ್ನು ಸಾಧಿಸುವ 'ಬಯಲು ಬಹಿರ್ದೆಸೆ ಮುಕ್ತ ಪ್ಲಸ್' ಯೋಜನೆ ಜಾರಿಯಲ್ಲಿದೆ.

ಗಣನೀಯ ಪ್ರಗತಿ

2014ರ ಅಕ್ಟೋಬರ್‌ನಲ್ಲಿ ಸ್ವಚ್ಛಭಾರತ ಯೋಜನೆ ಆರಂಭಿಸಿದ ನಂತರ, ಗ್ರಾಮೀಣ ಯೋಜನೆ ಅಡಿಯಲ್ಲಿ 11 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ. 2014ರಲ್ಲಿ, ದೇಶದಲ್ಲಿ ಪ್ರತ್ಯೇಕ ಶೌಚಾಲಯ ಹೊಂದಿದ್ದ ಕುಟುಂಬಗಳ ಪ್ರಮಾಣ ಶೇ 38.7ರಷ್ಟಿತ್ತು. 2019–20ರ ವೇಳೆಗೆ ಈ ಪ್ರಮಾಣ ಶೇ 100ಕ್ಕೆ ಏರಿಕೆಯಾಗಿದೆ. ಆನಂತರ ಪ್ರತಿ ವರ್ಷ ನಿರ್ಮಾಣವಾದ ಮನೆಗಳಲ್ಲಿ ಶೌಚಾಲಯ ನಿರ್ಮಾಣವಾಗುವಂತೆ ನೋಡಿಕೊಳ್ಳಲಾಗಿದೆ. ಹೀಗಾಗಿ ಈಗ ದೇಶದ ಎಲ್ಲಾ ಮನೆಗಳಲ್ಲೂ ಶೌಚಾಲಯಗಳಿವೆ ಎಂದು ಕೇಂದ್ರ ಸರ್ಕಾರದ ದಾಖಲೆಗಳು ಹೇಳುತ್ತವೆ.

ಎಲ್ಲಾ ನಿರ್ಮಾಣಗಳ ಫೋಟೊ ಲಭ್ಯವಿಲ್ಲ

ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ನಿರ್ಮಿಸಲಾದ ಶೌಚಾಲಯಗಳ ಚಿತ್ರಗಳನ್ನು ಸಂಬಂಧಿತ ಅಧಿಕಾರಿಯು ಡ್ಯಾಶ್‌ಬೋರ್ಡ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಹೀಗೆ ಚಿತ್ರವನ್ನು ಅಪ್‌ಲೋಡ್ ಮಾಡಲಾದ ನಿರ್ಮಾಣಗಳನ್ನು ಮಾತ್ರ ದೃಢೀಕರಣಕ್ಕೆ ಪರಿಗಣಿಸಲಾಗುತ್ತದೆ. ಆದರೆ, ಸ್ವಚ್ಛ ಭಾರತ ಅಭಿಯಾನ– ಗ್ರಾಮೀಣ ಯೋಜನೆ ಅಡಿಯಲ್ಲಿ ದೇಶದಾದ್ಯಂತ ನಿರ್ಮಿಸಲಾದ ಒಟ್ಟು ಶೌಚಾಲಯಗಳಲ್ಲಿ 88 ಲಕ್ಷದಷ್ಟು ಶೌಚಾಲಯಗಳ ಚಿತ್ರವನ್ನು ಈವರೆಗೆ ಅಪ್‌ಲೋಡ್ ಮಾಡಿಲ್ಲ.

11.38 ಕೋಟಿ ಸ್ವಚ್ಛ ಭಾರತ ಅಭಿಯಾನ– ಗ್ರಾಮೀಣ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಒಟ್ಟು ಶೌಚಾಲಯಗಳ ಸಂಖ್ಯೆ

10.50 ಕೋಟಿ ಈ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಶೌಚಾಲಯಗಳಲ್ಲಿ ಚಿತ್ರ ಅಪ್‌ಲೋಡ್ ಮಾಡಲಾದ ಶೌಚಾಲಯಗಳ ಸಂಖ್ಯೆ.. ಅವುಗಳನ್ನಷ್ಟೇ ಪರಿಶೀಲಿಸಲಾಗಿದೆ

ಆಧಾರ: ಸ್ವಚ್ಛ ಭಾರತ ಅಭಿಯಾನ–ಗ್ರಾಮೀಣ ಡ್ಯಾಶ್‌ಬೋರ್ಡ್, ಸ್ವಚ್ಛ ಭಾರತ ಅಭಿಯಾನ–ನಗರ ಡ್ಯಾಶ್‌ಬೋರ್ಡ್, ಪಿಐಬಿ, ಪಿಟಿಐ, ರಾಷ್ಟ್ರೀಯ ಗ್ರಾಮೀಣ ವಾರ್ಷಿಕ ಸ್ವಚ್ಛತಾ ಸಮೀಕ್ಷೆ:2019–20ರ ವರದಿ, ಕೇಂದ್ರ ಆರೋಗ್ಯ ಸಚಿವಾಲಯ

ಸಿನಿ ಬಿಟ್ಸ್



ಮುರುಳೀಧರನ್, ಮಧುರ್ ಮಿತ್ತಲ್, ಅನಿಲ್ ಕುಂಬ್ಳೆ

ಅ.6ರಂದು ಮುತ್ತಯ್ಯ ಮುರುಳೀಧರನ್ ಚಿತ್ರ ತೆರೆಗೆ

ಶ್ರೀಲಂಕಾದ ಹೆಸರಾಂತ ಕ್ರಿಕೆಟಿಗ ಮುತ್ತಯ್ಯ ಮುರುಳೀಧರನ್ ಜೀವನಗಾಥೆ ಆಧಾರಿತ '800' ಸಿನಿಮಾದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದು, ಅ.6ರಂದು ಚಿತ್ರ ತೆರೆಗೆ ಬರುತ್ತಿದೆ.

'ತಮಿಳಿನ ಹೆಸರಾಂತ ನಿರ್ದೇಶಕ ವೆಂಕಟ್ ಪ್ರಭು ನನ್ನ ಪತ್ನಿಗೆ ಪರಿಚಯ. ಅವರು ನನ್ನ ಜೀವನಗಾಥೆಯನ್ನು ಸಿನಿಮಾವಾಗಿಸುವ ಪ್ರಸ್ತಾಪ ಮುಂದಿಟ್ಟರು. ಮೊದಲಿಗೆ ಒಪ್ಪಿಕೊಳ್ಳಲಿಲ್ಲ. ಇದರಿಂದ ನಾನು ಶ್ರೀಲಂಕಾದಲ್ಲಿ ನಡೆಸುತ್ತಿರುವ ಟ್ರಸ್ಟ್‌ಗೆ ಸಹಾಯವಾಗಬಹುದೆಂದು ಜೊತೆಗಿದ್ದವರು ನನ್ನನ್ನು ಒಪ್ಪಿಸಿದರು. ವಿಜಯ್ ಸೇತುಪತಿ ಈ ಚಿತ್ರ ಮಾಡಬೇಕಿತ್ತು. ನಿರ್ದೇಶಕರು ಬದಲಾದರು, ನಿರ್ಮಾಣ ಸಂಸ್ಥೆ ಬದಲಾಯಿತು. ಚಿತ್ರೀಕರಣದ ವೇಳೆ ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಪ್ರಾರಂಭವಾಯಿತು. ಎಲ್ಲ ಅಡೆತಡೆಗಳನ್ನು ದಾಟಿ ಅಂತಿಮವಾಗಿ ಚಿತ್ರ ತೆರೆಗೆ ಬರುತ್ತಿರುವುದು ಸಂತೋಷದ ಸಂಗತಿ' ಎಂದರು ಮುರುಳೀಧರನ್.

ಎಂ.ಎಸ್.ಶ್ರೀಪತಿ ಕಥೆ ಬರೆದು ನಿರ್ದೇಶಿಸಿರುವ ಚಿತ್ರವನ್ನು ಶ್ರೀದೇವಿ ಮೂವೀಸ್ ನಿರ್ಮಾಣ ಮಾಡಿದೆ. ಬಾಲಿವುಡ್ ನಟ ಮಧುರ್ ಮಿತ್ತಲ್ ಮುರುಳೀಧರನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಮಿಳು, ಹಿಂದಿ, ತೆಲುಗು ಭಾಷೆಗಳಲ್ಲಿ ಚಿತ್ರ ತೆರೆಗೆ ಬರುತ್ತಿದೆ.

'ಮುರುಳೀಧರನ್ ನಗುಮುಖದ ಗೆಳೆಯ. ಟೆಸ್ಟ್ ಕ್ರಿಕೆಟ್‌ನಲ್ಲಿ 800 ವಿಕೆಟ್ ಪಡೆದು ಸಾಧನೆಗೈದಿದ್ದಾರೆ. ಕ್ರಿಕೆಟ್‌ನ ಆಚೆಗೆ ಅತ್ಯುತ್ತಮ ವ್ಯಕ್ತಿ ಕೂಡ. ಸಿನಿಮಾ ಯಶಸ್ವಿಯಾಗಲಿ' ಎಂದರು ಅನಿಲ್ ಕುಂಬ್ಳೆ.



'ಸುವ್ವಾಲಿ' ಚಿತ್ರತಂಡ

ಅನಾಥ ಮಕ್ಕಳ 'ಸುವ್ವಾಲಿ'

ಅನಾಥ ಮಕ್ಕಳ ಕಥೆಯನ್ನು ಹೊಂದಿರುವ 'ಸುವ್ವಾಲಿ' ಚಿತ್ರಕ್ಕೆ ಇತ್ತೀಚೆಗಷ್ಟೇ ಚಾಲನೆ ದೊರೆಯಿತು. ಎಂ.ಮಹೇಶ್‌ಬಾಬು ನಿರ್ದೇಶನದ ಜೊತೆಗೆ ಶ್ರೀ ಶೈಲಾ ಪ್ರೊಡಕ್ಷನ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'ಸಮಾಜದಲ್ಲಿ ಸಾಕಷ್ಟು ಅನಾಥ ಮಕ್ಕಳು ಸಿಗುತ್ತಾರೆ. ಇಂಥ ಮಕ್ಕಳು ಸಮಾಜದಲ್ಲಿ ಏನಾಗುತ್ತಾರೆ? ಅವರ ಭವಿಷ್ಯ ಹೇಗೆ ರೂಪುಗೊಳ್ಳುತ್ತದೆ? ಎಂಬುದರ ಸುತ್ತ ಕಥೆ ಸಾಗುತ್ತದೆ. ಅನಾಥ ಮಕ್ಕಳಿಗೆ ಮತ್ತೊಂದು ಹೆಣ್ಣು ಮಗುವೊಂದು ಸಿಗುತ್ತದೆ. ಇದರಿಂದ ಏನೇನು ಕಷ್ಟಗಳು ಎದುರಾಗುತ್ತವೆ ಎನ್ನುವುದೇ ಚಿತ್ರದ ಕಥೆ' ಎಂದರು ನಿರ್ದೇಶಕ ಮಹೇಶ್ ಬಾಬು.

ಅಂಜನ್, ಸಚಿನ್ ಪುರೋಹಿತ್, ಅಂಜನಾ, ಲಯಾಕೋಕಿಲ, ಮಕ್ಕಳಾದ ಅಂಕಿತಮೂರ್ತಿ, ಮಾನ್ಯ ತಾರಾಗಣದಲ್ಲಿದ್ದಾರೆ. ವಿ.ಮನೋಹರ್ ಸಾಹಿತ್ಯ ಮತ್ತು ಸಂಗೀತ, ಮನುವಿಜಯ್‌ಕುಮಾರ್ ಛಾಯಾಗ್ರಹಣ, ಮಲ್ಲು ಅವರ ಸಂಕಲನ ಚಿತ್ರಕ್ಕಿದೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲು ತಂಡವು ಯೋಜನೆ ಹಾಕಿಕೊಂಡಿದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ನಾಚಿಕೆ-ಮಾನ-ಮರ್ಯಾದೆ ಬಿಟ್ಟಿರುವ #ಗುಲಾಮರು ಇಂದಿನ ಚಂದ್ರಯಾನ-3ರ ಯಶಸ್ಸು ಎಡ್ವಿನ್‌ಳ ಗುಲಾಮ ನೆಹರೂ ಇಸ್ರೊ ಸ್ಥಾಪನೆ ಮಾಡಿದ್ದಕ್ಕೆ ಸಾಧ್ಯವಾಯಿತು ಅಂಥ ಸುಳ್ಳು ಹೇಳುತ್ತಾ ಜನರಿಗೆ ಮಂಕು ಬೂದಿ ಎರಚುತ್ತಿದ್ದಾರೆ. ವಾಸ್ತವ ಎಂದರೆ:
● ನೆಹರೂ ನಿಧನವಾದದ್ದು 24-05-1964
● ವಿಕ್ರಂ_ಸಾರಾಭಾಯ್ ರವರು ಇಸ್ರೊ ಸ್ಥಾಪನೆ ಮಾಡಿದ್ದು 15-08-1969ರಂದು.
ದೇಶದ ಜನರಿಗೆ ನಿರಂತರವಾಗಿ ಸುಳ್ಳು ಹೇಳುವುದನ್ನು ತಮ್ಮ ಕಾಯಕ ಮಾಡಿಕೊಂಡಿರುವ ಈ ಎಲ್ಲಾ ಗುಲಾಮರಿಗೆ ದಿಕ್ಕಾರ' ಎಂಬ ಮಾಹಿತಿ ಇರುವ ಪೋಸ್ಟ್ ವಾಟ್ಸ್‌ಆ್ಯಪ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಇಂಡಿಯನ್ ನ್ಯಾಷನಲ್ ಕಮಿಟಿ ಫಾರ್ ಸ್ಪೇಸ್ ರೀಸರ್ಚ್ (ಐಎನ್‌ಸಿಒಎಸ್‌ಪಿಎಆರ್) ಸ್ಥಾಪನೆ ಆಗಿದ್ದು 1962ರಲ್ಲಿ. ಇದನ್ನು ಸ್ಥಾಪಿಸಿದ್ದು ಅಂದಿನ ಭಾರತ ಸರ್ಕಾರ. ಆಗ ಜವಾಹರಲಾಲ್ ನೆಹರೂ ಅವರು ಪ್ರಧಾನಿ ಆಗಿದ್ದರು. ವಿಕ್ರಮ್ ಸಾರಾಭಾಯ್ ಅವರ ಶಿಫಾರಸು, ಮಾರ್ಗದರ್ಶನದ ಮೇರೆಗೆ ಇದರ ಸ್ಥಾಪನೆ ಆಗಿತ್ತು. ನಂತರ, 1969ರಲ್ಲಿ ಐಎನ್‌ಸಿಒಎಸ್‌ಪಿಎಆರ್ ಅನ್ನು ಇಂಡಿಯನ್ ಸ್ಪೇಸ್ ರೀಸರ್ಚ್ ಆರ್ಗನೈಸೇಷನ್ (ಐಎಸ್‌ಆರ್‌ಒ, ಇಸ್ರೊ) ಎಂದು ಮರುನಾಮಕರಣ ಮಾಡಲಾಯಿತು. ಈ ಮಾಹಿತಿಯನ್ನು ಇಸ್ರೊವೇ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಆದ್ದರಿಂದ, ಇಸ್ರೊವನ್ನು ನೆಹರೂ ಅವರು ಸ್ಥಾಪನೆ ಮಾಡಿಲ್ಲ ಎನ್ನುವುದು ಸುಳ್ಳು ಸುದ್ದಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತೃತೀಯ ಗಂ. 07-37 ನಕ್ಷತ್ರ: ಭರಣಿ ಗಂ. 18-24 ಯೋಗ: ಹರ್ಷಣ ಗಂ. 10-29, ಕರಣ: ವಿಷ್ಟಿ ಗಂ. 07-37, ಕನ್ಯಾ ಮಾಸದ 14 ನೇ ದಿನ, ಮಳೆನಕ್ಷತ್ರ: ಹಸ್ತ 2.ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-23 ಸೂರ್ಯಾಸ್ತ : 06-17, ಮುಸ್ಲಿಂ ದಿನಾಂಕ : 16 ರಬಿಉಲ್ಲಾವಲ್, ದಿನ ವಿಶೇಷ: ಗಾಂಧಿ ಜಯಂತಿ
ಅದೃಷ್ಟ ಸಂಖ್ಯೆ : 9, 1

ಮೇಷ: ವಿದ್ಯುತ್‌ನಿಂದಾಗಿ ಅಥವಾ ಅಗ್ನಿಯಿಂದಾಗಲೀ ಅಪಘಾತಗಳು ಸಂಭವಿಸುವ ಲಕ್ಷಣಗಳಿರುವುದು. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದರಿಂದ ಕ್ಷೇಮ ಉಂಟಾಗುತ್ತದೆ. ಸ್ವಂತ ಪ್ರಯತ್ನ ಬಲದಿಂದ ಹಣ ಸಂಪಾದನೆಯಾಗುವುದು.

ವೃಷಭ: ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವುದರಿಂದ ಯಶಸ್ವಿಯಾಗುವಿರಿ ಹಾಗೂ ಋಣಬಾಧೆಯಿಂದ ಮುಕ್ತರಾಗಬಹುದು. ಕಷ್ಟಗಳಿಗೆ ಮಿತ್ರರಿಂದ ಉತ್ತಮ ಸಹಾಯ ದೊರೆಯುವುದು.

ಮಿಥುನ: ಇಂದು ಕೌಟುಂಬಿಕ ವಿಚಾರವಾಗಿ ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಯೂ ಮುಂದಿನ ದಿನಗಳಲ್ಲಿ ಕೀರ್ತಿಯನ್ನು ಹೆಚ್ಚಿಸುತ್ತದೆ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚುವುದು.

ಕರ್ಕಾಟಕ: ರಾಜಕಾರಣಿಗಳಿಗೆ ಈ ದಿನ ತಮ್ಮ ಪಕ್ಷದ ಬಗೆಗಿನ ಪ್ರಚಾರಕ್ಕಾಗಿ ಉತ್ತಮ ಭಾಷಣ ನಡೆಸಿ ಜನರ ಮನಗೆಲ್ಲುವ ಒಂದು ಸದವಕಾಶ ಲಭಿಸುವುದು. ವಿದೇಶಿ ಬಂಡವಾಳ ಹೂಡುವಿಕೆ ಯೋಜನೆಗಳಿಗೆ ಸಿದ್ಧತೆ ನಡೆಯಲಿದೆ.

ಸಿಂಹ: ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ಹಲವು ವರ್ಷಗಳಿಂದ ಯೋಚಿಸುತ್ತಿದ್ದ ಕಾರ್ಯವು ದೇವತಾ ಅನುಗ್ರಹದಿಂದ ನಡೆಯಲಿದೆ. ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಾಗಲಿದೆ.

ಕನ್ಯಾ: ವಿದೇಶ ವ್ಯವಹಾರದಿಂದಾಗಿ ಈ ದಿನ ಅಧಿಕ ಸಮಯವನ್ನು ವೃತ್ತಿ ಜೀವನಕ್ಕೆ ಮೀಸಲಿಡಬೇಕಾಗುತ್ತದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲಸದಲ್ಲಿ ಪೂರ್ವ ತಯಾರಿ ಮಾಡಲು ಇಂದು ಸೂಕ್ತ ದಿನ.

ತುಲಾ: ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ ಅದನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಿ. ವೈಯಕ್ತಿಕ ಜೀವನದ ಬೆಳವಣಿಗೆ ಬಗ್ಗೆ ಗಮನಹರಿಸಿ. ಮಂಗಳ ಕಾರ್ಯ ಸುಲಲಿತವಾಗಿ ನೆರವೇರುವುದು.

ವೃಶ್ಚಿಕ: ನೆಮ್ಮದಿಯ ಜತೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಕಾಲ ಕಳೆಯುವ ಸಮಯವಾಗಿದೆ. ಕೆಲವು ಸ್ನೇಹಿತರಲ್ಲಿ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುವುದು ಸರಿಯಲ್ಲ ಎಂದು ಅನಿಸುವುದು.

ಧನು: ಅನೇಕ ಮೂಲಗಳಿಂದ ಧನಾರ್ಜನೆ ಇದ್ದರೂ ಕೈಯಲ್ಲಿ ಹಣ ಇಲ್ಲದಂತೆ ಆಗುವುದು. ಪ್ರಚಲಿತ ವಿದ್ಯಮಾನ ಕುರಿತು ಚರ್ಚಾ ವಿಷಯಗಳಲ್ಲಿ ಪಾಲ್ಗೊಳ್ಳುವಿರಿ. ಗುರು ಜೀವನಕ್ಕೆ ಹೊಸ ಹುರುಪು ನೀಡಲಿದ್ದಾನೆ.


ಮಕರ: ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು. ಹೊಸ ಅಧ್ಯಾಯ ಪ್ರಾರಂಭವಾಗಲಿದೆ. ಹವಾಮಾನಕ್ಕೆ ಹೊಂದಿಕೊಳ್ಳಲಾಗದೆ ಅನಾರೋಗ್ಯದಿಂದ ಬಳಲುವಂತಾಗುವುದು.

ಕುಂಭ: ಸಂಕೋಚ ಸ್ವಭಾವ ಅನುಭವಿಸುವ ನಿಮಗೆ ಯಾರೊಂದಿಗಾದರೂ ಹೊಸದಾಗಿ ಪರಿಚಯ ಮಾಡಿಕೊಳ್ಳಲು ಸ್ವಲ್ಪ ಸಮಯ ಹಿಡಿಯುವುದು. ಯಾವುದೇ ವಿಷಯವನ್ನಾದರೂ ಪತಿಯಲ್ಲಿ ಮುಕ್ತವಾಗಿ ಹೇಳಿ.

ಮೀನ: ಸಹೋದ್ಯೋಗಿಗಳಿಂದ ಅಥವಾ ಅಕ್ಕ ಪಕ್ಕದವರಿಂದ ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚಿತವಾಗಿ ಜಾಣ್ಮೆಯಿಂದ ಪರಿಹಾರ ಕಂಡುಕೊಳ್ಳಿ. ಬಾಹ್ಯಾಕಾಶ ಸಂಶೋಧನಾರ್ಥಿಗಳಿಗೆ ಸರ್ಕಾರದಿಂದ ಪ್ರಶಂಸೆ ಸಿಗಲಿದೆ.

ನುಡಿ ಬೆಳಗು

ದೂರ ದೃಷ್ಟಿ- ಭವಿಷ್ಯ ರೂಪಿಸುವ ಅಂತರಂಗ



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಎಲ್ಲರಿಗೂ ದೃಷ್ಟಿ ಇರುತ್ತದೆ. ದೃಷ್ಟಿ ಎಂದರೆ ನಮ್ಮ ಕಣ್ಣುಗಳಿಗೆ ಕಾಣುವ ದೃಶ್ಯಗಳನ್ನು ಭೌತಿಕವಾಗಿ ನೋಡುವುದು. ಆದರೆ ದೂರದೃಷ್ಟಿ ಎಂಬುದು ಪರಿಣಾಮಕಾರಿ ವ್ಯಕ್ತಿತ್ವದ ಅಂತಃಶಕ್ತಿ. ಇಂದು ನಾವು ಮಾಡುವ ಕೆಲಸವನ್ನು ಮುಂದಿನ ಪೀಳಿಗೆಯ ಭವಿಷ್ಯದ ಕುರಿತು ಯೋಚಿಸಿ ಮಾಡಿದಾಗ ಅದು ದೂರದೃಷ್ಟಿಯಾಗುತ್ತದೆ. ಅಂತಹ ದೂರದೃಷ್ಟಿತ್ವ ಉಳ್ಳ ವ್ಯಕ್ತಿಗಳನ್ನು 'ವಿಷನರಿ' ಅಥವಾ 'ದಾರ್ಶನಿಕರು' ಎಂದು ಕರೆಯುತ್ತಾರೆ.

ಪ್ರಖ್ಯಾತ ಸಮಾಜ ಸೇವಕಿ ಹೆಲನ್ ಕೆಲ್ಲರ್‌ಗೆ ಹುಟ್ಟುವಾಗಲೇ ಕಣ್ಣು ಕಾಣಿಸುತ್ತಿರಲಿಲ್ಲ. ಒಮ್ಮೆ ಆಕೆಯನ್ನು ಸಂದರ್ಶಕರು 'ಹುಟ್ಟಿನಿಂದಲೇ ದೃಷ್ಟಿಹೀನರಾಗುವುದಕ್ಕಿಂತ ದುರದೃಷ್ಟಕರವಾದುದು ಯಾವುದಾದರೂ ಇದೆಯೇ' ಎಂದು ಪ್ರಶ್ನಿಸಿದರಂತೆ. ಆಕೆಯ ಉತ್ತರ ಅತ್ಯಂತ ಮಾರ್ಮಿಕವಾಗಿತ್ತು. 'ದೂರದೃಷ್ಟಿ ಇಲ್ಲದೆ ಹುಟ್ಟುವುದು ದೃಷ್ಟಿಹೀನರಾಗಿ ಹುಟ್ಟುವುದಕ್ಕಿಂತ ದುರದೃಷ್ಟಕರ...' ಹೀಗಾಗಿ ಭವಿಷ್ಯದ ಕುರಿತು ಯಾವುದೇ ಚಿಂತನೆ ಇಲ್ಲದ ಬಹುಪಾಲು ಮಂದಿ ಕಣ್ಣಿದ್ದು ಕುರುಡರೇ ಸರಿ. ಸರ್ ಎಂ. ವಿಶ್ವೇಶ್ವರಯ್ಯನವರು ವೈಜ್ಞಾನಿಕ ದೂರದೃಷ್ಟಿ ಹೊಂದಿದ್ದ ದಾರ್ಶನಿಕ ವಾಸ್ತುಶಿಲ್ಪಿಗಳಾಗಿದ್ದರು. 1903ರಲ್ಲಿಯೇ ಪುಣೆಯ ಕಡಕವಾಸ್ಲಾ ಸರೋವರಕ್ಕೆ ಸ್ವಯಂಚಾಲಿತ ಸ್ಲೂಯಿಸ್ ಗೇಟುಗಳನ್ನು ರೂಪಿಸಿ, ನೀರು ವ್ಯರ್ಥವಾಗದೇ ಸದ್ಬಳಕೆಯಾಗುವಂತೆ ಮಾಡಿದ್ದು ಅವರ ದೂರದೃಷ್ಟಿಗೆ ಉದಾಹರಣೆ.


ಈ ದೂರದೃಷ್ಟಿತ್ವದಿಂದಲೇ ಅವರಿಗೆ ಪ್ರಪಂಚದ ಹಲವಾರು ನಗರಗಳ ಜಲ ನಿರ್ವಹಣೆಯನ್ನು, ತ್ಯಾಜ್ಯ ವಸ್ತು ನಿರ್ವಹಣೆಯನ್ನು ರೂಪಿಸುವ ಜವಾಬ್ದಾರಿ ಒದಗಿ ಬಂತು. 1908ರಲ್ಲಿ ಹೈದರಾಬಾದ್ ನಗರಕ್ಕೆ ಬಂದೊದಗಿದ ಮೂಸಿ ನದಿಯ ಭಾರಿ ಪ್ರವಾಹದ ವಿಪತ್ತಿನ ನಂತರ, ನಿಜಾಮರ ಆಹ್ವಾನದ ಮೇರೆಗೆ ಅದರ ನಿರ್ವಹಣೆಗೆ ಶಾಶ್ವತ ಪರಿಹಾರವನ್ನು ವಿಶ್ವೇಶ್ವರಯ್ಯನವರು ಸೂಚಿಸಿದರು. ಇದೇ ರೀತಿ ಯೆಮನ್ ದೇಶದ ಏಡನ್ ನಗರದ ಜಲ ನಿರ್ವಹಣೆಯಲ್ಲೂ ವಿಶ್ವೇಶ್ವರಯ್ಯನವರದ್ದೇ ಪ್ರಮುಖಪಾತ್ರ. ಬಿಹಾರದ ಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬೃಹತ್ ಮೋಕಂ ಸೇತುವೆ ನಿರ್ಮಾಣದಲ್ಲೂ ಅವರೇ ಮುಖ್ಯ ಸಲಹೆಗಾರರು. ನಮ್ಮ ರಾಜ್ಯದ ತುಂಗಭದ್ರಾ, ಕೆಆರ್‌ಎಸ್ ಜಲಾಶಯಗಳ ಹಾಗೂ ಜೋಗದ ಮಹಾತ್ಮ ಗಾಂಧಿ ಶಕ್ತಿ ಕೇಂದ್ರ ಸೇರಿ ಹಲವಾರು ಪ್ರಮುಖ ಜಲಯೋಜನೆಗಳೂ ಸರ್ ಎಂ.ವಿಯವರ ದೂರದೃಷ್ಟಿಯ ಫಲಿತಾಂಶಗಳೇ ಆಗಿವೆ.

ಅವರ ಮುಂಗಾಣ್ಕೆಯ ಕೊಡುಗೆ ನಮ್ಮ ರಾಜ್ಯದ ಪ್ರಮುಖ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲೂ ಇದೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್, ಆರ್ಥಿಕ ಸಬಲತೆಯ ಪ್ರತೀಕವಾದ ಮೈಸೂರು ಬ್ಯಾಂಕ್, ಛೇಂಬರ್ ಆಫ್ ಕಾಮರ್ಸ್, ಭದ್ರಾವತಿಯ ಉಕ್ಕಿನ ಕಾರ್ಖಾನೆ, ಬೆಂಗಳೂರು ಪ್ರೆಸ್, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರಿನ ಯು.ವಿ. ಇಂಜಿನಿಯರಿಂಗ್ ಕಾಲೇಜು... ಹೀಗೆ ಇಂದು ಬೃಹತ್ತಾಗಿ ಬೆಳೆದು ನಿಂತಿರುವ ಹತ್ತು ಹಲವು ಪ್ರಮುಖ ಸಂಸ್ಥೆಗಳ ಆರಂಭಕ್ಕೆ ಕಾರಣೀಭೂತರಾಗಿ, ನಾಡಿನ ಪ್ರಗತಿಗೆ ಕಾರಣವಾಗಿದ್ದು ವಿಶ್ವೇಶ್ವರಯ್ಯನವರ ಅದ್ಭುತ ದೂರದೃಷ್ಟಿ ಹಾಗೂ ದಾರ್ಶನಿಕತೆ.

ಪದಬಂಧ 5458 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಕೊನೆಗೆ ಅಂತರ ಕಾಯ್ದುಕೊಂಡೇ ಮಾಡಿದ ತರ್ಜುಮೆ (4)
6.ಮಲಯದಲ್ಲಿರುವ ಶ್ರೀಗಂಧ (4)
7.ಯಮನಿದ್ದಾಗಿನ ಸೂತ್ರ (3)
10.ಜನರೊಳಗಿರುವ ಆಳು (3)
11.ಅಶ್ವದ ಮುಖವಿದು (5)
12.ಎರವಲು ಪಡೆದು ನೋಡುತ್ತಿರುವ ಸಮುದ್ರ! (3)
13.ಕರದಿಂದ ಪ್ರಾರಂಭಿಸಿದ ಉತ್ಸವ (3)
15.ಕನ್ನ ಹಾಕಿ ಕದ್ದೊಯ್ದ ಚಾಳೀಸು (4)
17.ರಕ್ತ ವರ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ
1.ಈಕೆ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆ ಹುಡುಕಿ! (2)
3.ಸುಗಮವಾಗಿ ಕಿತ್ತಿರುವ ಹೂವು (2)
4.ಜಯವನ್ನು ಗಳಿಸಿರುವ ಒಡೆಯ (4)
8.ಭವ್ಯವಾದ ಸೌಧವಿದು (3)
9.ಕಳವಳಪಟ್ಟು ತಿಂದಿರುವ ತುತ್ತು (3)
10.ಸೀತೆಯ ತಂದೆ (3)
12.ಕರುವಿಗೆ ತೋರಿದ ದಯೆ (4)
14.ಎಲ್ಲೆಯ ಬಳಿ ತೋರಿದ ಅವಸರ (4)
16.ಕತ್ತೆತ್ತಿ ನೋಡಿದಾಗ ಗಾರ್ದಭ ಕಾಣಿಸಿತಲ್ಲಾ! (2)
17.ಉರಿಯುತ್ತಿರುವ ಇದ್ದಿಲು (2)



5457ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ಉಪವಾಸ
5.ಕರಡು 6.ಅನುಮತಿ
8.ತಾತಾ 9.ಉಮೇದು
10.ವಧು 11.ವನವಾಸ
12.ಲವಂಗ 15.ನದೀತೀರ
16.ಜರಡಿ

ಮೇಲಿಂದ ಕೆಳಕ್ಕೆ:
1.ಪತ್ನಿ 2.ವಿಧುರ
4.ಸದ್ಗತಿ 5.ಕರತಾಡನ
6.ಆಮದು 7.ಮದುವಣಿಗ
9.ಉಬ್ಬಸ 11.ವದನ
13.ವಂಶಜ 14.ರಾಡಿ

ಸುಡೊಕು 5844

		5	9				2	
	4				2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5843 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಬಡ್ಡಿ ದರ ಏರಿಕೆ ಸಾಧ್ಯತೆ ಇಲ್ಲ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ದ್ವೈವಾರ್ಷಿಕ ಹಣಕಾಸು ನೀತಿ ಪರಾಮರ್ಶೆಯು ಈ ವಾರದಲ್ಲಿ ನಡೆಯಲಿದ್ದು ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ.

ಹಣದುಬ್ಬರ ದರವು ಹೆಚ್ಚಾಗಿಯೇ ಇರುವುದು ಮತ್ತು ಜಾಗತಿಕ ವಿದ್ಯಮಾನಗಳ ಆಧಾರದಲ್ಲಿ ಆರ್‌ಬಿಐ ಈ ನಿರ್ಧಾರಕ್ಕೆ ಬರಬಹುದು ಎಂದು ವಿಶ್ಲೇಷಿಸಲಾಗಿದೆ. ಹೀಗಾಗಿ, ಚಿಲ್ಲರೆ ಮತ್ತು ಕಾರ್ಪೊರೇಟ್ ಸಾಲದ ಬಡ್ಡಿದರವು ಯಥಾಸ್ಥಿತಿಯಲ್ಲಿ ಮುಂದುವರಿಯಬಹುದು.

ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲಿ, 2022ರ ಮೇಯಲ್ಲಿ ಬಡ್ಡಿದರವನ್ನು ಏರಿಸಲು ಆರ್‌ಬಿಐ ಆರಂಭಿಸಿತ್ತು. ಈ ಫೆಬ್ರುವರಿಯಲ್ಲಿ ಅದು ಶೇ 6.5ರಷ್ಟಕ್ಕೆ ತಲುಪಿದೆ. ನಂತರದ ಸತತ ಮೂರು ದ್ವೈವಾರ್ಷಿಕ ಹಣಕಾಸು ನೀತಿ ಪರಾಮರ್ಶೆಯಲ್ಲಿಯೂ ಬಡ್ಡಿದರವನ್ನು ಹೆಚ್ಚಿಸಲಾಗಿಲ್ಲ.

ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ನೇತೃತ್ವದ ಆರು ಸದಸ್ಯರ ಹಣಕಾಸು ನೀತಿ ಸಮಿತಿಯು ಇದೇ ನಾಲ್ಕರಿಂದ (ಬುಧವಾರ) ಮೂರು ದಿನಗಳ ಸಭೆ ನಡೆಸಲಿದೆ. ಶಕ್ತಿಕಾಂತ್ ಅವರು ಆರರಂದು (ಶುಕ್ರವಾರ) ಸಮಿತಿಯ ನಿರ್ಧಾರವನ್ನು ಪ್ರಕಟಿಸಲಿದ್ದಾರೆ.

ಸಾಲ ನೀತಿ ಮತ್ತು ಬಡ್ಡಿದರವನ್ನು ಈಗಿರುವ ರೀತಿಯಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಹಣದುಬ್ಬರವು ಶೇ 6.8ರಷ್ಟರಲ್ಲಿಯೇ ಇದೆ. ಆದರೆ ಅಕ್ಟೋಬರ್‌ನಲ್ಲಿ ಇದು ಕೆಳಕ್ಕೆ ಇಳಿಯಬಹುದು. ಮುಂಗಾರು ಬೆಳೆಯ ಕುರಿತು ಅನಿಶ್ಚಿತತೆ ಮೂಡಿರುವುದರಿಂದ ಧಾನ್ಯದ ದರ ಏರಿಕೆಯಾಗಿ ಹಣದುಬ್ಬರವೂ ಏರಬಹುದು ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನಿವಿಸ್ ಹೇಳಿದ್ದಾರೆ.

ಹಣದುಬ್ಬರವು ಕುಸಿತದ ಹಾದಿಯಲ್ಲಿ ಇರುವುದರಿಂದ ಬಡ್ಡಿದರ ಏರಿಕೆಯ ಸಾಧ್ಯತೆ ಇಲ್ಲ. ಆದರೆ, ಹಣಕಾಸು ನೀತಿ ಸಮಿತಿಯು ಬಡ್ಡಿದರವನ್ನು ಇಳಿಸಲು ಇನ್ನಷ್ಟು ಕಾಲ ಕಾಯಬೇಕಾಗಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸ್ಪೇನ್‌ನಲ್ಲಿ ಬೆಂಕಿ ಅವಘಡ: 7 ಸಾವು

ಮ್ಯಾಡ್ರಿಡ್ (ರಾಯಿಟರ್ಸ್): ಆಗ್ನೇಯ ಸ್ಪೇನ್‌ನ ಮುರ್ಸಿಯಾ ನಗರದ ನೈಟ್‌ಕ್ಲಬ್‌ವೊಂದರಲ್ಲಿ ಭಾನುವಾರ ನಸುಕಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಏಳು ಜನರು ಸಾವನ್ನಪ್ಪಿದ್ದು, ಹಲವು ಮಂದಿ ಕಣ್ಮರೆಯಾಗಿರುವ ಶಂಕೆ ಇದೆ.

ಬೆಂಕಿಯ ಅವಘಡದಲ್ಲಿ ಮತ್ತಷ್ಟು ಜನರು ಸಿಲುಕಿದ್ದು, ಕಣ್ಮರೆಯಾಗಿದ್ದಾರೆ. ಅವರ ರಕ್ಷಣೆಗಾಗಿ ಅಗ್ನಿಶಾಮಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಳಿಗ್ಗೆ 6 ಗಂಟೆಗೆ ಬೆಂಕಿ ಕಾಣಿಸಿಕೊಂಡಿದ್ದು, ಈಗ ನಿಯಂತ್ರಣಕ್ಕೆ ತರಲಾಗಿದೆ. ಬೆಂಕಿ ಅವಘಡದ ಕಾರಣ ಪತ್ತೆ ಹಚ್ಚಲು ತುರ್ತು ಸೇವೆಗಳ ವಿಭಾಗದ ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ ಎಂದು ನಗರದ ಮೇಯರ್ ಜೋಸ್ ಬಲ್ಲೆಸ್ಟಾ ಹೇಳಿದ್ದಾರೆ.

ನಗರದ ಹೊರವಲಯದ ಅಟಲಾಯಸ್‌ನ ಟೀಟರ್ ನೈಟ್‌ಕ್ಲಬ್‌ನಲ್ಲಿ ಭಾನುವಾರ ನಸುಕಿನಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಹೊಗೆ ಸೇವಿಸಿ ಅಸ್ವಸ್ಥರಾದ ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮುರ್ಸಿಯಾ ನಗರದ ತುರ್ತು ಸೇವೆಗಳ ವಿಭಾಗವು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದೆ.

ನೈಟ್‌ಕ್ಲಬ್‌ನೊಳಗೆ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಿಯಂತ್ರಿಸುತ್ತಿರುವ, ಬೆಂಕಿಯು ಕ್ಲಬ್‌ನ ಮೇಲ್ಛಾವಣಿಯ ಒಂದು ಭಾಗವನ್ನು ಸುಟ್ಟು ಕರಕಲಾಗಿಸಿರುವ ದೃಶ್ಯಾವಳಿಗಳ ವಿಡಿಯೊ ಅನ್ನು ಅಗ್ನಿಶಾಮಕ ಸೇವೆಯು 'ಎಕ್ಸ್'ನಲ್ಲಿ ಬಿಡುಗಡೆ ಮಾಡಿದೆ.

ನಿಲ್ಲುತ್ತಾ ಮಿಡ್‌ಸ್ಮಾಲ್ ಕ್ಯಾಪ್ ಓಟ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.



ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ಕಳೆದ ಕೆಲ ತಿಂಗಳ ಅವಧಿಯಲ್ಲಿ ಹೂಡಿಕೆದಾರರಿಗೆ ಅತಿ ಹೆಚ್ಚು ಲಾಭಾಂಶ ತಂದುಕೊಟ್ಟಿವೆ. ಆದರೆ ಮಾರುಕಟ್ಟೆ ತಜ್ಞರು ಮಿಡ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳ ಈ ಓಟ ಹೆಚ್ಚು ಕಾಲ ಮುಂದುವರಿಯುವುದಿಲ್ಲ ಎನ್ನುತ್ತಿದ್ದಾರೆ. ಷೇರುಪೇಟೆ ಸೂಚ್ಯಂಕಗಳ ಈ ಗಣನೀಯ ಜಿಗಿತಕ್ಕೆ ಪೂರಕ ಕಾರಣಗಳು ಕಂಡುಬರುತ್ತಿಲ್ಲ ಎನ್ನುವುದು ಅವರ ತಕರಾರು. ಇಂತಹ ಸನ್ನಿವೇಶದಲ್ಲಿ ಹೂಡಿಕೆದಾರರು ಏನು ಮಾಡಬೇಕು? ಏನು ಮಾಡಬಾರದು ತಿಳಿಯೋಣ ಬನ್ನಿ.

ಮಿಡ್, ಸ್ಮಾಲ್ ಕ್ಯಾಪ್‌ನಲ್ಲಿ ದಾಖಲೆ ಲಾಭಾಂಶ, ದಾಖಲೆ ಹೂಡಿಕೆ: ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಕಳೆದ 6 ತಿಂಗಳ ಸಮಯದಲ್ಲಿ ಸರಾಸರಿ ಶೇ 33 ರಷ್ಟು ಜಿಗಿದಿದೆ. ಇದೇ ಅವಧಿಯಲ್ಲಿ ನಿಫ್ಟಿ ಸ್ಮಾಲ್ ಕ್ಯಾಪ್ 250 ಸೂಚ್ಯಂಕ ಸರಾಸರಿ ಶೇ 37 ರಷ್ಟು ಹೆಚ್ಚಳ ಕಂಡಿದೆ. ಇಷ್ಟೇ ಅಲ್ಲ, ಈ ವಲಯದ ಫಂಡ್‌ಗಳಿಗೆ ದೊಡ್ಡ ಮೊತ್ತದ ಹಣವೂ ಹರಿದುಬಂದಿದೆ. ಮಾರ್ಚ್‌ನಿಂದ ಆಗಸ್ಟ್ ಅವಧಿಯಲ್ಲಿ ಮಿಡ್ ಕ್ಯಾಪ್ ಫಂಡ್ ವಲಯಕ್ಕೆ ₹ 11,000 ಕೋಟಿ ಹೂಡಿಕೆಯಾಗಿದ್ದರೆ, ಸ್ಮಾಲ್ ಕ್ಯಾಪ್ ವಲಯಕ್ಕೆ ₹ 21,803 ಕೋಟಿ ಹೂಡಿಕೆಯಾಗಿದೆ.

ಬ್ರೋಕರೇಜ್ ಸಂಸ್ಥೆಗಳ ಕಳವಳ, ಹೂಡಿಕೆದಾರರಿಗೆ ಎಚ್ಚರಿಕೆ ಸಂದೇಶ: ಆಂತರಿಕ ಮೌಲ್ಯದಲ್ಲಿ ಯಾವುದೇ ಬದಲಾವಣೆ ಆಗದಿದ್ದರೂ ತಲೆಬುಡವಿಲ್ಲದ ಲೆಕ್ಕಾಚಾರದಲ್ಲಿ ಬಹುತೇಕ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳ ಷೇರುಗಳ ಬೆಲೆ ಹೆಚ್ಚಳವಾಗುತ್ತಿದೆ ಎಂದು ಕೋಟಕ್ ಸೆಕ್ಯುರಿಟೀಸ್ ಬ್ರೋಕರೇಜ್ ಸಂಸ್ಥೆ ವರದಿ ಬಿಡುಗಡೆ ಮಾಡಿದೆ. ಕೋಟಕ್ ಸೆಕ್ಯೂರಿಟೀಸ್ ಮಾತ್ರವಲ್ಲ, ಎಕ್ಸಿಸ್ ಸೆಕ್ಯೂರಿಟೀಸ್ ಕೂಡ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳ ಷೇರುಗಳು ವಾಸ್ತವ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಗೆ ಬಿಕರಿಯಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದೆ. ಈ ಹಂತದಲ್ಲಿ ಹೂಡಿಕೆದಾರರು ಜಾಗೃತರಾಗಿರಬೇಕು ಎಂಬ ಎಚ್ಚರಿಕೆಯ ಸಂದೇಶವನ್ನೂ ರವಾನಿಸಿದೆ.

ನೀವೇನು ಮಾಡಬೇಕು?: ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ವಾಸ್ತವಕ್ಕಿಂತ ಹೆಚ್ಚು ಮೌಲ್ಯಮಾಪನಕ್ಕೆ ಒಳಗಾಗಿರುವುದರಿಂದ ಈ ಫಂಡ್‌ಗಳಲ್ಲಿ ಒಂದೇ ಬಾರಿಗೆ ದೊಡ್ಡ ಮೊತ್ತ (ಲಮ್ ಸಮ್) ಹೂಡಿಕೆ ಮಾಡದಿರುವುದು ಒಳಿತು. ಇಲ್ಲದಿದ್ದರೆ ಮಾರುಕಟ್ಟೆ ದಿಢೀರ್ ಕುಸಿದರೆ ತಾತ್ಕಾಲಿಕ ನಷ್ಟಕ್ಕೆ ಒಳಗಾಗಬೇಕಾಗುತ್ತದೆ.

ಆದರೆ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ಪ್ರತಿ ತಿಂಗಳು ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮುಂದುವರಿಸುವುದರಲ್ಲಿ ಯಾವುದೇ ಸಮಸ್ಯೆಯಿಲ್ಲ. ಏಕೆಂದರೆ, ಎಸ್‌ಐಪಿ ಹೂಡಿಕೆಯಲ್ಲಿ ಬೆಲೆ ಜಾಸ್ತಿಯಿದ್ದಾಗ ಕಡಿಮೆ ಯುನಿಟ್‌ಗಳು ಸಿಗುತ್ತವೆ ಮತ್ತು ಬೆಲೆ ಕಮ್ಮಿ ಇದ್ದಾಗ ಹೆಚ್ಚು ಯೂನಿಟ್‌ಗಳು ಸಿಗುತ್ತವೆ. ಈ ಪ್ರಕ್ರಿಯೆಯಿಂದ ನಿಮ್ಮ ಹೂಡಿಕೆಯ ಮೇಲೆ ಅನಿಶ್ಚಿತತೆ ಕಡಿಮೆಯಾಗುತ್ತದೆ. ಉದಾಹರಣೆಗೆ ನಿಫ್ಟಿ ಮಿಡ್ ಕ್ಯಾಪ್ 150 ಮತ್ತು ನಿಫ್ಟಿ ಸ್ಮಾಲ್ ಕ್ಯಾಪ್ 250 ಸೂಚ್ಯಂಕಗಳು ಆಗಸ್ಟ್ 2015 ರಲ್ಲಿ ಹೆಚ್ಚು ಗಳಿಕೆ ಮಟ್ಟ ಮುಟ್ಟಿದವು. ಆದರೆ ಫೆಬ್ರುವರಿ 2016 ರ ವೇಳೆಗೆ ಗಣನೀಯ ಕುಸಿತ ಕಂಡವು. ಮಿಡ್ ಕ್ಯಾಪ್ ಸೂಚ್ಯಂಕ ಶೇ 18 ರಷ್ಟು ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 23 ರಷ್ಟು ಕುಸಿಯಿತು. ಯಾರು ಎಸ್‌ಐಪಿ ಹೂಡಿಕೆ ಮುಂದುವರಿಸಿದರೋ ಅವರಿಗೆ ಸಮಸ್ಯೆಯಾಗಲಿಲ್ಲ. ಆಗಸ್ಟ್ 2015 ರಲ್ಲಿ ಆರಂಭಿಸಿದ ಎಸ್‌ಐಪಿ ಹೂಡಿಕೆಗಳು 8 ವರ್ಷಗಳ ಅವಧಿಯಲ್ಲಿ ಶೇ 20 ರಷ್ಟು ಲಾಭಾಂಶ ತಂದುಕೊಟ್ಟವು. ಇದೊಂದು ಉದಾಹರಣೆ ಅಷ್ಟೇ. ಎಸ್‌ಐಪಿ ಹೂಡಿಕೆಯಿಂದ ಮಾರುಕಟ್ಟೆ ಅನಿಶ್ಚಿತತೆಯನ್ನು ಹೇಗೆ ಮೀರಿ ನಿಲ್ಲಬಹುದು ಎನ್ನುವುದಕ್ಕೆ ಹತ್ತಾರು ನಿದರ್ಶನಗಳಿವೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)



ಷೇರುಪೇಟೆಯಲ್ಲಿ ಮುಂದುವರಿದ ಅನಿಶ್ಚಿತ ಓಟ

ಷೇರುಪೇಟೆಯಲ್ಲಿ ಸದ್ಯ ಅನಿಶ್ಚಿತ ಸ್ಥಿತಿ ಮನೆ ಮಾಡಿದೆ. ಸೆಪ್ಟೆಂಬರ್ 29ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. ಜಾಗತಿಕವಾಗಿ ಕೇಂದ್ರೀಯ ಬ್ಯಾಂಕ್‌ಗಳು ಸದ್ಯದ ಸ್ಥಿತಿಯಲ್ಲಿ ಬಡ್ಡಿ ದರ ಇಳಿಕೆ ಇಲ್ಲ ಎನ್ನುವ ಮುನ್ಸೂಚನೆ ನೀಡಿರುವುದು, ತೈಲ ಬೆಲೆ ಹೆಚ್ಚಳ, ಡಾಲರ್ ಮೌಲ್ಯ ಹೆಚ್ಚಳ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ. ಕಳೆದ ವಾರ 65,828 ರಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.27 ರಷ್ಟು ಕುಸಿದಿದೆ. 19,638 ರಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.18 ರಷ್ಟು ತಗ್ಗಿದೆ. ಆದರೆ ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.2 ರಷ್ಟು ಗಳಿಸಿಕೊಂಡಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.3 ರಷ್ಟು ಜಿಗಿದಿದೆ.

ವಲಯವಾರು ನೋಡಿದಾಗ ಬಿಎಸ್‌ಇ ಟೆಲಿಕಾಂ ಸೂಚ್ಯಂಕ ಶೇ 2.7, ಬಿಎಸ್‌ಇ ಹೆಲ್ತ್ ಕೇರ್ ಸೂಚ್ಯಂಕ ಶೇ 2.6, ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2.5 ರಷ್ಟು ಗಳಿಸಿಕೊಂಡಿವೆ. ಬಿಎಸ್‌ಇ ಮೆಟಲ್ ಮತ್ತು ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕಗಳು ತಲಾ ಶೇ 2 ರಷ್ಟು ಗಳಿಸಿಕೊಂಡಿವೆ. ಉಳಿದಂತೆ ಬಿಎಸ್‌ಇ ಐ.ಟಿ. ಸೂಚ್ಯಂಕ ಶೇ 3 ಮತ್ತು ಆಟೊ ಸೂಚ್ಯಂಕ ಶೇ 0.5 ರಷ್ಟು ಕುಸಿದಿವೆ.

ಗಳಿಕೆ–ಇಳಿಕೆ: ಸೆನ್ಸೆಕ್ಸ್‌ನಲ್ಲಿ ಬಜಾಜ್ ಫೈನಾನ್ಸ್ ಶೇ 4.5, ಕೋಲ್ ಇಂಡಿಯಾ, ಶೇ 4.15, ಒಎನ್‌ಜಿಸಿ ಶೇ 3.54, ಎಲ್ ಆ್ಯಂಡ್ ಟಿ, ಶೇ 3.53, ಎನ್‌ಟಿಪಿಸಿ ಶೇ 3.24, ಸನ್ ಫಾರ್ಮಾ ಶೇ 2.13, ಎಕ್ಸಿಸ್ ಬ್ಯಾಂಕ್ ಶೇ 1.82 , ಏರ್‌ಟೆಲ್ ಶೇ 1.67 ಮತ್ತು ಟಾಟಾ ಮೋಟರ್ಸ್ ಶೇ 1.49 ರಷ್ಟು ಹೆಚ್ಚಳ ಕಂಡಿವೆ. ಇನ್ಫೊಸಿಸ್ ಶೇ 4.07, ಏಷ್ಯನ್ ಪೇಂಟ್ಸ್ ಶೇ 3.50, ಮಹಿಂದ್ರ ಆ್ಯಂಡ್ ಮಹಿಂದ್ರ ಶೇ 3.37 , ಎಚ್‌ಸಿಎಲ್ ಟೆಕ್ ಶೇ 2.93, ಯೆಸ್ ಬ್ಯಾಂಕ್ ಶೇ 2.49 ಮತ್ತು ಟಿಸಿಎಸ್ ಶೇ 2 ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ವೇಲಿಯಂಟ್ ಲ್ಯಾಬೊರೇಟರಿಸ್ ಮತ್ತು ಪ್ಲಾಜಾ ವೈಯರ್ಸ್ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಜರುಗಲಿದೆ. ಉಳಿದಂತೆ ಮಾರುಕಟ್ಟೆಯಲ್ಲಿ ತಕ್ಷಣದ ಏರಿಳಿತಗಳಾಗುವ ಸಾಧ್ಯತೆ ಇರುತ್ತದೆ. ಜಾಗತಿಕ ವಿದ್ಯಮಾನಗಳು ದೇಶಿಯ ಬೆಳವಣಿಗೆಗಳು ಹಾಗೂ ಮುಂಬರುವ ಕಂಪನಿಗಳ ತ್ರೈಮಾಸಿಕ ವರದಿಗಳು ಷೇರುಪೇಟೆ ಸೂಚ್ಯಂಕಗಳ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಆತ್ಮಾಹುತಿ ಬಾಂಬ್ ದಾಳಿ: ದಾಳಿಕೋರನ ಹತ್ಯೆ

ಅಂಕಾರಾ (ಎಪಿ): ಮೂರು ತಿಂಗಳ ಬೇಸಿಗೆಯ ವಿರಾಮದ ನಂತರ ಸಂಸತ್ತು ಪುನರಾರಂಭದ ಕೆಲವೇ ತಾಸಿಗೂ ಮುನ್ನ ಟರ್ಕಿಯ ರಾಜಧಾನಿ ಅಂಕಾರಾದ ಹೃದಯಭಾಗದಲ್ಲಿ ಭಾನುವಾರ ಆತ್ಮಾಹುತಿ ಬಾಂಬ್ ದಾಳಿಕೋರ ಸ್ಫೋಟಕ ಸಾಧನ ಸ್ಫೋಟಿಸಿದ್ದಾನೆ. ಈ ವೇಳೆ ಪೊಲೀಸರ ಗುಂಡೇಟಿಗೆ ಮತ್ತೊಬ್ಬ ದಾಳಿಕೋರ ಹತನಾಗಿದ್ದಾನೆ ಎಂದು ಆಂತರಿಕ ಭದ್ರತಾ ಸಚಿವರು ತಿಳಿಸಿದ್ದಾರೆ.

ಆಂತರಿಕ ಭದ್ರತಾ ಸಚಿವಾಲಯದ ಪ್ರವೇಶದ್ವಾರದ ಬಳಿ ನಡೆದ ಈ ದಾಳಿಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಚಿವ ಅಲಿ ಯೆರ್ಲಿಕಾಯಾ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಜಾಗತಿಕ ಪ್ರಶಸ್ತಿ: ಅಂತಿಮ ಪಟ್ಟಿಯಲ್ಲಿ ಭಾರತದ ಇಬ್ಬರು ಶಿಕ್ಷಕರು

ಲಂಡನ್(ಪಿಟಿಐ): 'ಜಾಗತಿಕ ಶಿಕ್ಷಕರ ಪ್ರಶಸ್ತಿ (ಗ್ಲೋಬಲ್ ಟೀಚರ್ ಪ್ರೈಜ್)2023'ಕ್ಕೆ ಅಂತಿಮಗೊಳಿಸಲಾಗಿರುವ 50 ಶಿಕ್ಷಕರ ಪಟ್ಟಿಯನ್ನು ಲಂಡನ್‌ನಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಲಾಗಿದ್ದು, ಪಶ್ಚಿಮ ಬಂಗಾಳದ ಪ್ರಾಥಮಿಕ ಶಾಲಾ ಶಿಕ್ಷಕ ದೀಪ್ ನಾರಾಯಣ್ ನಾಯಕ್ ಮತ್ತು ಆಂಧ್ರ ಪ್ರದೇಶದ ಇಂಗ್ಲಿಷ್ ಶಿಕ್ಷಕ ಹರಿ ಕೃಷ್ಣ ಪಟಾಚಾರು ಅವರು ಸ್ಥಾನ ಪಡೆದುಕೊಂಡಿದ್ದಾರೆ.

ಯುನೆಸ್ಕೊ ಮತ್ತು ಯುಎಇಯ 'ದುಬೈ ಕೇರ್ಸ್' ಸಹಭಾಗಿತ್ವದಲ್ಲಿ 'ವರ್ಕಿ ಫೌಂಡೇಶನ್' ನೀಡುತ್ತಿರುವ 10 ಲಕ್ಷ ಡಾಲರ್ (₹8.30 ಕೋಟಿ) ಮೊತ್ತದ ಪ್ರಶಸ್ತಿಗೆ ವಿಶ್ವದ 130 ದೇಶಗಳಿಂದ 7,000 ನಾಮ ನಿರ್ದೇಶನ ಮತ್ತು ಅರ್ಜಿಗಳು ಬಂದಿದ್ದವು. ಈ ಪೈಕಿ 50 ಶಿಕ್ಷಕರ ಹೆಸರನ್ನು ಪ್ರಶಸ್ತಿಗೆ ಅಂತಿಮಗೊಳಿಸಲಾಗಿದೆ.

ಅಂತಿಮ ಪಟ್ಟಿಯಲ್ಲಿರುವ 50 ಶಿಕ್ಷಕರ ಸಂಖ್ಯೆಯನ್ನು ಮುಂದಿನ ಹಂತದಲ್ಲಿ 10ಕ್ಕೆ ಇಳಿಸಲಾಗುತ್ತದೆ. ನಂತರ, 10 ಶಿಕ್ಷಕರ ಪಟ್ಟಿಯಿಂದ ಒಬ್ಬರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಬಹುತೇಕ ಈ ವರ್ಷಾಂತ್ಯದಲ್ಲಿ ಪ್ರಶಸ್ತಿ ಘೋಷಣೆಯಾಗಲಿದೆ.

₹1.62 ಲಕ್ಷ ಕೋಟಿ ಸಂಗ್ರಹ

ಜಿಎಸ್‌ಟಿ: ನಾಲ್ಕನೇ ಬಾರಿ ₹1.60 ಲಕ್ಷ ಕೋಟಿ ದಾಟಿದ ತೆರಿಗೆ ವರಮಾನ


ಪ್ರಜಾವಾಣಿ ವಾರ್ತೆ/ಪಿಟಿಐ


ನವದೆಹಲಿ: 'ಸೆಪ್ಟೆಂಬರ್ ತಿಂಗಳಿನಲ್ಲಿ ₹1.62 ಲಕ್ಷ ಕೋಟಿಯಷ್ಟು ಸರಕು ಮತ್ತು ಸೇವಾ ತೆರಿಗೆಯು (ಜಿಎಸ್‌ಟಿ) ಸಂಗ್ರಹವಾಗಿದೆ' ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. 'ಕಳೆದ ವರ್ಷ ಇದೇ ತಿಂಗಳಿನಲ್ಲಿ ₹1.47 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಅಂದರೆ, ಕಳೆದ ವರ್ಷ ಸೆಪ್ಟೆಂಬರ್‌ಗಿಂತ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10ರಷ್ಟು ಏರಿಕೆಯಾಗಿದೆ. ಜೊತೆಗೆ, ಇದೇ ಆರ್ಥಿಕ ವರ್ಷದಲ್ಲಿ ತಿಂಗಳಿಗೆ ₹1.60 ಲಕ್ಷ ಕೋಟಿಗೂ ಮೀರಿ ತೆರಿಗೆ ಸಂಗ್ರಹವಾಗುತ್ತಿರುವುದು ಇದು ನಾಲ್ಕನೇ ಬಾರಿ' ಎಂದೂ ಸಚಿವಾಲಯ ಹೇಳಿದೆ.

ತಿಂಗಳಿನಿಂದ ತಿಂಗಳಿಗೆ ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆ ಕಂಡುಬರುತ್ತಿದೆ. 2023–24ನೇ ಆರ್ಥಿಕ ವರ್ಷದ ಮೊದಲ ಅರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ಜಿಎಸ್‌ಟಿ ಸಂಗ್ರಹದ ಮೊತ್ತ ₹9.92 ಲಕ್ಷ ಕೋಟಿಯಷ್ಟಾಗಿದೆ. ಕಳೆದ ವರ್ಷದ ಮೊದಲ ಅರ್ಧ ಭಾಗಕ್ಕಿಂತ ಈ ವರ್ಷದ ಮೊದಲ ಅರ್ಧ ಭಾಗದಲ್ಲಿ ಶೇ 11ರಷ್ಟು ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ.

ಇದೇ ವೇಳೆ ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ತಮಿಳುನಾಡಿನ ಪಾಲು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ತೆರಿಗೆ ಸಂಗ್ರಹದಲ್ಲಿ ಗುಜರಾತ್ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಮೂರನೇ ಸ್ಥಾನದಲ್ಲಿತ್ತು. ಆದರೆ, ಈ ಬಾರಿ ಅದು ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಸಾಲು ಸಾಲು ಹಬ್ಬಗಳ ಕಾರಣದಿಂದಾಗಿ ಸೆಪ್ಟೆಂಬರ್ ತಿಂಗಳ ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆಯಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ನೀತಿಯು ಈಗ ಫಲ ಕೊಡಲು ಆರಂಭಿಸಿದೆ ಎಂದೂ ಕೆಲವರು ಹೇಳುತ್ತಿದ್ದಾರೆ. ಜಮ್ಮು–ಕಾಶ್ಮೀರ, ಮಣಿಪುರ, ಅರುಣಾಚಲ ಪ್ರದೇಶ ಮತ್ತು ಲಡಾಖ್‌ನಲ್ಲೂ ಜಿಎಸ್‌ಟಿ ಸಂಗ್ರಹ ಏರಿಕೆಯಾಗಿದೆ.







'ಬ್ಲೂ ಕಾಲರ್' ಕಾರ್ಮಿಕರಿಗೆ ಪರ್ಯಾಯ: ವಿಪುಲ ಅವಕಾಶ

ನವದೆಹಲಿ (ಪಿಟಿಐ): ದೈಹಿಕ ಶ್ರಮ ಬೇಡುವ ಉದ್ಯೋಗಗಳನ್ನು (ಬ್ಲೂ ಕಾಲರ್ ಉದ್ಯೋಗ) ಸ್ವಯಂಚಾಲಿತಗೊಳಿಸುವುದಕ್ಕೆ ಭಾರತದಲ್ಲಿ ವಿಪುಲ ಅವಕಾಶಗಳಿವೆ ಎಂದು ಫೌಂಟೇನ್ ಸಂಸ್ಥೆ ಹೇಳಿದೆ.

ದೈಹಿಕ ಶ್ರಮಕ್ಕೆ ಬದಲಾಗಿ ತಂತ್ರಜ್ಞಾನ ಬಳಸುವ 'ಆಟೊಮೇಷನ್ ಸಾಫ್ಟ್‌ವೇರ್' ಸೇವೆ ಒದಗಿಸುವ ಸಂಸ್ಥೆ ಇದಾಗಿದೆ. ಭಾರತ, ಅಮೆರಿಕ, ಬ್ರಿಟನ್, ಫ್ರಾನ್ಸ್, ದಕ್ಷಿಣ ಆಫ್ರಿಕ ಸೇರಿ ಇನ್ನೂ ಹಲವು ದೇಶಗಳಲ್ಲಿ ಈ ಸಂಸ್ಥೆ ಈಗಾಗಲೇ ಕಾರ್ಯಾಚರಿಸುತ್ತಿದೆ. ಸಂಸ್ಥೆಯ ಕಾರ್ಯಾಚರಣೆಗೆ ದೊಡ್ಡಮಟ್ಟದ ಅವಕಾಶ ಇರುವ ದೇಶಗಳು ಎಂದು ಭಾರತ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳನ್ನು ಸಂಸ್ಥೆ ಗುರುತಿಸಿದೆ.

ಈ ಕುರಿತು ಸುದ್ದಿಸಂಸ್ಥೆ ಜೊತೆ ಮಾತನಾಡಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸೀನ್ ಬೆಹ್ರ್, ಬ್ಲೂ ಕಾಲರ್ ಉದ್ಯೋಗಗಳನ್ನು ಸ್ವಯಂಚಾಲಿತಗೊಳಿಸುವ ದಿಸೆಯಲ್ಲಿ ಭಾರತದ ಮಾರುಕಟ್ಟೆಯ ಮಹತ್ವವನ್ನು ಸಂಸ್ಥೆ ಮನಗಂಡಿದೆ. ಬ್ಲೂ ಕಾಲರ್ ಮತ್ತು ಗ್ರೇ ಕಾಲರ್ ಉದ್ಯೋಗಿಗಳು ನಿರ್ವಹಿಸುವಂಥ ಕೆಲಸಗಳ ಕಡೆ ಸಂಸ್ಥೆ ಗಮನ ಕೇಂದ್ರೀಕರಿಸಿದೆ ಎಂದರು.

ಈ ವರ್ಗದ ಉದ್ಯೋಗಿಗಳು ಪವರ್‌ಪಾಯಿಂಟ್, ಎಕ್ಸೆಲ್‌ನಂಥ ಸಾಫ್ಟ್‌ವೇರ್ ಬಳಸಿ ಕೆಲಸ ಮಾಡುವುದಿಲ್ಲ. ಆದರೆ, ಉತ್ಪನ್ನ ತಯಾರಿಕೆಯಂಥ ಕೆಲಸಗಳಲ್ಲಿ ತೊಡಗುತ್ತಾರೆ. ಈ ವಲಯದಲ್ಲಿ ಉದ್ಯೋಗಿಗಳನ್ನು ನೇಮಿಸಿಕೊಳ್ಳುವುದು ಮತ್ತು ಅವರು ಉದ್ಯೋಗದಲ್ಲಿ ಮುಂದುವರಿಯುವಂತೆ ಮಾಡುವುದು ಈಚಿನ ದಿನಗಳಲ್ಲಿ ಸವಾಲಿನ ಕೆಲಸವಾಗಿದೆ ಎಂದರು.

ಬ್ಲೂ ಮತ್ತು ಗ್ರೇ ಕಾಲರ್ ವಲಯದಲ್ಲಿ ಬಂಡವಾಳ ಹೂಡುವ ಮತ್ತು ಉದ್ಯಮವನ್ನು ವಿಸ್ತರಿಸುವ ದಿಸೆಯಲ್ಲಿ ಭಾರತವು ಅತ್ಯಂತ ಆಕರ್ಷಕ ಮಾರುಕಟ್ಟೆಯಾಗಿದೆ. ಈ ವಲಯದ ಉದ್ಯೋಗ ಮಾರುಕಟ್ಟೆಯ ಸಂಭವನೀಯ ಬೆಳವಣಿಗೆ ಕೂಡಾ ಭಾರತವನ್ನು ಬಂಡವಾಳ ಹೂಡಲು ಅವಕಾಶವಿರುವ ದೇಶವನ್ನಾಗಿಸಿದೆ.

ಚೀನಾ ಕೂಡ ಇಂಥದ್ದೇ ಅವಕಾಶಗಳನ್ನು ಹೊಂದಿದೆ. ಆದರೆ ಅಲ್ಲಿ ಎದುರಾಗುವ ಭೌಗೋಳಿಕ–ರಾಜಕೀಯ ಸವಾಲುಗಳ ಕಾರಣಕ್ಕೆ ಅಲ್ಲಿ ಕಾರ್ಯಾಚರಿಸುವುದು ಕಷ್ಟ ಎಂದು ಸೀನ್ ಹೇಳಿದ್ದಾರೆ.

ಮಾರುತಿ ಕಾರು ಸಗಟು ಮಾರಾಟ ದಾಖಲೆ ಹೆಚ್ಚಳ



ನವದೆಹಲಿ (ಪಿಟಿಐ): ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ತನ್ನ ಕಾರುಗಳ ಸಗಟು ಮಾರಾಟದಲ್ಲಿ ಶೇ 3ರಷ್ಟು ಹೆಚ್ಚಳವಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾ (ಎಂಎಸ್‌ಐ) ತಿಳಿಸಿದೆ.

ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾದ ಮಾರುತಿ ಸುಜುಕಿಯು ಸೆಪ್ಟೆಂಬರ್‌ನಲ್ಲಿ ಒಟ್ಟು 1.81 ಲಕ್ಷ ಕಾರುಗಳನ್ನು ಮಾರಾಟ ಮಾಡಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಒಟ್ಟು 1.76 ಲಕ್ಷ ವಾಹನಗಳನ್ನು ಮಾರಾಟ ಮಾಡಿತ್ತು. ಇದು ಈವರೆಗೆ ತಿಂಗಳೊಂದರಲ್ಲಿ ಆಗಿರುವ ಗರಿಷ್ಠ ಮಾರಾಟವಾಗಿದೆ ಎಂದು ಕಂಪನಿ ಹೇಳಿದೆ.

ದೇಶೀಯವಾಗಿಯೂ ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಹೆಚ್ಚಳವಾಗಿದೆ. ಸೆಪ್ಟೆಂಬರ್‌ನಲ್ಲಿ ಒಟ್ಟು 1.51 ಲಕ್ಷ ವಾಹನಗಳನ್ನು ಮಾರಾಟ ಮಾಡಲಾಗಿದೆ. ಕಳೆದ ವರ್ಷದ ಇದೇ ತಿಂಗಳಿನ ವಹಿವಾಟಿಗೆ ಹೋಲಿಸಿದರೆ ಶೇ 2ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ಅಲ್ಲದೇ, ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಮಾರಾಟವಾಗಿರುವ ಕಂಪನಿಯ ಕಾರುಗಳ ಸಂಖ್ಯೆ 10 ಲಕ್ಷ ದಾಟಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ಅರ್ಧದಲ್ಲಿ 10.50 ಲಕ್ಷ ಕಾರುಗಳು ಮಾರಾಟವಾಗಿವೆ. 2022ರಲ್ಲಿ ಇದೇ ಅವಧಿಯಲ್ಲಿ ಒಟ್ಟು 9.85 ಲಕ್ಷ ಕಾರುಗಳನ್ನು ಮಾರಾಟ ಮಾಡಲಾಗಿತ್ತು. ಮೊದಲಾರ್ಧದ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಕಾರುಗಳ ಮಾರಾಟವು ದಾಖಲೆ ಬರೆದಿದೆ ಎಂದು ಅದು ವಿವರಿಸಿದೆ.

ಆದರೆ, ಆಲ್ಟೊ ಹಾಗೂ ಎಸ್–ಪ್ರೆಸ್ಸೊ ಕಾರುಗಳ ಮಾರಾಟ ಹೆಚ್ಚಳವಾಗಿಲ್ಲ. ಕೇವಲ 10,351 ಕಾರುಗಳಷ್ಟೇ ಮಾರಾಟವಾಗಿವೆ. ಕಳೆದ ಸಾಲಿಗೆ ಹೋಲಿಸಿದರೆ ಈ ಮಾದರಿಯ ಕಾರುಗಳ ಮಾರಾಟವು ಶೇ 65ರಷ್ಟು ಕುಸಿತವಾಗಿದೆ. ಅಲ್ಲದೇ, ಸಣ್ಣ ಕಾರುಗಳ ಮಾರಾಟವೂ ಕಡಿಮೆಯಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾ ತಿಳಿಸಿದೆ.

ರಫ್ತು ಏರಿಕೆ

22,511
ಈ ಸೆಪ್ಟೆಂಬರ್‌ನಲ್ಲಿ ರಫ್ತಾದ ಕಾರುಗಳ ಸಂಖ್ಯೆ

21,403 ಕಳೆದ ಸೆಪ್ಟೆಂಬರ್‌ನಲ್ಲಿ ರಫ್ತಾದ ಕಾರುಗಳ ಸಂಖ್ಯೆ

ಮಹೀಂದ್ರ ಆ್ಯಂಡ್ ಮಹೀಂದ್ರ ಮಾರಾಟ ಶೇ 17 ಪ್ರಗತಿ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಲಿಮಿಟೆಡ್‌ನ ಆಟೊ ಮಾರಾಟ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 17ರಷ್ಟು ಹೆಚ್ಚಾಗಿದ್ದು, ಒಟ್ಟು 75,604 ವಾಹನಗಳು ಮಾರಾಟವಾಗಿವೆ ಎಂದು ಕಂಪನಿ ಭಾನುವಾರ ತಿಳಿಸಿದೆ.

ಕಳೆದ ತಿಂಗಳು 41,267 ಪ್ರಯಾಣಿಕರ ವಾಹನಗಳನ್ನು ಮಾರಾಟ ಮಾಡಿದ್ದರೆ, 2022ರ ಸೆಪ್ಟೆಂಬರ್‌ನಲ್ಲಿ 34,508 ವಾಹನಗಳು ಮಾರಾಟವಾಗಿವೆ. ಈ ವಿಭಾಗದಲ್ಲಿ ಶೇ 20ರಷ್ಟು ಬೆಳವಣಿಗೆ ಆಗಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ತಿಳಿಸಿದೆ.

ಎಂಜಿ ಮೋಟಾರ್ ಮಾರಾಟ ಶೇ 31ರಷ್ಟು ಏರಿಕೆ

ಎಂಜಿ ಮೋಟಾರ್ ವಾಹನಗಳ ಮಾರಾಟವು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 31ರಷ್ಟು ಹೆಚ್ಚಳ ಕಂಡಿದ್ದು, 5,003 ವಾಹನಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಒಟ್ಟಾರೆ ಮಾರಾಟದಲ್ಲಿ ಶೇ 25ರಷ್ಟು ವಿದ್ಯುತ್ ಚಾಲಿತ ವಾಹನಗಳಿವೆ. ಝಡ್‌ಎಸ್ ಇವಿ ಮತ್ತು ಆಸ್ಟರ್ ಬ್ಲಾಕ್ ಸ್ಟಾರ್ಮ್ ಮಾದರಿ ವಾಹನಗಳು ಗ್ರಾಹಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ಪಡೆದಿವೆ ಎಂದು ಕಂಪನಿ ತಿಳಿಸಿದೆ.

ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್: ಫೈನಲ್‌ನಲ್ಲಿ ಚೀನಾ ಎದುರು ನಿರಾಸೆ

ಪುರುಷರ ತಂಡಕ್ಕೆ ಬೆಳ್ಳಿ ಪದಕ



ಭಾರತ ತಂಡದ ಆಟಗಾರರು ಬೆಳ್ಳಿ ಪದಕದೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ಬ್ಯಾಡ್ಮಿಂಟನ್ ತಂಡದವರು ಏಷ್ಯನ್ ಕ್ರೀಡಾಕೂಟದಲ್ಲಿ ಬೆಳ್ಳಿ ಜಯಿಸಿದರು. ಭಾನುವಾರ ನಡೆದ ಫೈನಲ್‌ನಲ್ಲಿ 2–3 ರಿಂದ ಚೀನಾ ಕೈಯಲ್ಲಿ ಪರಾಭವಗೊಂಡರು. ಎಚ್.ಎಸ್.ಪ್ರಣಯ್ ಅವರು ಗಾಯಗೊಂಡು ಕಣಕ್ಕಿಳಿಯದೆ ಇದ್ದದ್ದು ಭಾರತಕ್ಕೆ ಮುಳುವಾಗಿ ಪರಿಣಮಿಸಿತು.

ಫೈನಲ್‌ನಲ್ಲಿ ಉತ್ತಮ ಆರಂಭ ಪಡೆದಿದ್ದ ಭಾರತ 2–0 ಯಿಂದ ಮುನ್ನಡೆ ಸಾಧಿಸಿತ್ತು. ಮರುಹೋರಾಟ ನಡೆಸಿದ ಚೀನಾ, ಮುಂದಿನ ಮೂರೂ ಪಂದ್ಯಗಳನ್ನು ಪಂದ್ಯಗಳನ್ನು ಗೆದ್ದು ಚಿನ್ನಕ್ಕೆ ಮುತ್ತಿಟ್ಟಿತು.

ಮೊದಲ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ 22–20, 14–21, 21–18 ರಿಂದ ಶಿ ಯುಕಿ ಅವರನ್ನು ಮಣಿಸಿದರು.

ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ 21–15, 21–18 ರಿಂದ ಲಿಯಾಂಗ್ ವಿ ಕೆಂಗ್– ವಾಂಗ್ ಚಾಂಗ್ ವಿರುದ್ಧ ಗೆದ್ದು ಭಾರತಕ್ಕೆ 2–0 ಮೇಲುಗೈ ತಂದಿತ್ತರು.

ಆದರೆ ಎರಡನೇ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ 22–24, 9–21 ರಿಂದ ಆಲ್ ಇಂಗ್ಲೆಂಡ್ ಚಾಂಪಿಯನ್ ಲಿ ಶಿಫೆಂಗ್ ಎದುರು ಸೋತರು.

ಮೊದಲ ಗೇಮ್‌ನಲ್ಲಿ 18–14 ರಿಂದ ಮುನ್ನಡೆ ಸಾಧಿಸಿದ್ದ ಶ್ರೀಕಾಂತ್, ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟರು.

ಎರಡನೇ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ– ಸಾಯಿ ಪ್ರತೀಕ್ 6–21, 15–21 ರಿಂದ ಲಿಯು ಯು ಚೆನ್– ಯು ಕ್ಸುವಾನ್ ಯಿ ಎದುರು ಸೋತರು. ಇದರಿಂದ ಪಂದ್ಯ 2–2 ರಲ್ಲಿ ಸಮಬಲ ಆಯಿತು.

ನಿರ್ಣಾಯಕ ಸಿಂಗಲ್ಸ್‌ನಲ್ಲಿ ಪ್ರಣಯ್ ಬದಲು ಕಣಕ್ಕಿಳಿದ ಮಿಥುನ್ ಮಂಜುನಾಥ್ 12–21, 4–21 ರಿಂದ ವಿಶ್ವದ 20ನೇ ರ್‍ಯಾಂಕ್‌ನ ಆಟಗಾರ ವೆಂಗ್ ಹಾಂಗ್ ಯಾಂಗ್ ಅವರಿಗೆ ಮಣಿದರು. ಇದರಿಂದ ಚಿನ್ನ ಗೆಲ್ಲುವ ಅವಕಾಶ ಭಾರತದ ಕೈತಪ್ಪಿತು. ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಪುರುಷರ ತಂಡ ವಿಭಾಗದಲ್ಲಿ ಭಾರತಕ್ಕೆ ದೊರೆತ ಮೊದಲ ಬೆಳ್ಳಿ ಪದಕ ಇದು.

ಪದಕ ಪಟ್ಟಿ (ಅಗ್ರ 10 ದೇಶ)

ರ್‍ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	133	72	39	244
2	ದಕ್ಷಿಣ ಕೊರಿಯಾ	30	35	60	125
3	ಜಪಾನ್	29	41	42	112
4	ಭಾರತ	13	21	19	53
5	ಉಜ್ಬೇಕಿಸ್ತಾನ	11	12	17	40
6	ಥಾಯ್ಲೆಂಡ್	10	6	14	30
7	ಚೀನಾತೈಪೆ	9	10	14	33
8	ಹಾಂಗ್‌ಕಾಂಗ್	6	15	20	41
9	ಉತ್ತರ ಕೊರಿಯಾ	5	9	5	19
10	ಇಂಡೊನೇಷ್ಯಾ	4	3	11	18

19th Asian Games Hangzhou 2022

ಚೆಸ್: ಭಾರತ ತಂಡಗಳ ಉತ್ತಮ ಸಾಧನೆ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ಚೆಸ್ ತಂಡಗಳು ಏಷ್ಯನ್ ಗೇಮ್ಸ್‌ನ ಮೂರನೇ ಸುತ್ತಿನಲ್ಲಿ ಭಾನುವಾರ ಉತ್ತಮ ಪ್ರದರ್ಶನ ನೀಡಿ ಸುಲಭ ಜಯ ದಾಖಲಿಸಿದವು.

ಗ್ರ್ಯಾನ್ ಮಾಸ್ಟರ್ ಡಿ.ಗುಕೇಶ್, ಆರ್.ಪ್ರಜ್ಞಾನಂದ, ಅರ್ಜುನ್ ಇರಿಗೇಶಿ ಮತ್ತು ಪಿ.ಹರಿಕೃಷ್ಣ ಅವರನ್ನು ಒಳಗೊಂಡ ತಂಡ 3–1 ರಿಂದ ಕಜಕಸ್ತಾನ ತಂಡವನ್ನು ಮಣಿಸಿತು. ಮೊದಲ ಸುತ್ತಿನಲ್ಲಿ ಜಯ ದಾಖಲಿಸಿದ್ದ ಅಗ್ರ ಶ್ರೇಯಾಂಕದ ಭಾರತ ತಂಡ ಎರಡನೇ ಸುತ್ತಿನಲ್ಲಿ ಶನಿವಾರ ಪ್ರಬಲ ಉಜ್ಬೇಕಿಸ್ತಾನ ವಿರುದ್ಧ ಡ್ರಾ ಮಾಡಿಕೊಂಡಿತ್ತು.

ಕಜಕಸ್ತಾನ ವಿರುದ್ಧ ಮೊದಲ ಬೋರ್ಡ್‌ನಲ್ಲಿ ಗುಕೇಶ್, ಗ್ರ್ಯಾಂಡ್ ಮಾಸ್ಟರ್ ರಿನತ್ ಜುಮಬಯೇವ್ ಅವರನ್ನು ಸೋಲಿಸಿದರು. ಕಪ್ಪು ಕಾಯಿ ಗಳಲ್ಲಿ ಆಡಿದ ಪ್ರಜ್ಞಾನಂದ ಎರಡನೇ ಬೋರ್ಡ್‌ನಲ್ಲಿ ಜಿಎಂ ಅಲಿಶೆರ್ ಸುಲೆಮೆನೊವ್ ಅವರನ್ನು ಪರಾಭವಗೊಳಿಸಿದರು. ಮೊದಲ ಪಂದ್ಯ ಆಡಿದ ಹರಿಕೃಷ್ಣ ಮತ್ತು ಅರ್ಜುನ್ ಎದುರಾಳಿಗಳ ಜೊತೆ ಡ್ರಾ ಮಾಡಿಕೊಂಡರು. ಪುರುಷರ ವಿಭಾಗದ ಅಚ್ಚರಿಯ ಫಲಿತಾಂಶದಲ್ಲಿ ಇರಾನ್ 2.5–1.5 ರಿಂದ ಆತಿಥೇಯ ಚೀನಾ ತಂಡಕ್ಕೆ ಆಘಾತ ನೀಡಿತು.

ಎರಡನೇ ಶ್ರೇಯಾಂಕದ ಭಾರತ ಮಹಿಳಾ ತಂಡ 3.5–0.5 ರಿಂದ ನಾಲ್ಕನೇ ಶ್ರೇಯಾಂಕದ ಇಂಡೊನೇಷ್ಯಾ ತಂಡವನ್ನು ಸೋಲಿಸಿ ಸತತ ಮೂರನೇ ಜಯ ದಾಖಲಿಸಿತು. ಕೋನೇರು ಹಂಪಿ, ದ್ರೋಣವಲ್ಲಿ ಹಾರಿಕಾ ಮತ್ತು ವಂತಿಕಾ ಅಗರವಾಲ್ ತಮ್ಮ ಎದುರಾಳಿಗಳನ್ನು ಸೋಲಿಸಿದರೆ, ವೈಶಾಲಿ ರಮೇಶಬಾಬು ತಮ್ಮ ಪಂದ್ಯವನ್ನು 'ಡ್ರಾ' ಮಾಡಿಕೊಂಡರು.

ಹಾಕಿ: ಡ್ರಾ ಪಂದ್ಯದಲ್ಲಿ ಭಾರತ



ಗೋಲುಪೆಟ್ಟಿಗೆಯತ್ತ ಚೆಂಡನ್ನು ಹೊಡೆದ ನವನೀತ್ ಕೌರ್ –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಭಾರತ ಮತ್ತು ದಕ್ಷಿಣ ಕೊರಿಯಾ ತಂಡಗಳ ಸಮಬಲದ ಪೈಪೋಟಿಯಿಂದಾಗಿ ಮಹಿಳಾ ವಿಭಾಗದ ಹಾಕಿ ಪಂದ್ಯವು 1–1ರಿಂದ ಡ್ರಾ ಆಯಿತು.

ಭಾನುವಾರ ಗಾಂಗ್ಶು ಕೆನಾಲ್ ಸ್ಪೋರ್ಟ್ಸ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಆಟಗಾರ್ತಿ ಚೋ ಹ್ಯೆಜಿನ್ 12ನೇ ನಿಮಿಷದಲ್ಲಿ ಗೋಲು ಹೊಡೆದರು. ದಕ್ಷಿಣ ಕೊರಿಯಾ ತಂಡವು ಈ ಮುನ್ನಡೆಯನ್ನು ಅರ್ಧಗಂಟೆ ಕಾಪಾಡಿಕೊಂಡಿತು.

ಆದರೆ 44ನೇ ನಿಮಿಷದಲ್ಲಿ ಭಾರತದ ನವನೀತ್ ಕೌರ್ ತೋರಿದ ಕೈಚಳಕದಿಂದ ಗೋಲು ದಾಖಲಾಯಿತು. ನಂತರದ ಆಟದಲ್ಲಿ ಉಭಯ ತಂಡಗಳ ಗೋಲು ಗಳಿಸುವ ಯತ್ನಗಳು ಸಫಲವಾಗಲಿಲ್ಲ. ಭಾರತದ ಆಟಗಾರ್ತಿಯರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸುವಲ್ಲಿ ವಿಫಲರಾದರು.

ಈ ಡ್ರಾದಿಂದಾಗಿ ಭಾರತ ತಂಡವು ಎ ಗುಂಪಿನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು. ವಿಶ್ವ ರ್‍ಯಾಂಕಿಂಗ್‌ನಲ್ಲಿ ಭಾರತ ಆರನೇ ಸ್ಥಾನ ಹೊಂದಿದೆ. ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತವು 13–0ಯಿಂದ ಸಿಂಗಪುರ ಹಾಗೂ 6–0ಯಿಂದ ಮಲೇಷ್ಯಾ ತಂಡವನ್ನು ಸೋಲಿಸಿತ್ತು.

ಪ್ರತಿ ಗುಂಪಿನಿಂದ ಎರಡು ತಂಡಗಳು ಸೆಮಿಫೈನಲ್‌ಗೆ ಪ್ರವೇಶಿಸಲಿವೆ.

ಮಿಕ್ಸೆಡ್ ಸ್ಕ್ವಾಷ್: ಭಾರತ ಮುನ್ನಡೆ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಸ್ಕ್ವಾಷ್ ತಂಡವು ಚಿನ್ನ ಗೆದ್ದುಕೊಂಡ ಬೆನ್ನಲ್ಲೇ, ಮಿಕ್ಸೆಡ್ ಡಬಲ್ಸ್ ಸ್ಕ್ವಾಷ್ ತಂಡಗಳು ಏಷ್ಯನ್ ಕ್ರೀಡಾಕೂಟದಲ್ಲಿ ಗೆಲುವಿನ ಅಭಿಯಾನ ಆರಂಭಿಸಿವೆ.

'ಎ' ಗುಂಪಿನಲ್ಲಿರುವ ಭಾರತದ ದೀಪಿಕಾ ಪಲ್ಲಿಕಲ್ ಮತ್ತು ಹರಿಂದರ್ ಪಾಲ್ ಸಿಂಗ್ ಸಂಧು ಜೋಡಿ 11–2, 11–5ರಿಂದ ದಕ್ಷಿಣ ಕೊರಿಯಾದ ಜೆಜಿನ್ ಯೂ ಮತ್ತು ಹ್ಯೊಯಾಂಗ್ ಇಯಾಮ್ ಅವರನ್ನು ಸೋಲಿಸಿತು.

ಮತ್ತೊಂದೆಡೆ, ಭಾರತದ ಅನಾಹತ್ ಸಿಂಗ್ ಮತ್ತು ಅಭಯ್ ಸಿಂಗ್ ಜೋಡಿಯು 'ಡಿ' ಗುಂಪಿನಲ್ಲಿ ಫಿಲಿಪ್ಪೀನ್ಸ್‌ನ ಡೇವಿಡ್ ವಿಲಿಯಂ ಪೆಲಿನೊ ಮತ್ತು ಯೆವೊನ್ ಅಲಿಸ್ಸಾ ದಲಿಡಾ ಜೋಡಿಯನ್ನು 11–7, 11–5 ಅಂತರದಿಂದ ಮಣಿಸಿತು. ಪಲ್ಲಿಕಲ್ ಮತ್ತು ಸಂಧು ಜೋಡಿಯು ಮುಂದಿನ ಪಂದ್ಯದಲ್ಲಿ ಪಾಕಿಸ್ತಾನದ ನೂರ್ ಜಮಾನ್ ಮತ್ತು ಮೆಹ್ವಿಶ್ ಅಲಿ ಅವರನ್ನು, ಅನಾಹತ್ ಮತ್ತು ಅಭಯ್ ಜೋಡಿಯೂ ಅದೇ ದೇಶದ ಸಾದಿಯಾ ಗುಲ್ ಮತ್ತು ಫರ್ಹಾನ್ ಜಮಾನ್ ಅವರನ್ನು ಎದುರಿಸಲಿದೆ.

ಸಾಯಿ ಸುದರ್ಶನ್ ಅರ್ಧಶತಕ

ಇರಾನಿ ಕಪ್ ಕ್ರಿಕೆಟ್: ಸೌರಾಷ್ಟ್ರದ ಪಾರ್ಥ್‌ಗೆ ನಾಲ್ಕು ವಿಕೆಟ್

ರಾಜ್‌ಕೋಟ್: ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ ಅವರ ಅಮೋಘ ಅರ್ಧಶತಕದ ಬಲದಿಂದ ಭಾರತ ಇತರೆ ತಂಡವು ಭಾನುವಾರ ಆರಂಭವಾದ ಇರಾನಿ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ದಿನ ಉತ್ತಮ ಮೊತ್ತ ಗಳಿಸಿದೆ.

ಸೌರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಭಾರತ ಇತರೆ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸಾಯಿ (72; 164ಎ, 4X7) ಮತ್ತು ಮಯಂಕ್ ಅಗರವಾಲ್ (32; 53ಎ, 4X6) ಉತ್ತಮ ಆರಂಭ ನೀಡಿದರು. ಆದರೆ ಸೌರಾಷ್ಟ್ರ ತಂಡದ ಬೌಲರ್ ಪಾರ್ಥ್ ಭುತ್ ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ನೀಡಿದರು. ಇದರಿಂದಾಗಿ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 298 ರನ್ ಗಳಿಸಿತು.

ಐಪಿಎಲ್‌ನಲ್ಲಿ ಅಬ್ಬರದ ಬ್ಯಾಟಿಂಗ್ ಮೂಲಕ ಗಮನ ಸೆಳೆಯುವ ಸಾಯಿ ಸುದರ್ಶನ್ ಇಲ್ಲಿ ಅತ್ಯಂತ ತಾಳ್ಮೆಯ ಮತ್ತು ಸುಂದರವಾದ ಬ್ಯಾಟಿಂಗ್ ಮಾಡಿದರು. ಮಯಂಕ್ ಜೊತೆ ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ನಾಯಕ ಹನುಮವಿಹಾರಿಯೊಂದಿಗೆ 69 ರನ್ ಸೇರಿಸಿದರು.

ಇನ್ನೊಂದೆಡೆ ಆತಿಥೇಯ ತಂಡದ ಎಡಗೈ ಸ್ಪಿನ್ನರ್ ಪಾರ್ಥ್ ಅವರು ಹನುಮವಿಹಾರಿ, ಸಾಯಿ, ಯಶ್ ಧುಳ್ ಮತ್ತು ಶ್ರೀಕರ್ ಭರತ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇದರಿಂದಾಗಿ ರನ್ ಗಳಿಕೆಗೆ ಕಡಿವಾಣ ಹಾಕಿದರು.

ಸಂಕ್ಷಿಪ್ತ ಸ್ಕೋರು: ಭಾರತ ಇತರೆ: 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 298 (ಸಾಯಿ ಸುದರ್ಶನ್ 72, ಮಯಂಕ್ ಅಗರವಾಲ್ 32, ಹನುಮವಿಹಾರಿ 33, ಶ್ರೀಕರ್ ಭರತ್ 36, ಶಮ್ಸ್ ಮಲಾನಿ 32, ಸೌರಭ್ ಕುಮಾರ್ ಬ್ಯಾಟಿಂಗ್ 30, ಪಾರ್ಥ್ ಭುತ್ 85ಕ್ಕೆ4, ಯುವರಾಜಸಿಂಹ ದೊಡಿಯಾ 74ಕ್ಕೆ2, ಧರ್ಮೇಂದ್ರಸಿಂಹ ಜಡೇಜ 89ಕ್ಕೆ2) ವಿರುದ್ಧ ಸೌರಾಷ್ಟ್ರ.

ಭಾರತದ ಸ್ಕೇಟರ್‌ಗಳಿಗೆ ನಿರಾಸೆ

ಹಾಂಗ್‌ಝೌ (ಪಿಟಿಐ): ಭಾರತದ ವಿಕ್ರಮ್ ರಾಜೇಂದ್ರ ಇಂಗಳೆ ಮತ್ತು ಕಾರ್ತಿಕಾ ಜಗದೀಶ್ವರನ್ ಅವರು ಭಾನುವಾರ ಏಷ್ಯನ್ ಕ್ರೀಡಾಕೂಟದಲ್ಲಿ ಪುರುಷರ ಮತ್ತು ಮಹಿಳೆಯರ ರೋಲರ್ ಸ್ಕೇಟಿಂಗ್ 1,000 ಮೀಟರ್ ಸ್ಪೀಡ್ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.

ಪುರುಷರ ಫೈನಲ್‌ನಲ್ಲಿ ವಿಕ್ರಮ್ ರಾಜೇಂದ್ರ (1 ನಿ. 29.5 ಸೆ) ಅವರು ಸ್ವಲ್ಪ ಅಂತರದಿಂದ ಕಂಚಿನ ಪದಕವನ್ನು ತಪ್ಪಿಸಿಕೊಂಡರು. ಆರ್ಯನ್‌ಪಾಲ್ ಸಿಂಗ್ (1 ನಿ. 30.4) ಏಳನೇ ಸ್ಥಾನವನ್ನು ಪಡೆದರು.

ಗುಂಪು 1ರ ಹೀಟ್‌ನಲ್ಲಿ ವಿಕ್ರಮ್ ಮೂರನೇ ಸ್ಥಾನದೊಂದಿಗೆ, ಗುಂಪು 2ರ ಹೀಟ್‌ನಲ್ಲಿ ಆರ್ಯನ್‌ಪಾಲ್ ನಾಲ್ಕನೇ ಸ್ಥಾನದೊಂದಿಗೆ ಫೈನಲ್ ತಲುಪಿದ್ದರು. ಮಹಿಳೆಯರ ಫೈನಲ್ ಸ್ಪರ್ಧೆಯಲ್ಲಿ ಕಾರ್ತಿಕಾ (1 ನಿ. 40.3 ಸೆ) ನಿರಾಸೆ ಅನುಭವಿಸಿದರು. ಭಾರತದ ಮತ್ತೊಬ್ಬ ಸ್ಪರ್ಧಿ ಸಂಜನಾ ಬತುಲಾ ಫೈನಲ್‌ಗೆ ಅರ್ಹತೆ ಪಡೆಯಲು ವಿಫಲವಾದರು.

ಪುರುಷರ 10,000 ಮೀ. ಸ್ಪೀಡ್ ಸ್ಕೇಟಿಂಗ್ ಫೈನಲ್‌ನಲ್ಲಿ ಆನಂದ್‌ಕುಮಾರ್ ವೇಲ್‌ಕುಮಾರ್ ಮತ್ತು ಸಿದ್ಧಾಂತ್ ಕಾಂಬಳೆ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನ ಪಡೆದಿದ್ದರು.

ಸೋಮವಾರ ನಡೆಯುವ 3,000 ಮೀ ರಿಲೆ ಸ್ಪರ್ಧೆಯಲ್ಲಿ ಭಾರತದ ಸ್ಕೇಟರ್‌ಗಳು ಭಾಗವಹಿಸಲಿದ್ದಾರೆ.

2010ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಸ್ಕೇಟರ್‌ಗಳು ಎರಡು ಕಂಚಿನ ಪದಕ ಗೆದ್ದಿದ್ದರು.

ವಾಟರ್ ಪೋಲೊ: ಗ್ಲೋಬಲ್ ಸ್ವಿಮ್ ಸೆಂಟರ್‌ಗೆ ಪ್ರಶಸ್ತಿ



ಪ್ರಶಸ್ತಿಯೊಂದಿಗೆ ಗ್ಲೋಬಲ್ ಸ್ವಿಮ್ ಸೆಂಟರ್ ತಂಡದ ಆಟಗಾರರು

ಬೆಂಗಳೂರು: ಗ್ಲೋಬಲ್ ಸ್ವಿಮ್ ಸೆಂಟರ್ ಮತ್ತು ಬಸವನಗುಡಿ ಅಕ್ವಾಟಿಕ್ ಸೆಂಟರ್ ತಂಡಗಳು ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ನಡೆದ ಎನ್‌ಆರ್‌ಜೆ ರಾಜ್ಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ವಾಟರ್ ಪೋಲೊ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನ ಮುಡಿಗೇರಿಸಿಕೊಂಡವು.

ಇಲ್ಲಿನ ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ನಡೆದ ಸ್ಪರ್ಧೆಯಲ್ಲಿ ಪುರುಷರ ವಿಭಾಗದಲ್ಲಿ ಮಲ್ಲೇಶ್ವರಂ ಸ್ವಿಮ್ಮಿಂಗ್ ಕ್ಲಬ್ ಮತ್ತು ಬಸವನಗುಡಿ ಅಕ್ವಾಟಿಕ್ ಸೆಂಟರ್ ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದವು.

ಮಹಿಳೆಯರ ವಿಭಾಗದಲ್ಲಿ ನೆಟ್ಟಕಲ್ಲಪ್ಪ ಈಜುಕೇಂದ್ರ ಮತ್ತು ಮಲ್ಲೇಶ್ವರಂ ಸ್ವಿಮ್ಮಿಂಗ್ ಕ್ಲಬ್ ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದವು. ಪುರುಷರ ವಿಭಾಗದಲ್ಲಿ ಮಲ್ಲೇಶ್ವರಂ ತಂಡದ ಎಸ್. ಸೋಹನ್, ಮಹಿಳಾ ವಿಭಾಗದಲ್ಲಿ ಬಸವನಗುಡಿ ತಂಡದ ಪ್ರಚೇತಾ ಆರ್. ರಾವ್ 'ಬೆಸ್ಟ್ ಪ್ಲೇಯರ್ಸ್' ಪ್ರಶಸ್ತಿ ಪಡೆದರು.

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಭರ್ಜರಿ ಗೆಲುವು

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–1ರಿಂದ ಯಂಗ್ ಚಾಲೆಂಜರ್ಸ್ ವಿರುದ್ಧ ಗೆಲುವು ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ ಪರವಾಗಿ ನಿಖಿಲ್‌ರಾಜ್ ಮುರುಗೇಶಕುಮಾರ್ ಮತ್ತು ಲಾಲ್ ನುಂಜಮಾ ತಲಾ ಎರಡು ಗೋಲು ಗಳಿಸಿದರೆ, ಸುಕ್ ರಾಜ್ ಸುಬ್ಬ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಚಾಲೆಂಜರ್ಸ್ ಪರ ಏಕೈಕ ಗೋಲನ್ನು ಮುರಳಿ ಜೋಸೆಫ್ ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 3–1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು. ಎಂಇಜಿ ತಂಡದ ಶರತ್, ಶೇಖ್ ಮುಜೀಬ್ ಮತ್ತು ಆಯುಷ್ ತಲಾ ಒಂದು ಗೋಲು ಗಳಿಸಿದರು.

ಪ್ರತೀಕ್ ಸ್ವಾಮಿ ಎಂಎಫ್‌ಎಆರ್ ಪರ ಒಂದು ಗೋಲು ತಂದಿತ್ತರು.



ಒಪಿಎಸ್‌ಗೆ ಆಗ್ರಹ ಹಳೆ ಪಿಂಚಣಿ ಯೋಜನೆ ಮರುಸ್ಥಾಪನೆಗೆ ಆಗ್ರಹಿಸಿ ದೇಶದ ವಿವಿಧೆಡೆಯ ಸರ್ಕಾರಿ ನೌಕರರು ಭಾನುವಾರ ನವದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ಸೇರಿದ್ದರು –ಪಿಟಿಐ ಚಿತ್ರ

ನಡ್ಡಾ ನಿವಾಸದಲ್ಲಿ ನಾಯಕರ ಸಭೆ

ರಾಜಸ್ಥಾನ, ಛತ್ತೀಸಗಢ ವಿಧಾನಸಭೆ ಚುನಾವಣೆಗೆ ಬಿಜೆಪಿ ಬಿರುಸಿನ ತಯಾರಿ

ನವದೆಹಲಿ (ಪಿಟಿಐ): ರಾಜಸ್ಥಾನ ಮತ್ತು ಛತ್ತೀಸಗಢದ ಮುಂಬರುವ ವಿಧಾನಸಭಾ ಚುನಾವಣೆಯ ಕುರಿತು ಚರ್ಚಿಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಇಲ್ಲಿನ ನಿವಾಸದಲ್ಲಿ ಪಕ್ಷದ ಪ್ರಮುಖ ನಾಯಕರು ಭಾನುವಾರ ಸಭೆ ನಡೆಸಿದ್ದಾರೆ.

ಪಕ್ಷದ ಚುನಾವಣಾ ತಂತ್ರಗಾರಿಕೆ ಹಾಗೂ ಕಾಂಗ್ರೆಸ್ ಆಡಳಿತವಿರುವ ಎರಡು ರಾಜ್ಯಗಳಲ್ಲೂ ಕಣಕ್ಕಿಳಿಸುವ ಪಕ್ಷದ ಅಭ್ಯರ್ಥಿಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಕೇಂದ್ರ ಚುನಾವಣಾ ಸಮಿತಿ ಸಭೆಗೂ ಮುನ್ನ ಈ ಸಭೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ಹಾಗೂ ರಾಜಸ್ಥಾನದ ಬಿಜೆಪಿ ಚುನಾವಣಾ ಉಸ್ತುವಾರಿ ಪ್ರಲ್ಹಾದ ಜೋಶಿ, ಮುಖಂಡ ಕುಲ್‌ದೀಪ್ ಬಿಷ್ಣೋಯ್, ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಸಿ.ಪಿ. ಜೋಶಿ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಸಚಿವ ಅರ್ಜುನ್‌ರಾಮ್ ಮೆಘವಾಲ್ ಮತ್ತು ಗಜೇಂದ್ರ ಶೆಖಾವತ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮತ್ತಿತರರು ಇದ್ದರು.

ಛತ್ತೀಸಗಢ ಚುನಾವಣೆಯ ಕುರಿತು ನಡೆದ ಸಭೆಯಲ್ಲಿ ಕೇಂದ್ರ ಸಚಿವ ಹಾಗೂ ಚುನಾವಣಾ ಉಸ್ತುವಾರಿ ಮನ್ಸುಖ್ ಮಾಂಡವೀಯ, ರಾಜ್ಯ ಸಂಘಟನಾ ಕಾರ್ಯದರ್ಶಿ ನಿತಿನ್ ನವೀನ್ ಮತ್ತಿತರರು ಪಾಲ್ಗೊಂಡಿದ್ದರು.

ಎರಡೂ ಸಭೆಗಳಲ್ಲೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಹಾಜರಿದ್ದರು.

ಮಧ್ಯಪ್ರದೇಶ: ಬಿಎಸ್‌ಪಿ ಜೊತೆ ಜಿಜಿಪಿ ಮೈತ್ರಿ

ಭೋಪಾಲ್ (ಪಿಟಿಐ): ಮುಂಬರುವ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಜತೆ ಗೊಂಡವಾನ ಗಣತಂತ್ರ ಪಾರ್ಟಿಯು (ಜಿಜಿಪಿ) ಮೈತ್ರಿ ಮಾಡಿಕೊಂಡಿದೆ.

ಒಟ್ಟು 230 ಸ್ಥಾನಗಳ ಪೈಕಿ, 178 ಸ್ಥಾನಗಳಲ್ಲಿ ಬಿಎಸ್‌ಪಿ ಸ್ಪರ್ಧಿಸಲಿದ್ದರೆ 52 ಸ್ಥಾನಗಳಲ್ಲಿ ಜಿಜಿಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ಬಿಎಸ್‌ಪಿ ರಾಜ್ಯಸಭಾ ಸದಸ್ಯ ರಾಮ್‌ಜಿ ಗೌತಮ್ ಹಾಗೂ ಜಿಜಿಪಿಯ ಪ್ರಧಾನ ಕಾರ್ಯದರ್ಶಿ ಬಲಬೀರ್ ಸಿಂಗ್ ತೋಮರ್ ಹೇಳಿದ್ದಾರೆ.

'ದಲಿತರು, ಬುಡಕಟ್ಟು ಜನರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಕೊನೆಗಾಣಿಸುವ ಸಂಬಂಧ ಬಿಎಸ್‌ಪಿ–ಜಿಜಿಪಿ ಮೈತ್ರಿ ಸರ್ಕಾರವನ್ನು ರಚಿಸಲಾಗುವುದು. ನಮ್ಮ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ಮತ್ತು ಕಾಂಗ್ರೆಸ್‌ನ ಸರ್ವಾಧಿಕಾರ ಮತ್ತು ಬಂಡವಾಳಶಾಹಿಗಳ ಆಡಳಿತವು ಅಂತ್ಯ ಕಾಣುವುದು. ಬಡವರಿಗೆ ನ್ಯಾಯ ಸಿಗಲಿದೆ' ಎಂದು ಉಭಯ ಪಕ್ಷದ ನೀಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

2018ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಎಸ್‌ಪಿ ಎರಡು ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಈ ಪೈಕಿ ಒಬ್ಬ ಶಾಸಕ ನಂತರ ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಮೂರು ದಶಕಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಜಿಜಿಪಿ, 1998ರಲ್ಲಿ ಒಂದು ಸ್ಥಾನದಲ್ಲಿ ಗೆದ್ದಿತ್ತು. ನಂತರ, 2003ರಲ್ಲಿ ಮೂರು ಸ್ಥಾನಗಳಲ್ಲಿ ಗೆಲ್ಲುವ ಮೂಲಕ ತನ್ನ ಸಾಧನೆಯನ್ನು ಉತ್ತಮಪಡಿಸಿಕೊಂಡಿತ್ತು.

'ಇಂಡಿಯಾ', ಎನ್‌ಡಿಎಯಿಂದ ಅಂತರ: ಮಾಯಾವತಿ

ಲಖನೌ: 'ಇಂಡಿಯಾ' ಮೈತ್ರಿಕೂಟಕ್ಕೆ ಬಿಎಸ್‌ಪಿಯನ್ನು ಕರೆತರಲು ಕಾಂಗ್ರೆಸ್ ಸೇರಿ ಕೆಲವು ಪ್ರತಿಪಕ್ಷಗಳು ಪ್ರಯತ್ನ ನಡೆಸಿರುವ ನಡುವೆಯೇ, ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ಕೂಟ 'ಇಂಡಿಯಾ'ದಿಂದ ಸಮಾನ ಅಂತರ ಕಾಯ್ದುಕೊಳ್ಳುವುದಾಗಿ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಭಾನುವಾರ ಸ್ಪಷ್ಟಪಡಿಸಿದ್ದಾರೆ.

ಜತೆಗೆ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಪಕ್ಷದ ನಾಯಕರ ಜತೆ ಸಭೆ ನಡೆಸಿದ ಅವರು, ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆ ವೇಳೆ ಬಿಎಸ್‌ಪಿಯು ಪ್ರತಿಪಕ್ಷಗಳ 'ಇಂಡಿಯಾ' ಅಥವಾ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರಲಿದೆ ಎಂಬ ಸುಳ್ಳು ಸುದ್ದಿಗಳ ಬಗ್ಗೆ ಎಚ್ಚರದಿಂದ ಇರುವಂತೆ ಮುಖಂಡರಿಗೆ ತಿಳಿಸಿದರು.

ಅಜಯ್ ಮಾಕನ್ ಕಾಂಗ್ರೆಸ್ ಖಜಾಂಚಿ

ಪ್ರಜಾವಾಣಿ ವಾರ್ತೆ



ನವದೆಹಲಿ: ಹಿರಿಯ ನಾಯಕ ಅಜಯ್ ಮಾಕನ್ ಅವರನ್ನು ಪಕ್ಷದ ಖಜಾಂಚಿಯಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇಮಕ ಮಾಡಿದ್ದಾರೆ.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಮುಂದಿನ ತಿಂಗಳುಗಳಲ್ಲಿ ಸಂಪನ್ಮೂಲದ ಕ್ರೋಡೀಕರಣಕ್ಕೆ ಪಕ್ಷವು ಹೆಚ್ಚಿನ ಒತ್ತು ನೀಡಬೇಕಾದ ಸಂದರ್ಭದಲ್ಲಿಯೇ ಈ ನೇಮಕಾತಿಯು ನಡೆದಿದೆ.

ಹಿರಿಯ ನಾಯಕ ಪವನ್ ಕುಮಾರ ಬನ್ಸಲ್ ಇದುವರೆಗೂ ಈ ಹುದ್ದೆಯಲ್ಲಿದ್ದರು. ಅಹ್ಮದ್ ಪಟೇಲ್ ಅವರ ನಿಧನಾನಂತರ ಬನ್ಸಲ್ ಅವರನ್ನು ಹಂಗಾಮಿಯಾಗಿ ಖಜಾಂಚಿ ಸ್ಥಾನಕ್ಕೆ 2020ರಲ್ಲಿ ನೇಮಿಸಲಾಗಿತ್ತು.

ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಆಪ್ತರೆಂದು ಗುರುತಿಸಲಾಗುವ 59 ವರ್ಷದ ಮಾಕನ್ ಅವರನ್ನು ಖರ್ಗೆ ಅವರು ಇದೇ ವರ್ಷದ ಆಗಸ್ಟ್‌ನಲ್ಲಿ ಎಐಸಿಸಿ ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿದ್ದರು. ಆಗಿನಿಂದಲೂ ಇವರು ಖಜಾಂಚಿಯಾಗಿ ನೇಮಕವಾಗಬಹುದು ಎಂಬ ಊಹಾಪೋಹವಿತ್ತು.

ಛತ್ತೀಸಗಢ: ನಾಳೆ 'ವಿಶ್ವಾಸ ಯಾತ್ರೆ'

ರಾಯಪುರ (ಪಿಟಿಐ): ಛತ್ತೀಸಗಢದ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಜನರಿಗೆ ತಿಳಿಸಲು ಅಕ್ಟೋಬರ್ 2ರಂದು ಎಲ್ಲಾ 90 ವಿಧಾನಸಭಾ ಕ್ಷೇತ್ರಗಳಲ್ಲಿ 'ವಿಶ್ವಾಸ ಯಾತ್ರೆ' (ಭರೋಸಾ ಯಾತ್ರೆ) ಕೈಗೊಳ್ಳಲಿದೆ.

ರಾಜ್ಯ ಕಾಂಗ್ರೆಸ್‌ನ ಸಂವಹನ ಘಟಕದ ಮುಖ್ಯಸ್ಥ ಸುಶೀಲ್ ಆನಂದ್ ಶುಕ್ಲಾ ಅವರು, 'ಮಹಾತ್ಮ ಗಾಂಧಿ ಅವರ ಜನ್ಮದಿನದಂದು ನಡೆಯುವ ಯಾತ್ರೆ ವೇಳೆ, 2003–2018ರವರೆಗೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಯ ದುರಾಡಳಿತವನ್ನು ಜನರೆದುರು ಬಯಲು ಮಾಡುತ್ತೇವೆ' ಎಂದು ಹೇಳಿದರು.

ಮುಖ್ಯಮಂತ್ರಿ ಭೂಪೇಶ್ ಬಘೇಲ್, ಸಚಿವ ಸಂಪುಟದ ಸದಸ್ಯರು, ಕಾಂಗ್ರೆಸ್ ಶಾಸಕರು ಮತ್ತು ಸಂಸದರು ಅವರವರ ಕ್ಷೇತ್ರಗಳಲ್ಲಿ ನಡೆಯುವ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಯಾತ್ರೆಯು ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ 25–30 ಕಿ.ಮೀ. ಸಂಚರಿಸಲಿದೆ. ಈ ವೇಳೆ ಸಾರ್ವಜನಿಕ ಸಭೆಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಈ ವರ್ಷಾಂತ್ಯದಲ್ಲಿ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

ಗೈರುಹಾಜರಿಯೇ ಖಾತರಿ

ಒಂದನೇ ಪುಟದಿಂದ...

ರಾಷ್ಟ್ರೀಯ ವೈದ್ಯಕೀಯ ಆಯೋಗ ಜೂನ್ 23ರಂದು ಪ್ರಕಟಿಸಿದ್ದ ಕರಡು ನಿಯಮಾವಳಿ ಅನ್ವಯ ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮೋದನೆ ನೀಡುವಾಗ 14 ವಿಭಾಗಗಳ ಪಟ್ಟಿಯಲ್ಲಿ ತುರ್ತು ಚಿಕಿತ್ಸಾ ವಿಭಾಗವೂ ಕಡ್ಡಾಯವಾಗಿ ಇರಬೇಕೆಂದು ಹೇಳಲಾಗಿತ್ತು. ಆದರೆ, ಇತ್ತೀಚೆಗೆ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಹೊಸ ಕಾಲೇಜುಗಳಲ್ಲಿ ಈ ವಿಭಾಗ ಇರಬೇಕೆಂಬ ನಿಯಮ ಕೈಬಿಡಲಾಗಿದೆ.

ವೈದ್ಯರ ಸಂಘದ ಕಳವಳ: ಆಯೋಗದ ಈ ನಿರ್ಧಾರಕ್ಕೆ ಭಾರತೀಯ ತುರ್ತು ಚಿಕಿತ್ಸಾ ವೈದ್ಯರ ಸಂಘವು (ಎಇಪಿಐ) ಕಳವಳ ವ್ಯಕ್ತಪಡಿಸಿದೆ. ಹೊಸ ಕಾಲೇಜುಗಳಲ್ಲಿ ಈ ವಿಭಾಗವನ್ನು ಕಡ್ಡಾಯಗೊಳಿಸಬೇಕು ಎಂದು ಆಯೋಗಕ್ಕೆ ಮನವಿ ಮಾಡಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಯುಜಿಎಂಇಬಿ, 'ತುರ್ತು ಚಿಕಿತ್ಸಾ ವಿಭಾಗದಲ್ಲಿನ ದಾಖಲೆಗಳಿಗೂ ಹಾಗೂ ಅಲ್ಲಿರುವ ಚಿತ್ರಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ' ಎಂದು ಉತ್ತರಿಸಿದೆ.

ಸೂಚನೆ ಪಾಲನೆಗೆ ನಿರ್ಲಕ್ಷ್ಯ

ಒಂದನೇ ಪುಟದಿಂದ...

ಇದರನ್ವಯ ಸಿಬ್ಬಂದಿಯ ಶೇ 50ರಷ್ಟು ಹಾಜರಾತಿ ಇರಬೇಕು. ಕೆಲವು ಕಾಲೇಜುಗಳ ದಾಖಲೆಗಳಲ್ಲಿ ಮಾತ್ರವೇ ಈ ಮಾನದಂಡ ಪಾಲನೆಯಾಗಿದೆ. ಅಗತ್ಯವಿರುವ ಅಧ್ಯಾಪಕರನ್ನೂ ನೇಮಿಸಿಲ್ಲ ಎಂದು ಆಯೋಗ ಅಸಮಾಧಾನ ವ್ಯಕ್ತಪಡಿಸಿದೆ. 'ವೈದ್ಯಕೀಯ ಸಿಬ್ಬಂದಿಯ ಕೊರತೆ ನೀಗಿಸಲು ಕಾಲೇಜುಗಳಿಗೆ ಸೂಚನೆ ನೀಡಿ ಗಡುವು ಕೂಡ ನೀಡಲಾಗಿತ್ತು. ಆದರೆ, ಯಾವುದೇ ಕಾಲೇಜು ಶೇ 50ರಷ್ಟು ಹಾಜರಾತಿ ಕಾಯ್ದುಕೊಂಡಿಲ್ಲ. ಶೂನ್ಯ ಹಾಜರಾತಿಯು ಕೂಡ ದಾಖಲಾಗಿದೆ. ಅದರಲ್ಲೂ 134 ಕಾಲೇಜುಗಳ ತುರ್ತು ಚಿಕಿತ್ಸಾ ವಿಭಾಗಗಳಲ್ಲಿನ ದಾಖಲೆಗಳಲ್ಲಿ ಮಾತ್ರವೇ ವೈದ್ಯಕೀಯ ಸಿಬ್ಬಂದಿ ಇದ್ದಾರೆ' ಎಂದು ಹೇಳಿದೆ.

ಪ್ರಚಾರಕ್ಕೆ ಮೋದಿ ನಾಂದಿ

ಒಂದನೇ ಪುಟದಿಂದ...

'ರೈತರಿಗೆ ನಿಗದಿಯಾಗಿದ್ದ ಯೋಜನೆಗಳ ಮೂಲಕ ರಾಜ್ಯ ಸರ್ಕಾರ ಹಣ ಮಾಡುತ್ತಿದೆ. ತೆಲಂಗಾಣದಲ್ಲಿ ನೀರಾವರಿ ಯೋಜನೆ ನೆಪದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ನೀರಾವರಿ ಯೋಜನೆ ಉದ್ಘಾಟನೆಯಾದದ್ದನ್ನು ಎಂದಾದರೂ ಕೇಳಿದ್ದೀರಾ? ರೈತರಿಗೆ ಇಲ್ಲಿ ನೀರಿಲ್ಲ' ಎಂದು ಆರೋಪಿಸಿದರು.

ತೆಲಂಗಾಣದಲ್ಲಿ ರೈತರ ಸಾಲ ಮನ್ನಾದ ಭರವಸೆ ನೀಡಲಾಗಿತ್ತು. ಆದರೆ, ಸುಳ್ಳು ಭರವಸೆಯಿಂದಾಗಿ ಅನೇಕ ರೈತರು ಜೀವ ತೆತ್ತರು. ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಎಂದೂ ಗಮನ ನೀಡಲಿಲ್ಲ. ಇಲ್ಲಿ ಸರ್ಕಾರವೇ ಇಲ್ಲ. ಆದರೆ, ನಾವು ರೈತರಿಗೆ ಎಲ್ಲಾ ನೆರವು ನೀಡಿದೆವು. ಮುಚ್ಚಿದ್ದ ರಾಮಗುಂಡಂ ರಸಗೊಬ್ಬರ ಘಟಕ ಪುನರಾರಂಭಿಸಿದೆವು' ಎಂದು ವಿವರಿಸಿದರು.

'ಇಲ್ಲಿ ಕಾರು (ಬಿಆರ್‌ಎಸ್‌ನ ಚಿಹ್ನೆ) ಸರ್ಕಾರವನ್ನು ನಡೆಸುತ್ತದೆ. ಈ ಕಾರಿನ ಸ್ಟೇರಿಂಗ್ ಯಾರ ಬಳಿ ಇದೆ ಎಂಬುದು ಎಲ್ಲರಿಗೂ ಗೊತ್ತು. ಈ ಕುಟುಂಬಗಳು ಖಾಸಗಿ ಕಂಪನಿಗಳನ್ನು ನಡೆಸುವ ರೀತಿ ರಾಜಕೀಯ ಪಕ್ಷಗಳನ್ನು ನಡೆಸುತ್ತಿವೆ. ಅಧ್ಯಕ್ಷ, ಸಿಇಒ, ಪ್ರಧಾನ ವ್ಯವಸ್ಥಾಪಕನಿಂದ ಹಿಡಿದು ಮುಖ್ಯಮಂತ್ರಿಯವರೆಗೆ ಎಲ್ಲರೂ ಒಂದೇ ಕುಟುಂಬದಿಂದ ಬಂದವರು. ಸಿಬ್ಬಂದಿ ಮಾತ್ರ ಹೊರಗಿನವರು ತೋರಿಕೆಗಾಗಿ ಇರುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

ಇಂದು ಮಧ್ಯಪ್ರದೇಶ, ರಾಜಸ್ಥಾನಕ್ಕೆ ಮೋದಿ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 2 ರಂದು ಮಧ್ಯಪ್ರದೇಶ ಮತ್ತು ರಾಜಸ್ಥಾನಕ್ಕೆ ಭೇಟಿ ನೀಡಲಿದ್ದು, ಅಲ್ಲಿ ಬಹು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಹಲವಾರು ರೈಲ್ವೆ ಯೋಜನೆಗಳು, ಪ್ರವಾಸೋದ್ಯಮ ಸೌಲಭ್ಯಗಳು ಮತ್ತು ಕೋಟಾದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಶಾಶ್ವತ ಕ್ಯಾಂಪಸ್ ಅನ್ನು ಮೋದಿ ಉದ್ಘಾಟಿಸಲಿದ್ದಾರೆ.

ಸವಾಯಿ ಮಾಧೋಪುರದಲ್ಲಿ ರೈಲು ಮೇಲ್ಸೇತುವೆ ಎರಡು ಪಥಗಳಿಂದ ನಾಲ್ಕು ಪಥಗಳಿಗೆ ವಿಸ್ತರಣೆಗೆ ಶಂಕುಸ್ಥಾಪನೆ, ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ದೆಹಲಿ–ವಡೋದರಾ ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ, ಐದು ವಿವಿಧ ರಸ್ತೆ ಯೋಜನೆಗಳಿಗೂ ಶಂಕುಸ್ಥಾಪನೆ, ಪ್ರಧಾನ ಮಂತ್ರಿ ಅವಾಸ್ ಯೋಜನೆಯಲ್ಲಿ ನಿರ್ಮಿಸಿರುವ ಮನೆಗಳ ಉದ್ಘಾಟನೆ, ಜಲ ಜೀವನ್ ಮಿಷನ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸುವರು. ಈ ಎರಡೂ ರಾಜ್ಯಗಳ ವಿಧಾನಸಭೆ ಚುನಾವಣೆ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ನಡೆಯುವ ಸಾಧ್ಯತೆ ಇದೆ.

ಅರಿಸಿನ ಮಂಡಳಿ, ಕೇಂದ್ರೀಯ ಗಿರಿಜನರ ವಿವಿ ಸ್ಥಾಪನೆ

ತೆಲಂಗಾಣದಲ್ಲಿ ರಾಷ್ಟ್ರೀಯ ಅರಿಸಿನ ಮಂಡಳಿ ಮತ್ತು ಮುಲುಗು ಜಿಲ್ಲೆಯಲ್ಲಿ ಸಮ್ಮಕ್ಕ– ಸಾರಕ್ಕ ಹೆಸರಿನಲ್ಲಿ ಕೇಂದ್ರೀಯ ಗಿರಿಜನರ ವಿಶ್ವವಿದ್ಯಾಲಯ ಸ್ಥಾಪಿಸುವುದಾಗಿ ಪ್ರಧಾನಿ ಮೋದಿ ಪ್ರಕಟಿಸಿದರು.

ಈ ವಿಶ್ವವಿದ್ಯಾಲಯವು ₹900 ಕೋಟಿ ವೆಚ್ಚದಲ್ಲಿ ತಲೆ ಎತ್ತಲಿದೆ ಎಂದು ಮೋದಿ ಹೇಳಿದರು.

ಹಲವು ರಸ್ತೆ ಸಂಪರ್ಕ ಯೋಜನೆಗಳಿಗೂ ಶಂಕುಸ್ಥಾಪನೆ ನೆರವೇರಿಸಲಾಯಿತು. ಈ ಬಗ್ಗೆ ಸಂತಸ ವ್ಯಕ್ತಪಡಿಸಿದ ಮೋದಿ ಅವರು, ಇದು ಈ ಪ್ರದೇಶದ ಜನರ ಜೀವನವನ್ನು ಸುಧಾರಿಸುತ್ತದೆ. ನಾಗಪುರ– ವಿಜಯವಾಡ ಆರ್ಥಿಕ ಕಾರಿಡಾರ್ ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ವ್ಯಾಪಾರ ಮತ್ತು ಸಾಗಣೆಯನ್ನು ಸುಲಲಿತಗೊಳಿಸುತ್ತದೆ ಎಂದು ಹೇಳಿದರು.

ತಂಬಾಕು ಮಾದರಿಯಲ್ಲೇ ಅರಿಸಿನ ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕು ಎಂಬುದು ತೆಲಂಗಾಣ ರೈತರ ದೀರ್ಘಕಾಲದ ಬೇಡಿಕೆ. ರಾಜ್ಯದಲ್ಲಿ ವಿಶೇಷವಾಗಿ ನಿಜಾಮಾಬಾದ್ ಜಿಲ್ಲೆಯಲ್ಲಿ ಕನಿಷ್ಠ 50 ಸಾವಿರ ಎಕರೆಯಲ್ಲಿ ಅರಿಸಿನ ಬೆಳೆಯಲಾಗುತ್ತದೆ. ಭಾರತದಿಂದ ರಫ್ತಾಗುವ ಒಟ್ಟು ಅರಿಸಿನದಲ್ಲಿ ಕನಿಷ್ಠ ಶೇ 30ರಷ್ಟು ಇಲ್ಲಿಂದಲೇ ಪೂರೈಕೆಯಾಗುತ್ತದೆ. ದರ ಏರಿಳಿತ ಮತ್ತು ಇತರ ಸಂಕಷ್ಟಗಳ ಮಧ್ಯೆ ಅರಿಸಿನ ಬೆಳೆವ ರೈತರು ಸಮರ್ಪಕ ಮಾರುಕಟ್ಟೆಗಾಗಿ ಮಂಡಳಿಯನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತಿದ್ದರು.

2019ರಲ್ಲಿ ನಿಜಾಮಾಬಾದ್‌ನ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಧರ್ಮಪುರಿ ಅರವಿಂದ್ ಅವರು ಅರಿಸಿನ ಮಂಡಳಿ ಸ್ಥಾಪಿಸುವ ಭರವಸೆ ನೀಡಿದ್ದರು. ಆದರೆ, ಅವರ ಗೆಲುವಿನ ಬಳಿಕ ಇದು ಸಾಧ್ಯವಾಗದ್ದಕ್ಕೆ ರೈತರು ಇತರ ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ಪ್ರತಿಭಟನೆ ನಡೆಸಿದ್ದರು.

ಚಂದ್ರಬಾಬು ನಾಯ್ಡು ಅರ್ಜಿ ವಿಚಾರಣೆ ನಾಳೆ


ನವದೆಹಲಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದ ಹಣ ದುರುಪಯೋಗಪಡಿಸಿರುವ ಪ್ರಕರಣಕ್ಕೆ ಸಂಬಂಧಿಸಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಆಂಧ್ರಪ್ರದೇಶ ಹೈಕೋರ್ಟ್ ವಜಾಗೊಳಿಸಿರುವುದನ್ನು ಪ್ರಶ್ನಿಸಿ ತೆಲುಗುದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ಇದೇ 3ರಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆಯಲಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರನ್ನೊಳಗೊಂಡ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಲಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ನಾಯ್ಡು ಅವರನ್ನು ಸೆಪ್ಟೆಂಬರ್ 9ರಂದು ಪೊಲೀಸರು ಬಂಧಿಸಿದ್ದರು.

ಒಂದೇ ದಿನ ಒಂಬತ್ತು ಪದಕ ಗೆದ್ದುಕೊಂಡ ಅಥ್ಲೀಟ್‌ಗಳು • ಅವಿನಾಶ್ ಸಬ್ಳೆ, ತಜಿಂದರ್‌ಪಾಲ್ ತೂರ್‌ಗೆ ಚಿನ್ನ • ಮುರಳಿ ಶ್ರೀಶಂಕರ್‌ಗೆ ಲಾಂಗ್‌ಜಂಪ್ ಬೆಳ್ಳಿ

ಪದಕಗಳ ಸಾಲು: ಸಂಭ್ರಮದ ಹೊನಲು


ಅವಿನಾಶ್ ಸಬ್ಳೆ

ಹಾಂಗ್‌ಝೌ (ಪಿಟಿಐ): ಅವಿನಾಶ್ ಸಬ್ಳೆ ಅವರು ಏಷ್ಯನ್ ಕ್ರೀಡಾಕೂಟದ ಪುರುಷರ 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡರೆ, ಶಾಟ್‌ಪಟ್ ಸ್ಪರ್ಧಿ ತಜಿಂದರ್‌ಪಾಲ್ ಸಿಂಗ್ ತೂರ್ ಚಾಂಪಿಯನ್‌ಪಟ್ಟವನ್ನು ತಮ್ಮಲ್ಲೇ ಉಳಿಸಿಕೊಂಡರು.

ಹಾಂಗ್‌ಝೌ ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್ ಕ್ರೀಡಾಂಗಣದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾನುವಾರ ಮಿಂಚಿನ ಸಂಚಲನ ಮೂಡಿಸಿದ ಭಾರತದ ಅಥ್ಲೀಟ್‌ಗಳು ಒಟ್ಟು ಒಂಬತ್ತು ಪದಕಗಳನ್ನು ಬಾಚಿಕೊಂಡರು. ಭಾನುವಾರ ಪದಕ ನಿರ್ಧಾರವಾದ ಎಲ್ಲ ಎಂಟು ಸ್ಪರ್ಧೆಗಳಲ್ಲೂ ಭಾರತದ ಅಥ್ಲೀಟ್‌ಗಳು 'ಪೋಡಿಯಂ ಫಿನಿಷ್' ಮಾಡಿದ್ದು ವಿಶೇಷ.

ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ 29 ವರ್ಷದ ಸಬ್ಳೆ, ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ದಿನದ ಮೊದಲ ಪದಕ ತಂದುಕೊಟ್ಟರು. ಅವರು 8 ನಿ. 19.50 ಸೆ.ಗಳಲ್ಲಿ ಗುರಿ ತಲುಪಿದರು.

ಸಬ್ಳೆ ಅವರು ಈ ಹಾದಿಯಲ್ಲಿ ಕೂಟ ದಾಖಲೆಯನ್ನೂ ಸ್ಥಾಪಿಸಿದರು. ಇರಾನ್‌ನ ಹೊಸೇನ್ ಕೆಯಹಾನಿ (8 ನಿ. 22.79 ಸೆ.) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ಬೆಳ್ಳಿ ಗೆದ್ದ ಜಪಾನ್‌ನ ಅಯೊಕೊ ರಿಯೊಮಿ (8 ನಿ. 23.75 ಸೆ.) ಮತ್ತು ಕಂಚು ಜಯಿಸಿದ ಸುನದ ಸೀಯಾ ಅವರ ಪೈಪೋಟಿಯನ್ನು ಬದಿಗೊತ್ತಲು ಯಶಸ್ವಿಯಾದರು.

ಸ್ಟೀಪಲ್‌ಚೇಸ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಭಾರತ ಇದುವರೆಗೆ ಏಷ್ಯನ್ ಗೇಮ್ಸ್ ಚಿನ್ನ ಗೆದ್ದಿರಲಿಲ್ಲ. ಮಹಿಳೆಯರ ವಿಭಾಗದಲ್ಲಿ ಸುಧಾ ಸಿಂಗ್ ಅವರು 2010ರ ಕೂಟದಲ್ಲಿ ಬಂಗಾರ ಜಯಿಸಿದ್ದರು.

ಪುರುಷರ ಶಾಟ್‌ಪಟ್‌ನಲ್ಲಿ ತೂರ್ ಅವರು ನಿರೀಕ್ಷೆಯಂತೆಯೇ ಚಿನ್ನ ಗೆದ್ದು 'ಬಲ' ಪ್ರದರ್ಶಿಸಿದರು. ತಮ್ಮ ಆರನೇ ಹಾಗೂ ಕೊನೆಯ ಪ್ರಯತ್ನದಲ್ಲಿ ಕಬ್ಬಿಣದ ಗುಂಡನ್ನು 20.36 ಮೀ. ದೂರ ಎಸೆದರು. ಅದುವರೆಗೂ ಮುನ್ನಡೆಯಲ್ಲಿದ್ದ ಸೌದಿ ಅರೇಬಿಯಾದ ಮೊಹಮ್ಮದ್ ದಾವುದ ಟೊಲೊ (20.18 ಮೀ.) ಎರಡನೇ ಸ್ಥಾನಕ್ಕೆ ಜಾರಿದರು. ಕಂಚಿನ ಪದಕ ಚೀನಾದ ಲಿಯು ಯಾಂಗ್ (19.97 ಮೀ.) ಪಾಲಾಯಿತು.

2018ರ ಜಕಾರ್ತ ಕೂಟದಲ್ಲೂ ತೂರ್ ಚಿನ್ನ ಜಯಿಸಿದ್ದರು. ಆದರೆ ಆ ಕೂಟದಲ್ಲಿ ಸ್ಥಾಪಿಸಿದ್ದ ಕೂಟ ದಾಖಲೆಯನ್ನು (20.75 ಮೀ.) ಉತ್ತಮಪಡಿಸಲು 28 ವರ್ಷದ ಅವರಿಗೆ ಸಾಧ್ಯವಾಗಲಿಲ್ಲ.

ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಮುರಳಿ ಶ್ರೀಶಂಕರ್ 8.19 ಮೀ. ಸಾಧನೆಯೊಂದಿಗೆ ಬೆಳ್ಳಿ ಗೆದ್ದರು. ಚೀನಾದ ವಾಂಗ್ ಜಿಯಾನನ್ (8.22 ಮೀ.) ಚಿನ್ನ ಜಯಿಸಿದರು.

ನಂದಿನಿಗೆ ಕಂಚು: ಅಗಸರ ನಂದಿನಿ (5,712 ಪಾಯಿಂಟ್ಸ್) ಅವರು ಮಹಿಳೆಯರ ಹೆಪ್ಟಾಥ್ಲಾನ್‌ನಲ್ಲಿ ಕಂಚು ಗೆದ್ದರು. ಈ ವಿಭಾಗದಲ್ಲಿ ಪದಕ ಭರವಸೆ ಎನಿಸಿದ್ದ ಸ್ವಪ್ನಾ ಬರ್ಮನ್ ಅವರು ನಾಲ್ಕನೇ ಸ್ಥಾನ ಪಡೆದು ನಿರಾಸೆ ಅನುಭವಿಸಿದರು. ಜಾವೆಲಿನ್ ಥ್ರೋನಲ್ಲಿ (45.13 ಮೀ.) ನಿರೀಕ್ಷಿತ ದೂರ ಕಂಡುಕೊಳ್ಳದೇ ಇದ್ದುದು ಸ್ವಪ್ನಾ, ಹಿನ್ನಡೆ ಅನುಭವಿಸಲು ಕಾರಣ. ಈ ಸ್ಪರ್ಧೆಯಲ್ಲಿ ಅವರ ಶ್ರೇಷ್ಠ ಸಾಧನೆ 52.55 ಮೀ. ಆಗಿದೆ. ಸ್ವಪ್ನಾ ಒಟ್ಟು 5,708 ಪಾಯಿಂಟ್ಸ್ ಕಲೆಹಾಕಿದರು. ಈ ವಿಭಾಗದ ಚಿನ್ನದ ಪದಕವನ್ನು ಚೀನಾದ ಝೆಂಗ್ ನಿನಲಿ (6,149) ಗೆದ್ದುಕೊಂಡರು.

ಮಹಿಳೆಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಸೀಮಾ ಪೂನಿಯಾ 58.62 ಮೀ. ಸಾಧನೆಯೊಂದಿಗೆ ಬೆಳ್ಳಿ ಜಯಿಸಿದರು. ಚೀನಾದ ಫೆಂಗ್ ಬಿನ್ (67.93 ಮೀ.) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಅದೇ ದೇಶದ ಜಿಯಾಂಗ್ ಝಿಚಾವೊ (61.04) ಕಂಚು ಪಡೆದರು. 40 ವರ್ಷದ ಪೂನಿಯಾ, 2014ರ ಕೂಟದಲ್ಲಿ ಚಿನ್ನ ಹಾಗೂ 2018ರ ಕೂಟದಲ್ಲಿ ಕಂಚು ಗೆದ್ದಿದ್ದರು.

1,500 ಮೀ. ಓಟ: 3 ಪದಕ

ಪುರುಷರ ಮತ್ತು ಮಹಿಳೆಯರ 1,500 ಮೀ. ಓಟದಲ್ಲಿ ಭಾರತಕ್ಕೆ ಒಟ್ಟು ಮೂರು ಪದಕಗಳು ಬಂದವು. ಪುರುಷರ ವಿಭಾಗದಲ್ಲಿ ಅಜಯ್ ಕುಮಾರ್ ಸರೋಜ್ ಮತ್ತು ಜಿನ್ಸನ್ ಜಾನ್ಸನ್ ಅವರಿಗೆ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಒಲಿಯಿತು. ಮಹಿಳೆಯರ ವಿಭಾಗದಲ್ಲಿ ಹರ್ಮಿಲನ್ ಬೇನ್ಸ್ ಅವರು ಬೆಳ್ಳಿ ಗೆದ್ದರು.

ಕೊನೆಯ 200 ಮೀ. ಇದ್ದಾಗ ಮಿಂಚಿನಂತೆ ಮುನ್ನುಗ್ಗಿದ ಅಜಯ್ ಕುಮಾರ್ 3 ನಿ. 38.94 ಸೆ.ಗಳಲ್ಲಿ ಗುರಿ ತಲುಪಿದರು. ಮೂರನೇ ಸ್ಥಾನ ಪಡೆದ ಜಾನ್ಸನ್ 3 ನಿ. 39.74 ನಿ.ಗಳನ್ನು ತೆಗೆದುಕೊಂಡರು. ಕೊನೆಯ ಲ್ಯಾಪ್‌ನಲ್ಲಿ ವೇಗ ಹೆಚ್ಚಿಸಿಕೊಂಡ ಕತಾರ್‌ನ ಮೊಹಮ್ಮದ್ ಅಲಗರನಿ (3 ನಿ. 38.36 ಸೆ.) ಚಿನ್ನ ಜಯಿಸಿದರು.

ಹರ್ಮಿಲನ್ ಅವರು 4 ನಿ. 12.74 ಸೆ.ಗಳಲ್ಲಿ ಎರಡನೆಯವರಾಗಿ ಗುರಿ ತಲುಪಿದರು. ಚಿನ್ನದ ಪದಕ ಗೆದ್ದ ಬಹರೇನ್‌ನ ವಿನ್ಫ್ರೆಡ್ ಮುತಿಲೆ 4 ನಿ. 11.65 ಸೆ.ಗಳಲ್ಲಿ ಕ್ರಮಿಸಿದರು.


ಸೀಮಾ ಪೂನಿಯಾ

ಹರ್ಡಲ್ಸ್ ವಿವಾದ: ಜ್ಯೋತಿ ಯರ್ರಾಜಿಗೆ ಬೆಳ್ಳಿ

ಭಾರತದ ಜ್ಯೋತಿ ಯರ್ರಾಜಿ ಅವರು ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಗೆದ್ದರು. ಈ ಓಟ ವಿವಾದಕ್ಕೆ ಕಾರಣವಾಯಿತು. ಸೂಚನೆ ಸಿಗುವ ಮುಂಚೆಯೇ ಓಟ ಆರಂಭಿಸಿದ್ದಕ್ಕೆ (ಫೌಲ್) ಚೀನಾದ ವು ಯಾನಿ ಅವರನ್ನು ಅನರ್ಹಗೊಳಿಸಲಾಯಿತು. ಆ ಬಳಿಕ ತೀರ್ಪುಗಾರರು ಅವರಿಗೆ ಓಡಲು ಅವಕಾಶ ನೀಡಿದರು.

ಚೀನಾದ ಲಿನ್ ಯುವೆಯಿ (12.74 ಮೀ.) ಚಿನ್ನ ಗೆದ್ದರು. ಯಾನಿ (12.91 ಸೆ.) ಮತ್ತು ಜ್ಯೋತಿ (13.04 ಸೆ.) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದರು. ಆದರೆ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ತಕ್ಷಣವೇ ತನ್ನ ಪ್ರತಿಭಟನೆ ಸಲ್ಲಿಸಿದ್ದರಿಂದ ಯಾನಿ ಅವರನ್ನು ಅನರ್ಹಗೊಳಿಸಲಾಯಿತು. ಇದರಿಂದ ಜ್ಯೋತಿ ಅವರಿಗೆ ಎರಡನೇ ಸ್ಥಾನ ಲಭಿಸಿತು.

'ಪ್ರಮುಖ ಕೂಟಗಳಲ್ಲಿ ಈ ರೀತಿಯ ಗೊಂದಲ ಮರುಕಳಿಸಬಾರದು. ಆದ್ದರಿಂದ ಈ ವಿಷಯವನ್ನು ಸಂಬಂಧಪಟ್ಟವರ ಗಮನಕ್ಕೆ ತರಲಾಗುವುದು' ಎಂದು ಎಎಫ್‌ಐ ಅಧ್ಯಕ್ಷ ಆದಿಲ್ ಸುಮರಿವಾಲಾ ತಿಳಿಸಿದರು.


ಚಿನ್ನ ಗೆದ್ದ ಸ್ಪರ್ಧಿಯನ್ನು ಅಭಿನಂದಿಸಿದ ಹರ್ಮಿಲನ್ ಬೇನ್ಸ್


ತಜಿಂದರ್‌ಪಾಲ್ ಸಿಂಗ್ ತೂರ್

ಹ್ಯಾಮರ್ ತಗುಲಿ ಸಿಬ್ಬಂದಿ ಕಾಲಿಗೆ ತೀವ್ರ ಗಾಯ

ಹಾಂಗ್‌ಝೌ (ಎಎಫ್‌ಪಿ): ಹ್ಯಾಮರ್ ಥ್ರೊ ಸ್ಪರ್ಧೆಯ ವೇಳೆ ಕುವೈತ್‌ನ ಅಲಿ ಝುನ್ವಾಕಿ ಅವರು ಎಸೆದ ಹ್ಯಾಮರ್ ತಾಗಿ ಅಥ್ಲೆಟಿಕ್ಸ್ ಸಿಬ್ಬಂದಿಯೊಬ್ಬರ ಕಾಲು ಮುರಿದಿದೆ.

ಈ ಸಿಬ್ಬಂದಿ ಥ್ರೊ ಮಾಡುವ ಸರ್ಕಲ್‌ನ ಆಚೆ ಚೇರ್‌ನಲ್ಲಿ ಕುಳಿತಿದ್ದರು. ಶನಿವಾರ ಸಂಜೆ ಹ್ಯಾಮರ್ ಥ್ರೊ ಫೈನಲ್ ಸ್ಪರ್ಧೆಯ ವೇಳೆ ತಮ್ಮ ಯತ್ನ ವಿಫಲವಾದ ಮೇಲೆ ಹ್ಯಾಮರ್ ಅನ್ನು ಬಲೆಯ ಬಳಿ ಎಸೆದರು. ಆದರೆ ಲೋಹದ ಚೆಂಡು ರಕ್ಷಣಾ ಬಲೆಯ ಬಳಿ ನಿಲ್ಲದೇ ಆಚೆ ಕುಳಿತಿದ್ದ ಸಿಬ್ಬಂದಿಗೆ ಕಾಲಿಗೆ ಬಡಿಯಿತು. ಇದು ಏಳು ಕೆ.ಜಿ. (15 ಪೌಂಡ್) ತೂಕವಿದ್ದು ಸಿಬ್ಬಂದಿ ಬಲ ಕಾಲಿಗೆ ಜೋರಾಗಿಯೇ ತಾಗಿತು.

ಕೂಡಲೇ ಜನ್ವಾಕಿ ಅವರು ನರಳಾಡುತ್ತಿದ್ದ ಸಿಬ್ಬಂದಿ ನೆರವಿಗೆ ಧಾವಿಸಿದರು. 62 ವರ್ಷದ ಗಾಯಾಳುವನ್ನು ತುರ್ತು ಚಿಕಿತ್ಸೆಗೆ ಸ್ಟ್ರೆಚರ್ ಮೇಲೆ ಕರೆದೊಯ್ಯಲಾಯಿತು. ಅಲ್ಲಿಂದ ಆಸ್ಪತ್ರೆಗೆ ದಾಖಲಿಸಲಾಯಿತು. 'ಗಾಯಾಳು ಸ್ಥಿತಿ ಸ್ಥಿರವಾಗಿದ್ದು, ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲು ಯೋಜಿಸಲಾಗಿದೆ' ಎಂದು ಚೀನಾದ ಸರ್ಕಾರಿ ಮಾಧ್ಯಮ ತಿಳಿಸಿದೆ.

2006ರ ದೋಹಾ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ ಝುನ್ವಾಕಿ ಅವರು ಇಲ್ಲಿ ಎಂಟನೇ ಸ್ಥಾನ ಪಡೆದರು. ಚೀನಾದ ವಾಂಗ್ ಕ್ವಿ ಚಿನ್ನ ಗೆದ್ದರು.



ಬೆಳ್ಳಿ ಗೆದ್ದ ಅಜಯ್ ಕುಮಾರ್ ಮತ್ತು ಕಂಚು ಗೆದ್ದ ಜಿನ್ಸನ್ ಜಾನ್ಸನ್ (ಎಡಚಿತ್ರ) ಬೆಳ್ಳಿ ಗೆದ್ದ ಜ್ಯೋತಿ ಯರ್ರಾಜಿ –ಎಎಫ್‌ಪಿ/ ಪಿಟಿಐ ಚಿತ್ರ

ಬಾಕ್ಸಿಂಗ್: ನಿಖತ್ ಝರೀನ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಝರೀನ್ ಅವರ ಗೆಲುವಿನ ಓಟಕ್ಕೆ ತೆರೆಬಿತ್ತು. ಬಾಕ್ಸಿಂಗ್‌ನ ಮಹಿಳೆಯರ 50 ಕೆ.ಜಿ. ವಿಭಾಗದಲ್ಲಿ ಅವರು ಸೆಮಿಫೈನಲ್‌ನಲ್ಲಿ ಸೋತು ಕಂಚು ತಮ್ಮದಾಗಿಸಿಕೊಂಡರು.

ಭಾನುವಾರ ನಡೆದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ನಿಖತ್ 2-3 ರಿಂದ ಥಾಯ್ಲೆಂಡ್‌ನ ರಕ್ಸತ್ ಚುತಾಮತ್ ಕೈಯಲ್ಲಿ ಪರಾಭವಗೊಂಡರು. ನಿಖತ್ ಅವರು 2021ರ ಅಕ್ಟೋಬರ್ ಬಳಿಕ ಯಾವುದೇ ಬೌಟ್‌ನಲ್ಲಿ ಸೋತಿರಲಿಲ್ಲ. ಆದರೆ ರಕ್ಸತ್ ವಿರುದ್ಧ ಅವರಿಗೆ ನಿರಾಸೆ ಕಾಡಿತು.

ಪರ್ವಿನ್‌ಗೆ ಒಲಿಂಪಿಕ್ ಕೋಟಾ: ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಪರ್ವೀನ್ ಹೂಡ ಅವರು ಸೆಮಿಫೈನಲ್ ತಲುಪುವ ಮೂಲಕ ಭಾರತಕ್ಕೆ ಮತ್ತೊಂದು ಪದಕ ಖಾತರಿಪಡಿಸಿದರು. ಅಷ್ಟೇ ಅಲ್ಲ, 57 ಕೆ.ಜಿ. ವಿಭಾಗದಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಕಾದಿರಿಸಿದರು.


ನಿಖತ್ ಝರೀನ್

ಕಳೆದ ವರ್ಷ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 63 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದ ಕ್ವಾರ್ಟರ್‌ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಸಿತೊರಾ ತುರ್ದಿಬೆಕೊವಾ ಅವರನ್ನು ಸೋಲಿಸಿದರು. ರೆಫ್ರಿಗಳ ಒಮ್ಮತದ ತೀರ್ಪಿನಲ್ಲಿ ಪರ್ವಿನ್ ವಿಜಯಿಯಾದರು.

ಆದರೆ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದ ಜೈಸ್ಮಿನ್ ಲಂಬೋರಿಯಾ ಮಹಿಳೆಯರ 60 ಕೆ.ಜಿ. ವಿಭಾಗದಲ್ಲಿ ಹೊರಬಿದ್ದರು. ಉತ್ತರ ಕೊರಿಯಾದ ಬಾಕ್ಸರ್ ವಾನ್ ಉಗ್ಯಾಂಗ್ ಎದುರು ಆರ್‌ಎಸ್‌ಸಿ (ರೆಫ್ರಿ ಸ್ಟಾಪ್ಸ್ ಕಂಟೆಸ್ಟ್) ಆಧಾರದಲ್ಲಿ ಸೋತರು. ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ ಪರ್ವೀನ್ ಆರಂಭದಿಂದಲೇ ಲಯದಲ್ಲಿದ್ದರು. ದೀರ್ಘ ಬಾಹುಗಳನ್ನು ಬಳಸಿ ಅಂತರದಿಂದಲೇ 21 ವರ್ಷದ ಎದುರಾಳಿಯತ್ತ ಪಂಚ್‌ಗಳನ್ನು ಪ್ರಯೋಗಿಸಿದರು.

ನಿಖತ್ ಝರೀನ್ (50 ಕೆ.ಜಿ), ಪ್ರೀತಿ ಪವಾರ್ (54 ಕೆ.ಜಿ), ಲವ್ಲಿನಾ ಬೋರ್ಗೊಹೈನ್ (75 ಕೆ.ಜಿ) ಮತ್ತು ನರೇಂದರ್ ಬೆರ್ವಾಲ್ (+92 ಕೆ.ಜಿ) ಅವರು ಈಗಾಗಲೇ ತಮ್ಮ ತಮ್ಮ ಕೆಟಗರಿಗಳಲ್ಲಿ ಒಲಿಂಪಿಕ್ ಕೋಟಾದಲ್ಲಿ ಪ್ಯಾರಿಸ್‌ನಲ್ಲಿ ಭಾಗವಹಿಸುವ ಅರ್ಹತೆ ಗಳಿಸಿದ್ದಾರೆ.

ಶೂಟಿಂಗ್ ಸ್ಪರ್ಧೆಗಳಿಗೆ ತೆರೆ • ಒಟ್ಟು 22 ಪದಕಗಳೊಂದಿಗೆ ಭಾರತದ ಅತ್ಯುತ್ತಮ ಸಾಧನೆ

ಟ್ರ್ಯಾಪ್ ವಿಭಾಗ: ಪುರುಷರ ತಂಡಕ್ಕೆ ಚಿನ್ನ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಶೂಟಿಂಗ್ ಸ್ಪರ್ಧೆಯ ಕೊನೆಯ ದಿನವೂ ಭಾರತದ ಶೂಟರ್‌ಗಳು ಪಾರಮ್ಯ ಮೆರೆದು ತಲಾ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದುಕೊಂಡರು.

ಪುರುಷರ ಟ್ರ್ಯಾಪ್ ವಿಭಾಗದಲ್ಲಿ ಚಿನ್ನ ಜಯಿಸಿದರೆ, ಮಹಿಳಾ ತಂಡ ಬೆಳ್ಳಿ ತಂದುಕೊಟ್ಟಿತು. ಪುರುಷರ ವೈಯಕ್ತಿಕ ವಿಭಾಗದಲ್ಲಿ ಕಿನಾನ್ ಚೆನಾಯ್ ಅವರು ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಏಳು ಚಿನ್ನ ಸೇರಿದಂತೆ ಒಟ್ಟು 22 ಪದಕಗಳೊಂದಿಗೆ ಭಾರತದ ಶೂಟರ್‌ಗಳು ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಅತ್ಯುತ್ತಮ ಸಾಧನೆ ಮಾಡಿದರು.

ಕೊನೆಯ ದಿನವಾದ ಭಾನುವಾರ ನಡೆದ ಪುರುಷರ ಟ್ರ್ಯಾಪ್ ವಿಭಾಗದಲ್ಲಿ ಪೃಥ್ವಿರಾಜ್ ತೊಂಡೈಮನ್ (119), ಕಿನಾನ್ ಚೆನಾಯ್ (122) ಮತ್ತು ಜೊರಾವರ್ ಸಿಂಗ್ ಸಂಧು (120) ಅವರನ್ನೊಳಗೊಂಡ ಭಾರತ ತಂಡ ಒಟ್ಟು 361 ಪಾಯಿಂಟ್ಸ್ ಕಲೆಹಾಕಿ ಏಷ್ಯನ್ ದಾಖಲೆಯೊಂದಿಗೆ ಅಗ್ರಸ್ಥಾನ ಗಳಿಸಿತು.

ಖಾಲೆದ್ ಅಲ್‌ಮುದಾಫ್, ತಲಾಲ್ ಅಲ್‌ರಾಶಿದಿ ಮತ್ತು ಅಬ್ದುಲ್‌ರಹ್ಮಾನ್ ಅಲ್‌ಫೈಹಾನ್ ಅವರನ್ನೊಳಗೊಂಡ ಕುವೈತ್ ತಂಡ (359) ಎರಡನೇ ಸ್ಥಾನ ಪಡೆದರೆ, ಆತಿಥೇಯ ಚೀನಾ (354) ಕಂಚು ತನ್ನದಾಗಿಸಿಕೊಂಡಿತು.


ಮಹಿಳೆಯರ ಟ್ರ್ಯಾಪ್ ವಿಭಾಗದಲ್ಲಿ ಬೆಳ್ಳಿ ಗೆದ್ದ (ಎಡದಿಂದ) ರಾಜೇಶ್ವರಿ ಕುಮಾರಿ, ಮನೀಷಾ ಮತ್ತು ಪ್ರೀತಿ –ಎಪಿ ಚಿತ್ರ

ಕಿನಾನ್‌ಗೆ ಕಂಚಿನ ಪದಕ

ತಂಡ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಟ್ರ್ಯಾಪ್ ಶೂಟರ್‌ಗಳಿಗೆ ವೈಯಕ್ತಿಕ ವಿಭಾಗದಲ್ಲಿ ಗುರಿ ತಪ್ಪಿತು. ಕಿನಾನ್ ಚೆನಾಯ್ ಕಂಚು ಗೆಲ್ಲಲಷ್ಟೇ ಯಶಸ್ವಿಯಾದರು. ಅವರು 40 ರಲ್ಲಿ 32 ಪಾಯಿಂಟ್ಸ್ ಗಳಿಸಿದರು.

ಆರು ಶೂಟರ್‌ಗಳನ್ನೊಳಗೊಂಡ ಫೈನಲ್‌ಗೆ ಕಿನಾನ್ ಮತ್ತು ಜೊರಾವರ್ ಸಿಂಗ್ ಸಂಧು ಅರ್ಹತೆ ಪಡೆದುಕೊಂಡಿ ದ್ದರು. 30 ರಲ್ಲಿ 23 ಪಾಯಿಂಟ್ಸ್ ಗಳನ್ನು ಕಲೆಹಾಕಿದ ಜೊರಾವರ್ ಐದನೇ ಸ್ಥಾನಕ್ಕೆ ಜಾರಿದರು. ಚೀನಾದ ಕ್ವಿ ಯಿಂಗ್ (50 ರಲ್ಲಿ 47) ಮತ್ತು ಕುವೈತ್‌ನ ತಲಾಲ್ ಅಲ್‌ರಾಶಿದಿ (50 ರಲ್ಲಿ 45) ಅವರು ಕ್ರಮವಾಗಿ ಬೆಳ್ಳಿ ಹಾಗೂ ಚಿನ್ನ ಗೆದ್ದುಕೊಂಡರು. ಮಹಿಳೆ ಯರ ವೈಯಕ್ತಿಕ ವಿಭಾಗ ದಲ್ಲಿ ಫೈನಲ್ ಪ್ರವೇಶಿಸಿದ್ದ ಮನೀಷಾಗೆ 6ನೇ ಸ್ಥಾನ ಲಭಿಸಿತು.

ಇದಕ್ಕೂ ಮುನ್ನ ನಡೆದಿದ್ದ ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಭಾರತ ತಂಡ (337) ಬೆಳ್ಳಿ ಗೆದ್ದುಕೊಂಡಿತು. ಮನೀಷಾ ಕೀರ್ (114), ಪ್ರೀತಿ ರಜಕ್ (112) ಮತ್ತು ರಾಜೇಶ್ವರಿ ಕುಮಾರಿ (111) ಅವರು ನಿಖರ ಗುರಿ ಹಿಡಿಯುವಲ್ಲಿ ಯಶಸ್ವಿಯಾದರು.

ಕ್ವಿಂಗಿಯಾನ್ ಲಿ, ಸುಯಿಸುಯಿ ವು ಮತ್ತು ಕ್ಸಿಂಗ್‌ಜು ಝಾಂಗ್ ಅವರನ್ನೊಳಗೊಂಡ ಆತಿಥೇಯ ಚೀನಾ ಒಟ್ಟು 357 ಪಾಯಿಂಟ್ಸ್‌ಗೊಂದಿಗೆ ಚಿನ್ನ ಜಯಿಸಿತು. ಈ ಹಾದಿಯಲ್ಲಿ ವಿಶ್ವದಾಖಲೆ ಮತ್ತು ಏಷ್ಯನ್ ಗೇಮ್ಸ್ ದಾಖಲೆಯನ್ನೂ ತನ್ನ ಹೆಸರಿಗೆ ಬರೆಯಿಸಿಕೊಂಡಿತು. ಕಂಚಿನ ಪದಕ ಕಜಕಸ್ತಾನದ (336) ಪಾಲಾಯಿತು.

ರಾಜ್ಯದ ಆಟಗಾರ್ತಿಗೆ ಕೈತಪ್ಪಿದ ಚಿನ್ನ • ಮಹಿಳಾ ತಂಡಕ್ಕೆ 4ನೇ ಸ್ಥಾನ

ಗಾಲ್ಫ್: ಅದಿತಿ ಅಶೋಕ್‌ಗೆ ಐತಿಹಾಸಿಕ ಬೆಳ್ಳಿ


ಅದಿತಿ ಅಶೋಕ್

ಹಾಂಗ್‌ಝೌ (ಪಿಟಿಐ): ಅಂತಿಮ ದಿನದ ಸ್ಪರ್ಧೆಯಲ್ಲಿ ಎಡವಿದರೂ ಬೆಳ್ಳಿ ಗೆದ್ದುಕೊಂಡ ಗಾಲ್ಫರ್ ಅದಿತಿ ಅಶೋಕ್ ಅವರು ಚಾರಿತ್ರಿಕ ಸಾಧನೆ ತಮ್ಮದಾಗಿಸಿಕೊಂಡರು. ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಮಹಿಳಾ ವಿಭಾಗದ ಗಾಲ್ಫ್‌ನಲ್ಲಿ ಭಾರತಕ್ಕೆ ಲಭಿಸಿದ ಮೊದಲ ಪದಕ ಇದು.

ಬೆಂಗಳೂರಿನ ಅದಿತಿ, ಮೂರನೇ ಸುತ್ತಿನ ಬಳಿಕ ಅಗ್ರಸ್ಥಾನದಲ್ಲಿದ್ದರು. ಎರಡನೇ ಸ್ಥಾನದಲ್ಲಿರುವ ಸ್ಪರ್ಧಿಗಿಂತ ಏಳು ಶಾಟ್‌ಗಳ ಮುನ್ನಡೆಯಲ್ಲಿದ್ದ ಅವರು ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದರು. ಆದರೆ ಭಾನುವಾರ ನಡೆದ ಕೊನೆಯ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು 77 ಸ್ಟ್ರೋಕ್‌ಗಳನ್ನು ಬಳಸಿಕೊಂಡರು. ಒಟ್ಟು 271 ಸ್ಕೋರ್‌ಗಳೊಂದಿಗೆ ಎರಡನೇ ಸ್ಥಾನಕ್ಕೆ ಕುಸಿತ ಕಂಡರು.

68 ಸ್ಟ್ರೋಕ್‌ಗಳೊಂದಿಗೆ ಅಂತಿಮ ದಿನದ ಸ್ಪರ್ಧೆ ಕೊನೆಗೊಳಿಸಿದ ಥಾಯ್ಲೆಂಡ್‌ನ 21 ವರ್ಷದ ಆಟಗಾರ್ತಿ ಅರ್ಪಿಚಯ ಯುಬೊಲ್ (269) ಚಿನ್ನದ ಪದಕ ಗೆದ್ದರೆ, ಕೊರಿಯಾದ ಯು ಹ್ಯುನ್‌ಜೊ (272) ಕಂಚು ಜಯಿಸಿದರು.

ಭಾರತದ ಇತರ ಇಬ್ಬರು ಸ್ಪರ್ಧಿಗಳಾದ ಪ್ರಣವಿ ಅರಸ್ (75) ಮತ್ತು ಅವನಿ ಪ್ರಶಾಂತ್ (76) ಅವರೂ ಅಂತಿಮ ದಿನ ಲಯ ಕಂಡುಕೊಳ್ಳುವಲ್ಲಿ ವಿಫಲರಾದರು.

ಇದರಿಂದ ತಂಡ ವಿಭಾಗದಲ್ಲಿ ಭಾರತ, ನಾಲ್ಕನೇ ಸ್ಥಾನಕ್ಕೆ ಕುಸಿತ ಕಂಡು ಪದಕ ವಂಚಿತವಾಯಿತು. ಪ್ರಣವಿ ಮತ್ತು ಅವನಿ ಅವರು ವೈಯಕ್ತಿಕ ವಿಭಾಗದಲ್ಲಿ ಕ್ರಮವಾಗಿ 13 ಮತ್ತು ಜಂಟಿ 18ನೇ ಸ್ಥಾನ ಪಡೆದುಕೊಂಡರು.

ಪುರುಷರ ವಿಭಾಗದಲ್ಲಿ ಭಾರತಕ್ಕೆ ಪದಕ ದಕ್ಕಲಿಲ್ಲ. ಅನಿರ್ಬನ್ ಲಾಹಿರಿ (65-67-74-68) ಅವರು ಜಂಟಿ 12ನೇ ಸ್ಥಾನ ಪಡೆದರು. ಎಸ್‌ಎಸ್‌ಪಿ ಚೌರಾಸಿಯ ಅವರು ಜಂಟಿ 28ನೇ ಸ್ಥಾನಕ್ಕೆ ಕುಸಿತ ಕಂಡರು. ಖಾಲಿನ್ ಜೋಷಿ ಮತ್ತು ಶುಭಾಂಕರ್ ಶರ್ಮಾ ಅವರು ಕ್ರಮವಾಗಿ ಜಂಟಿ 27 ಮತ್ತು 32ನೇ ಸ್ಥಾನ ಗಳಿಸಿದರು.

ತಂಡ ವಿಭಾಗದಲ್ಲಿ ಪುರುಷರು ಏಳನೇ ಸ್ಥಾನ ಪಡೆದರು. ಕೊರಿಯಾ, ಥಾಯ್ಲೆಂಡ್ ಮತ್ತು ಹಾಂಗ್‌ಕಾಂಗ್ ತಂಡಗಳು ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ತಮ್ಮದಾಗಿಸಿಕೊಂಡವು.

'ಈ ಪದಕವು ಭಾರತದಲ್ಲಿ ಗಾಲ್ಫ್ ಕ್ರೀಡೆಗೆ ಹೆಚ್ಚಿನ ಜನಪ್ರಿಯತೆ ಮತ್ತು ಬೆಂಬಲವನ್ನು ತಂದುಕೊಡಬಲ್ಲದು ಎಂಬ ವಿಶ್ವಾಸ ನನ್ನದು' ಎಂದು ಅದಿತಿ ಪ್ರತಿಕ್ರಿಯಿಸಿದರು.

'ಮಹಿಳೆಯರ ತಂಡ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದು, ಒಂದು ಸ್ಥಾನದಿಂದ ಪದಕ ಗೆಲ್ಲುವ ಅವಕಾಶ ಕಳೆದುಕೊಂಡಿದ್ದೇವೆ. ಆದರೂ ಈ ಕೂಟದಲ್ಲಿ ಸಾಕಷ್ಟು ಸಕಾರಾತ್ಮಕ ಅಂಶಗಳನ್ನು ಪಡೆದಿದ್ದೇವೆ' ಎಂದರು.